# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮುಂದುವರಿದ ಪಠ್ಯ
## ADVANCED TEXT

ತರಗತಿ

VIII

ಭಾಗ 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VIII (Advanced Text) - Part 1

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA - VIII AT

**Advisor**

| | |
|---|---|
| Sri. Shivashankara P. | Asst. Professor, GPM College, Manjeshwar |

**Chairman**

| | |
|---|---|
| Sri. Ram Bhat C.H. | Rtd. HOD, Government College, Kasaragod |

**Experts**

| | |
|---|---|
| Dr. Shrikrishna Bhat | Rtd. Professor, Government College, Kasaragod |
| Dr. Radhakrishna N. Bellur | Professor, Government College, Kasaragod |

**Participants**

| | |
|---|---|
| Sri. Radhakrishna M | Rtd. Headmaster,Govt.HSS Pandi |
| Smt.Pushpalatha P | Rtd.HSST , B E M HSS Kasaragod |
| Smt.Sharmila A | HSST Jr.Kannada , Govt.HSS Mangalpady |
| Smt. Soumya R | HSST Jr.Kannada , Govt.HSS Bandadka |
| Dr. Subhash Pattaje | HSST Jr.Kannada , SSHSS Sheni |
| Smt. Dayavathi Saliyan | HST Kannada , GHS Moodambail |
| Smt.Mallika G | HST Kannada , GHS Udyawar |
| Smt. Sumithra K | HST Kannada , Govt, HSS Paivalike Nagar |

**Artists**

| | |
|---|---|
| Sri. Prakash P. | Specialist Drawing Teacher, BRC Manjeshwar |
| Sri. Madhusudhanan K V | Drawing Teacher, CKNS GHSS Pilicode |
| Sri. Satheesh | Specialist Drawing Teacher, BRC Kumbala |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


## ಘಟಕ 1 : ಹಸಿರು - ಉಸಿರು 7 - 34

| | | |
|---|---|---|
| • ಮುಂಗಾರು ಗೀತೆ | ಕವನ | ಡಾ. ದೊಡ್ಡರಂಗೇ ಗೌಡ |
| • ಕಾಡುಕೋಣ | ಕತೆ | ಜಿ. ಪಿ. ರಾಜರತ್ನಂ |
| • ಪರಿಸರದ ಉಳಿವು ಬಾಳಿನ ಗೆಲುವು | ಗೀತನಾಟಕ | ಸುಮುಖಾನಂದ ಜಲವಳ್ಳಿ |

## ಘಟಕ 2 : ಜೀವನ ಮೌಲ್ಯ 35 - 54

| | | |
|---|---|---|
| • ಸ್ನೇಹ | ಲೇಖನ | ಶಾಂತಾದೇವಿ ಮಾಳವಾಡ |
| • ಮಂಕುತಿಮ್ಮನ ಕಗ್ಗ | ಮುಕ್ತಕ | ಡಿ. ವಿ. ಗುಂಡಪ್ಪ |
| • ಇಸ್ಲಾಮೀಪುರದಲ್ಲೊಂದು ಯಕ್ಷಗಾನ | ಕತೆ | ಫಕ್ರುದ್ದೀನ್ ಇರುವೈಲ್ |

## ಘಟಕ 3 : ಸಾಧನೆಯ ಶಿಖರದಲ್ಲಿ 55 - 74

| | | |
|---|---|---|
| • ಕೃಪಾ | ಕತೆ | ಬಿ. ಎಸ್. ಗವಿಸ್ವಾಮಿ |
| • ದಾನ ಚಿಂತಾಮಣಿ ಅತ್ತಿಮಬ್ಬೆ | ಕಾವ್ಯ | ರನ್ನ |
| • ಕ್ಯಾಪ್ಟನ್ ಲಕ್ಷ್ಮಿ | ವ್ಯಕ್ತಿ ಪರಿಚಯ | ಕೆ. ಭೈರಪ್ಪ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1. ಹಸಿರು - ಉಸಿರು

ನಿಸರ್ಗಮಾತೆಯ ಮಡಿಲಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳ ಇಂಚರ, ವನ್ಯಜೀವಿಗಳ ಓಡಾಟ, ಕಣ್ಣಿಗೆ ಹಬ್ಬ ನೀಡುವ ಬೆಟ್ಟ - ಗುಡ್ಡ, ನದಿ-ಕಣಿವೆ, ಮರಗಳ ತೋಪು, ಮೈ ಮನಕೆ ತಂಪೆರೆವ ಗಾಳಿ, ನಾಳಿನ ಸುಂದರ ಬದುಕನ್ನು ನೆನೆಯುತ್ತ ಕಾಲ ಕಳೆಯುವ ಮಾನವ ಸಂಕುಲ - ಇವುಗಳೆಲ್ಲವೂ ಪ್ರಕೃತಿಯಲ್ಲಿ ಅಡಕವಾಗಿವೆ.

ಡಾ. ದೊಡ್ಡರಂಗೇಗೌಡರು 'ಮುಂಗಾರು ಗೀತೆ' ಕವನದಲ್ಲಿ ಮಳೆಯ ಆಗಮನದಿಂದ ಇಳೆಯಲ್ಲಾಗುವ ಪರಿವರ್ತನೆಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ರೈತನ ಮನದಲ್ಲಾಗುವ ಸಂತೋಷ, ಕಾನನದಲ್ಲಿ ತೂಗುವ ಹರಿದ್ವರ್ಣ, ಮಣ್ಣಿನ ಕಂಪು ಇವೆಲ್ಲವನ್ನೂ ಈ ಕವನದಲ್ಲಿ ವರ್ಣಿಸಿದ್ದಾರೆ.



ಕಾಡುಕೋಣವೊಂದರ ಸಾತ್ವಿಕ ಸ್ವಭಾವ ವನ್ನೂ ತನ್ನ ಅತಿಯಾದ ಕುಚೇಷ್ಟೆಯಿಂದ ಪ್ರಾಣವನ್ನು ಕಳೆದುಕೊಂಡ ಕಪಿಯ ಮರ್ಕಟ ಬುದ್ಧಿಯನ್ನೂ ಡಾ. ಜಿ. ಪಿ. ರಾಜರತ್ನಂ ಅವರ 'ಕಾಡುಕೋಣ' ಕತೆಯು ಸೊಗಸಾಗಿ ನಿರೂಪಿಸಿದೆ.

ಸ್ವಚ್ಛಂದವಾದ ಕಾನನದಲ್ಲಿ ಮರಗಡುಕ, ಯಂತ್ರಾಸುರ, ಮೈಕಾಸುರ, ಪ್ಲಾಸ್ಟಿಕಾಸುರ ಮತ್ತು ರೋಗಪ್ರಸಾರಕ ಸೊಳ್ಳೆ ಇವುಗಳೆಲ್ಲವೂ ಪ್ರಕೃತಿಮಾತೆಯನ್ನು ಸುತ್ತುಗಟ್ಟಿ ಅಟ್ಟಹಾಸ ಬೀರಿವೆ. ಈ ದುಷ್ಟರನ್ನೆಲ್ಲಾ ಕಂಡ ಪ್ರಕೃತಿಮಾತೆ ನರಳುತ್ತಾ ಕಣ್ಣೀರಿಟ್ಟು ರೋದಿಸುವಳು. ಆಗ ಕಂದರು ಆಕೆಗೆ ನಮಿಸಿ "ನಿನ್ನ ರಕ್ಷಣೆಗಾಗಿ ನಾವಿದ್ದೇವೆ" ಎನ್ನುವ ಭರವಸೆಯನ್ನು ನೀಡುವರು. 'ಪ್ರಕೃತಿ ಮಡಿಲ ಹಸಿರಾಗಿಸಿ ನಮ್ಮ ಬಾಳ ನವಿರಾಗಿಸಿ' ಎಂಬ ಸಂದೇಶವು 'ಪರಿಸರದ ಉಳಿವು ಬಾಳಿನ ಗೆಲುವು' ಎಂಬ ಗೀತನಾಟಕದಲ್ಲಿದೆ. ಪ್ರಕೃತಿಯನ್ನು ಸಂರಕ್ಷಿಸುವ ಎಲ್ಲಾ ವಿಚಾರಗಳನ್ನೊಳಗೊಂಡ ಪಠ್ಯವಸ್ತು 'ಹಸಿರು - ಉಸಿರು' ಎಂಬ ಘಟಕದಲ್ಲಿದೆ. 'ಪರಿಸರದಲ್ಲಿರುವ ಚರಾಚರ ವಸ್ತುಗಳನ್ನು, ಸಕಲ ಜೀವಜಾಲಗಳನ್ನು ಸಂರಕ್ಷಿಸುವ ಜವಾಬ್ದಾರಿಯು ನಮ್ಮ ಮೇಲಿದೆ' ಎಂಬ ಆಶಯವನ್ನು 'ಹಸಿರು - ಉಸಿರು' ಎಂಬ ಘಟಕ ಒಳಗೊಂಡಿದೆ.



# ನುಡಿಮುತ್ತುಗಳು

- ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ.

- ಪ್ರಕೃತಿ ನಮ್ಮ ಬದುಕಿನ ಭಾಗವಲ್ಲ, ನಾವು ಪ್ರಕೃತಿಯ ಒಂದು ಭಾಗ.

*- ಕೆ. ಪಿ. ಪೂರ್ಣಚಂದ್ರ ತೇಜಸ್ವಿ*

- ಪ್ರಕೃತಿ ಪ್ರತಿಯೊಬ್ಬ ಮನುಷ್ಯನ ಅಗತ್ಯಗಳನ್ನು ಪೂರೈಸುತ್ತದೆಯೇ ಹೊರತು ಆತನ ದುರಾಸೆಯನ್ನಲ್ಲ.

*- ಮಹಾತ್ಮ ಗಾಂಧಿ*

- 'ಧರಣಿ ನಮ್ಮ ತಾಯಿ. ನಾವು ಇದರ ರಕ್ಷಣೆಗೆ ಬದ್ಧರಾಗಿರಬೇಕು'

*- ಸುಂದರ ಲಾಲ್ ಬಹುಗುಣ*

- ಈ ಮೇಲಿನ ನುಡಿಮುತ್ತುಗಳನ್ನು ಓದಿ, ನಿಮ್ಮ ಅನಿಸಿಕೆಯನ್ನು ಬರೆಯಿರಿ.



# ಮುಂಗಾರು ಗೀತೆ

- ಡಾ. ದೊಡ್ಡರಂಗೇಗೌಡ

ಅಸೀಮ ರೂಪಿ ಅಂಬರದಲ್ಲಿ
ಮುಂಗಾರು ಮೂಡಿದೆ
ವಸುಂಧರೆಯ ಹೂ ಮೈಯಲ್ಲಿ
ಹೊನ್ನಾರು ಹೂಡಿದೆ !

ಮಸೆವ ಬಿಸಿಲು ಮಾಗಿರುವಲ್ಲಿ
ಮಂದಹಾಸ ಕೂಡಿದೆ
ಹಸಿದ ರೈತ ಸಂಕುಲದಲ್ಲಿ
ಹೊಸ ಆಸೆ ಹಾಡಿದೆ !

ಅಗಮ್ಯ ನೆಲೆಯ ಕಾನನದಲ್ಲಿ
ಹರಿದ್ವರ್ಣ ತೂಗಿದೆ
ಅದಮ್ಯ ಸಿರಿಯ ಸಂಭ್ರಮದಲ್ಲಿ
ಜೀರುಂಡೆ ಕೂಗಿದೆ.

ವರುಣ ಬರುವ ಆವೇಶದಲ್ಲಿ
ದುಂದುಭಿ ಮೊಳಗಿದೆ
ಹರುಷ ತರುವ ಮಾರುತನಲ್ಲಿ
ಮಣ್ಣಿನಾ ಕಂಪಿದೆ !

ಅನನ್ಯ ಬಗೆಯ ಬಾಂದಳದಲ್ಲೂ
ಸಂತೋಷ ಹೊಮ್ಮಿದೆ
ಅನಿತ್ಯ ಬದುಕ ಗೊಂದಲದಲ್ಲೂ
ಉನ್ಮಾದ ಚಿಮ್ಮಿದೆ !

ಅಸಂಖ್ಯ ಹೊದರ ತರುಲತೆಯಲ್ಲೂ
ಲಾವಣ್ಯ ಮಿಂಚಿದೆ
ಅನೂಹ್ಯ ಪದರ ಕಾರ್ಮುಗಿಲಲ್ಲೂ
ಹೂ ಮಳೆಯ ಸಂಚಿದೆ.

ಮಹಾಪೂರದ ನಿರೀಕ್ಷೆಯಲ್ಲೂ
ಕಾತರವೇ ಕಾದಿದೆ
ಗರುಕೆ ಚಿಗುರ ಅಂಕುರದಲ್ಲೂ
ಆನಂದ ತುಂಬಿದೆ !

ಹೊಸನೇಗಿಲ ಮುನ್ನಡೆಯಲ್ಲೂ
ಋತುಮಾನದ ರಂಗಿದೆ
ನವ ಮಾನವ ಮುನ್ನೋಟದಲ್ಲೂ
ಕಾಲಚಕ್ರ ಉರುಳಿದೆ !

## ಕವಿ ಪರಿಚಯ



ಡಾ. ದೊಡ್ಡರಂಗೇಗೌಡರು 'ಮನುಜ' ಕಾವ್ಯನಾಮದಿಂದ ಪ್ರಸಿದ್ಧರಾದವರು. ಇವರು ೦೭-೦೨-೧೯೪೬ರಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಕೆ. ರಂಗೇಗೌಡ, ತಾಯಿ ಅಕ್ಕಮ್ಮ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಪದವಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು. ಇವರ 'ಕನ್ನಡ ನವೋದಯ ಕಾವ್ಯ - ಒಂದು ಪುನರ್ ಮೌಲ್ಯಮಾಪನ' - ಎಂಬ ಸಂಶೋಧನ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇವರು ಗೀತ ರಚನಕಾರ, ರಾಜಕಾರಣಿ, ಸಾಹಿತಿ, ನಿವೃತ್ತ ಪ್ರಾಧ್ಯಾಪಕ. ಕಣ್ಣು ನಾಲಗೆ ಕಡಲು, ಜಗುಲಿ ಹತ್ತಿ ಇಳಿದು, ನಾಡಾಡಿ, ಮೌನಸ್ಪಂದನ ಮುಂತಾದವು ಇವರ ಕವನ ಸಂಕಲನಗಳು. ವಿಶ್ವಮುಖಿ, ದಾರಿದೀಪಗಳು, ವಿಚಾರವಾಹಿನಿ ಇವರ ಗದ್ಯಕೃತಿಗಳು. ಅನನ್ಯಕಾಡು, ಅಮೇರಿಕ, ಪಿರಮಿಡ್‌ಗಳ ಪರಿಸರದಲ್ಲಿ - ಇವರ ಪ್ರವಾಸ ಸಾಹಿತ್ಯಗಳಾಗಿವೆ. ೧೯೮೨ ರಲ್ಲಿ 'ಆಲೆಮನೆ' ಚಿತ್ರಕ್ಕಾಗಿ ಬರೆದ ಭಾವಗೀತೆಗೆ ವಿಶೇಷ ಗೀತೆ ಪ್ರಶಸ್ತಿ ಹಾಗೂ ಬೆಳ್ಳಿ ಪದಕ ಲಭಿಸಿದೆ. ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುದ್ದಣ ಕಾವ್ಯ ಪ್ರಶಸ್ತಿಗಳು ಅವರಿಗೆ ಲಭಿಸಿವೆ. 'ಮುಂಗಾರು ಗೀತೆ' ಕವನವನ್ನು ಅವರ 'ಗಾನ-ಯಾನ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮುಂಗಾರು ಮೂಡಿದಾಗ ವಸುಂಧರೆಯ ಹೂ ಮೈಯಲ್ಲಿ ಏನಾಯಿತು?
2. 'ಹಸಿದ ರೈತ ಸಂಕುಲದಲ್ಲಿ ಹೊಸ ಆಸೆ ಹಾಡಿದೆ' ಎಂದು ಕವಿ ಹೇಳಲು ಕಾರಣವೇನು?
3. ಅಗಮ್ಯ ನೆಲೆಯ ಕಾನನದಲ್ಲಿ ಕಾಣುವ ವಿಶೇಷತೆಯೇನು?
4. ಮುಂಗಾರಿನ ಆರಂಭದಲ್ಲಿ ಲಾವಣ್ಯ ಎಲ್ಲಿ ಮಿಂಚಿದೆ?
5. ಹೂಮಳೆಯ ಸಂಚು ಎಲ್ಲಿದೆ ಎಂದು ಕವಿ ಹೇಳಿದ್ದಾರೆ?

## ಸುಶ್ರಾವ್ಯವಾಗಿ ಹಾಡಿರಿ

'ಮುಂಗಾರು ಗೀತೆ' ಕವನವನ್ನು ರಾಗಬದ್ಧವಾಗಿ ಹಾಡಿರಿ.

## ಆಸ್ವಾದನ ಟಿಪ್ಪಣಿ ಬರೆಯಿರಿ

'ಮುಂಗಾರು ಗೀತೆ' ಕವನದ ಆಸ್ವಾದನ ಟಿಪ್ಪಣಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಪದ್ಯದ ಸಾಲುಗಳ ಸ್ವಾರಸ್ಯ ಬರೆಯಿರಿ.

ವರುಣ ಬರುವ ಆವೇಶದಲ್ಲಿ
ದುಂದುಭಿ ಮೊಳಗಿದೆ
ಹರುಷ ತರುವ ಮಾರುತನಲ್ಲಿ
ಮಣ್ಣಿನಾ ಕಂಪಿದೆ

## ವರ್ಣನೆ ಬರೆಯಿರಿ

ಮುಂಗಾರುಮಳೆ ನೀಡುವ ಆನಂದಾನುಭವವು 'ಮುಂಗಾರು ಗೀತೆ' ಕವನದಲ್ಲಿ ವರ್ಣಿತವಾಗಿದೆ. ಇದರ ಹಿನ್ನೆಲೆಯಲ್ಲಿ ನೀವು ಆಸ್ವಾದಿಸಿದ ಮಳೆಗಾಲದ ಸೌಂದರ್ಯವನ್ನು ವರ್ಣಿಸಿ ಒಂದು ವರ್ಣನ ಟಿಪ್ಪಣಿಯನ್ನು ಬರೆಯಿರಿ.

## ಪರ್ಯಾಯ ಪದ ಬರೆಯಿರಿ

ಈ ಕೆಳಗಿನ ಕವನ ಸಾಲುಗಳಲ್ಲಿ ಅಡಿಗೆರೆ ಎಳೆದಿರುವ ಪದಗಳಿಗೆ ಪರ್ಯಾಯ ಪದಗಳನ್ನು ಬರೆಯಿರಿ.

- ಅಸೀಮ ರೂಪಿ <u>ಅಂಬರ</u>ದಲ್ಲಿ
  ಮುಂಗಾರು ಮೂಡಿದೆ

- ಹರುಷ ತರುವ <u>ಮಾರುತ</u>ನಲ್ಲಿ
  ಮಣ್ಣಿನಾ ಕಂಪಿದೆ

- ಅಗಮ್ಯ ನೆಲೆಯ <u>ಕಾನನ</u>ದಲ್ಲಿ
  ಹರಿದ್ವರ್ಣ ತೂಗಿದೆ

## ಕವನ ರಚಿಸಿರಿ

ವಸುಂಧರೆಯ ಹೂ ಮೈಯಲ್ಲಿ
ಹೊನ್ನಾರು ಹೂಡಿದೆ !

ಈ ಸಾಲುಗಳಲ್ಲಿ ರೈತನು ಗದ್ದೆ ಉಳುವುದನ್ನು ಸೊಗಸಾಗಿ ವರ್ಣಿಸಲಾಗಿದೆ. ಇದೇ ರೀತಿ ಕೃಷಿ ಕಾಯಕವನ್ನು ವರ್ಣಿಸುವ ಕವನವೊಂದನ್ನು ರಚಿಸಿರಿ. ಎಲ್ಲಾ ಕವನಗಳನ್ನು ಒಟ್ಟು ಸೇರಿಸಿ ತರಗತಿ ಸಂಚಿಕೆಯೊಂದನ್ನು ತಯಾರಿಸಿರಿ.

# ಕಾಡುಕೋಣ

**- ಜಿ. ಪಿ. ರಾಜರತ್ನಂ**

ಬೋಧಿಸತ್ವನು ಒಂದು ಸಲ ಹಿಮಾಲಯ ಪ್ರಾಂತದಲ್ಲಿ ಕಾಡುಕೋಣವಾಗಿ ಹುಟ್ಟಿದ್ದನು. ಬೆಳೆಯುತ್ತ ಬೆಳೆಯುತ್ತ ಆ ಕೋಣ ಬೆಟ್ಟದಷ್ಟು ಎತ್ತರವಾಯಿತು. ಎತ್ತರಕ್ಕೆ ತಕ್ಕ ದಪ್ಪವಾಯಿತು. ನೂರು ಕೋಣಗಳ ಬಲವುಳ್ಳ ಭಾರಿ ಕೋಣವಾಯಿತು. ಬೆಟ್ಟ, ಕಣಿವೆ. ಕಾಡು, ಮೇಡು, ನದಿ, ಕೋಡು, ಗವಿ ಎಲ್ಲಿ ಎಂದರೆ ಅಲ್ಲಿ ನಿರ್ಭೀತಿಯಿಂದ ಅದು ಅಲೆದಾಡುತ್ತಿತ್ತು. ಒಂಟಿಯಾದ ಕಾಡಾನೆಯಂತೆ, ತಾನೇ ತಾನಾದ ಮೃಗರಾಜನಂತೆ, ಆ ಕೋಣ ಹಿಮಾಲಯದ ವನಪರ್ವತಗಳಿಗೆಲ್ಲ ಏಕೈಕ ಅಧಿಪತಿಯಾಗಿತ್ತು.

ನೋಡಿದವರಿಗೆ ಭಯವಾಗುವಂತಹ ಆಕಾರವಿದ್ದರೂ ಆ ಕೋಣದ ಮುಖ ಸೌಮ್ಯವಾಗಿತ್ತು. ಅದರ ನಡಿಗೆ ಹೂವಿನ ಮೇಲೆ ಹೆಜ್ಜೆ ಇರಿಸಿದ ಹಾಗಿತ್ತು. ಒಂದು ಸಲವಾದರೂ ಅದು ಹೂಂಕಾರ ಮಾಡಿದ್ದಿಲ್ಲ. ಇನ್ನೊಂದು ಪ್ರಾಣಿಯೊಡನೆ ಜಗಳವಾಡಿದ್ದಿಲ್ಲ. ತಾನಾಯಿತು, ತಾನು ಮೇಯುವ ಸೊಪ್ಪಾಯಿತು ಎಂದ ಹಾಗೆ, ಒಬ್ಬರ ತಂಟೆಗೆ ಹೋಗದ ಸಾಧುಪ್ರಾಣಿಯಾಗಿತ್ತು ಆ ಕೋಣ. ಅದರ ಶಕ್ತಿಸಾಮರ್ಥ್ಯಗಳನ್ನೂ ಶಾಂತಸ್ವಭಾವವನ್ನೂ ತಿಳಿದ ಇತರ ಕಾಡುಪ್ರಾಣಿಗಳು ಅದರ ತಂಟೆಗೆ ಹೋಗುತ್ತಿರಲಿಲ್ಲ. ಅದನ್ನು ಕಂಡರೆ, ಭಕ್ತಿ ಗೌರವಗಳಿಂದ ನಡೆದುಕೊಳ್ಳುತ್ತಿದ್ದುವು.

ಆದರೆ, ಆ ಕಾಡಿನಲ್ಲಿದ್ದ ಒಂದು ಕಪಿ ಮಾತ್ರ ತನ್ನ ಕಪಿಚೇಷ್ಟೆಯನ್ನು ಬಿಡಲಿಲ್ಲ. 'ಕೋಣನಾದರೂ ಇದು ಸಾಧುಪ್ರಾಣಿ. ಯಾರ ತಂಟೆಗೂ ಇದು ಬರುವುದಿಲ್ಲ' ಎಂಬುದನ್ನು ಕಂಡುಕೊಂಡ ಮೇಲಂತೂ, ಅದರ ಕಾಟ ಇನ್ನೂ ಹೆಚ್ಚಾಯಿತು. ಕೋಣ ನಡೆಯುತ್ತಿದ್ದರೆ, ಅದರ ಕಾಲಿಗೆ ಅಡ್ಡಲಾಗಿ ಮುರಿದ ಕೊಂಬೆಗಳನ್ನು ಹಾಕುತ್ತಿತ್ತು. ಅದರ ಬಾಲವನ್ನು ಹಿಡಿದು ಎಳೆಯುತ್ತಿತ್ತು. ಅದರ ಬೆನ್ನ ಮೇಲೆ ಹತ್ತಿ ಕುಳಿತು, ಅದರ ಪಕ್ಕೆಗಳನ್ನು ಕಾಲಿನಿಂದ ಒದೆಯುತ್ತಿತ್ತು. ಅದರ ಕುತ್ತಿಗೆಯ ಮೇಲೆ ನಿಂತು, ಕೊಂಬುಗಳನ್ನು ಹಿಡಿದು ಆಚೀಚೆಗೆ ಎಳೆಯುತ್ತಿತ್ತು. ಒಂದೊಂದು ಸಲ, ಎರಡು ಕೈಗಳಲ್ಲೂ ಎರಡು ಕೊಂಬುಗಳನ್ನು ಹಿಡಿದು, ಅದರ ಮೂಗಿನ ಮುಂದೆ ಉಯ್ಯಾಲೆಯಾಡುತ್ತಿತ್ತು. ಇನ್ನೂ ಒಂದೊಂದು ಸಲ, ತನ್ನ ಬಾಯೊಳಗಿನಿಂದ ಎಂಜಲನ್ನು ತೆಗೆದುಕೊಂಡು ಕೋಣನ ಮುಖಕ್ಕೆ ನಾಮ ಬಳಿಯುತ್ತಿತ್ತು. ಇದೆಲ್ಲಾ ಬೇಜಾರಾದಾಗ, ತನ್ನ ಬಾಲದ ತುದಿಯನ್ನು ಅದರ ಕಿವಿಗಳಿಗೆ ಚುಚ್ಚಿ ಕಚಗುಳಿಯಿಡುತ್ತಿತ್ತು.

ಕೋತಿ ತನ್ನನ್ನು ಇಷ್ಟೆಲ್ಲ ಗೋಳುಹೊಯ್ದುಕೊಳ್ಳುತ್ತಿದ್ದರೂ ಕೋಣ ಕೋಪಿಸಿಕೊಳ್ಳದೆ ಶಾಂತಿಯಿಂದ ಎಲ್ಲವನ್ನೂ ಸಹಿಸಿಕೊಂಡಿರುತ್ತಿತ್ತು. ಕೋಣಕ್ಕೆ ಕೋಪ ಬರದೆ ಹೋದರೂ ಕಪಿ ಮಾಡುತ್ತಿದ್ದ ಅತಿಯಾದ ಚೇಷ್ಟೆಗಳನ್ನು ನೋಡಿ ಇತರ ಪ್ರಾಣಿಗಳಿಗೆ ರೋಸಿಹೋಗಿತ್ತು. "ಈ ಕಪಿ ನಮಗೆ ಹೀಗೇನಾದರೂ ಮಾಡಬೇಕು! ಆಗ ಅದಕ್ಕೆ ಸರಿಯಾದ ಗತಿ ತೋರಿಸುತ್ತೇವೆ!" ಎಂದು ಅವು ಹಲ್ಲು ಮಸೆದುವು.

ಕೋತಿ ಅದನ್ನೆಲ್ಲ ಲಕ್ಷಿಸಲಿಲ್ಲ. "ನನಗೆ ಈ ಸಾಧುವಾದ ಕೋಣ ದೊರಕಿರುವಾಗ, ನಾನು ನಿಮ್ಮ ತಂಟೆಗೆ ಏಕೆ ಬರಲಿ?" ಎಂದು ಕೇಕೆಹಾಕಿ ನಗುತ್ತ, ಕೋಣವನ್ನು ಕೀಟಲೆ ಮಾಡುತ್ತಲೇ ಇತ್ತು. ಅದೇ ವನದಲ್ಲಿ ಒಂದು ವೃಕ್ಷದೇವತೆ ಇತ್ತು. ಅದು ಕಪಿಯ ತುಂಟಾಟವನ್ನೂ ನೋಡುತ್ತಿತ್ತು. ಕೋಣನ ಸ್ಥೈರಣೆಯನ್ನೂ ನೋಡುತ್ತಿತ್ತು. ಕಡೆಗೆ ಒಂದು ದಿನ ತಡೆಯಲಾರದೆ "ಅಯ್ಯಾ ಕೋಣ..... ಮಹಾಬಲಶಾಲಿಯಾದ ನೀನೆಲ್ಲಿ? ಕ್ಷುದ್ರವಾದ ಈ ಕಪಿಯೆಲ್ಲಿ? ಅದರ ಅಪರಾಧಗಳನ್ನು ನೀನೇಕೆ ಸಹಿಸಿಕೊಂಡಿದ್ದೀಯೆ? ಒಂದು ಸಲ ಕೊಂಬಿನಿಂದ ಝಾಡಿಸಿ ಒಗೆದು, ಕಾಲಿನ ಗೊರಸಿಂದ ಒರಸಿ ಬಿಡು!" ಎಂದಿತು.

ಅದಕ್ಕೆ ಆ ಕೋಣ ನಗುನಗುತ್ತ "ವೃಕ್ಷದೇವತೆಯೇ ! ನಾನು ಹಿಂದಿನ ಜನ್ಮದಲ್ಲಿ ಏನು ತಪ್ಪು ಮಾಡಿದ್ದೆನೋ, ಈ ಜನ್ಮದಲ್ಲಿ ಕೋಣನಾಗಿ ಹುಟ್ಟಿದ್ದೇನೆ. ಈ ಜನ್ಮದಲ್ಲಿ ಮತ್ತೆ ತಪ್ಪು ಮಾಡಿದರೆ, ಮುಂದಿನ ಜನ್ಮದಲ್ಲಿ ನಾನು ಏನಾಗಿ ಹುಟ್ಟುತ್ತೇನೆಯೋ, ಯಾರು ಬಲ್ಲರು?" ಎಂದಿತು.

"ಹಾಗೆಂದುಕೊಂಡು, ಎಲ್ಲಿಯವರೆಗೆ ನೀನು ಈ ಹಾಳು ಕಪಿಯ ಹಿಂಸೆಯನ್ನು ಸಹಿಸಿಕೊಂಡಿರುವೆ?" ಎಂದು ಕೇಳಿತು ವೃಕ್ಷದೇವತೆ.

"ಜನ್ಮಜನ್ಮಾಂತರಗಳಲ್ಲಿ ನಾವು ಅನುಭವಿಸಿಕೊಂಡು ಬಂದಿರುವ ಹಿಂಸೆಗಳ ಪಕ್ಕದಲ್ಲಿ ಈ ಕಪಿಯು ಮಾಡುವ ಹಿಂಸೆ ಬೆಟ್ಟದ ಪಕ್ಕದಲ್ಲಿ ಮರಳುಕಣ ಇದ್ದ ಹಾಗೆ. ಮನಸ್ಸಿನ ಸ್ವಾಸ್ಥ್ಯವನ್ನು ಬಯಸುವವನು ಇಂಥದಕ್ಕೆಲ್ಲ ತನ್ನ ಸ್ಥೈರಣೆಯನ್ನು ಕಳೆದುಕೊಳ್ಳಬಾರದು. ಅದೂ ಅಲ್ಲದೆ, ನಾನು ಕ್ಷಮಾಗುಣವನ್ನು ನನ್ನಿಂದ ಆದಷ್ಟು ಮಟ್ಟಿಗೂ ಆಚರಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿಕೊಂಡಿದ್ದೇನೆ. ನಾನೇ ಮಾಡಿದ ಪ್ರತಿಜ್ಞೆಯನ್ನು ನಾನೇ ಮುರಿಯುವುದು ಸಾಧ್ಯವಿಲ್ಲ" ಎಂದಿತು ಕೋಣ.

"ಸರಿ, ನಿನ್ನಂತಹ ಸಾಧುಕೋಣ ಸಿಕ್ಕಿರುವುದು ಆ ಕಪಿಯ ಪುಣ್ಯ !" ಎಂದಿತು ವೃಕ್ಷದೇವತೆ.

ಕೋಣ ಹೇಳಿತು : "ಹಾಗೆನ್ನಬೇಡ. ಆ ಕಪಿಯನ್ನು ನೋಡಿ ನನಗೆ ಮರುಕವಾಗುತ್ತಿದೆ. ನನ್ನನ್ನು ಇದು ಪೀಡಿಸುತ್ತಿರುವವರೆಗೂ ಇದಕ್ಕೆ ಏನೂ ತೊಂದರೆಯಿಲ್ಲ. ಆದರೆ, ಇದೇ ಚಾಳಿಬಿದ್ದು ಬೇರೆ ಯಾವುದಾದರೂ ಕೋಣವನ್ನು ಇದು ಹೀಗೆ ಕೆಣಕಿದರೆ ಇದರ ಗತಿ ಏನಾದೀತೆಂದು ನನಗೆ ಒಮ್ಮೊಮ್ಮೆ ಭಯವಾಗುತ್ತದೆ. ಬುದ್ಧಿಯಿಲ್ಲದೆ ತನ್ನ ಸಾವಿಗೆ ತಾನೇ ಕಾರಣವಾಗುತ್ತದೆಯಲ್ಲಾ ಈ ಕಪಿ, ಎಂದು ನನಗೆ ದುಃಖವಾಗುತ್ತದೆ."

"ಸರಿ, ಇದು ಒಂದು ಧರ್ಮಗೊಡ್ಡು!" ಎಂದುಕೊಂಡು ವೃಕ್ಷದೇವತೆ ಸುಮ್ಮನಾಯಿತು.

ಕೋಣ ಹೇಳಿದ ಮಾತು ಸುಳ್ಳಾಗಲಿಲ್ಲ. ಒಂದು ಸಲ ಈ ಕೋಣ ಬೇರೆ ಎಲ್ಲಿಯೋ ಸಂಚಾರ ಹೋಗಿದ್ದ ಹೊತ್ತಿನಲ್ಲಿ, ಅದು ಸಾಮಾನ್ಯವಾಗಿ ನಿಂತಿರುತ್ತಿದ್ದ ದೊಡ್ಡ ಮರದಡಿಯಲ್ಲಿ ಇನ್ನೊಂದು ಕೋಣ ಬಂದು ನಿಂತಿತ್ತು. ಅದು ಬೇರೆ ಕೋಣವೆಂದು ಕಪಿಗೆ ಗೊತ್ತಾಗಲಿಲ್ಲ. ಎಲ್ಲ ಕೋಣಗಳೂ ಒಂದೇ ಬಣ್ಣ, ಒಂದೇ ಆಕಾರವಾದ್ದರಿಂದ, ಕಪಿಯ ಮಂದಬುದ್ಧಿ ಮೋಸಹೋಯಿತು. ಹಿಂದೆ ಮಾಡುತ್ತಿದ್ದ ಹಾಗೆ ಕೋಣನ ಬಾಲವನ್ನು ಹಿಡಿದು ಜಗ್ಗಿಸಿದಾಗ,



ಆ ಕೋಣ ತನ್ನ ಕೆಂಗಣ್ಣುಗಳಿಂದ ಕಪಿಯನ್ನು ತಿಂದುಬಿಡುವಂತೆ ನೋಡಿತು. ಕೋಪದಿಂದ ಒಂದು ಸಲ ಬಾಲವನ್ನು ಝಾಡಿಸಿತು. ಕಪಿ ಹತ್ತು ಮಾರು ಆಚೆ ಹೋಗಿ ತಪಕ್ಕನೆ ಬಿದ್ದಿತು. ಕೋಣ ಅಲ್ಲಿಗೆ ನುಗ್ಗಿ ಹೋಗಿ, ತನ್ನ ಚೂಪಾದ ಕೊಂಬುಗಳಿಂದ ಆ ಕಪಿಯ ಮೈಯನ್ನು ಚುಚ್ಚಿ, ಚುಚ್ಚಿ ತೂತು ಮಾಡಿತು. ಕೋತಿ ಸತ್ತು ಹೋಯಿತು. ಆದರೂ ಕೋಣನ ಕೋಪ ಅಡಗಲಿಲ್ಲ. ಸತ್ತ ಕೋತಿಯ ದೇಹವನ್ನು ತನ್ನ ಕಾಲುಗಳಿಂದ ತುಳಿದು ತುಳಿದು, ಗೊರಸಿನಿಂದ ನೆಲಕ್ಕೆ ಉಜ್ಜಿ ಉಜ್ಜಿ ಹೊಸಕಿ ಹಾಕಿಬಿಟ್ಟಿತು.

ಆ ವೇಳೆಗೆ, ಬೋಧಿಸತ್ತ್ವನಾಗಿದ್ದ ಕೋಣ ಅಲ್ಲಿಗೆ ಬಂತು. ಹೊಸ ಕೋಣ ಅದನ್ನು ಕಂಡ ಕೂಡಲೇ ತಾನು ಮಾಡಿದ ಕಾರ್ಯಕ್ಕೆ ತಾನು ನಾಚಿಕೊಂಡ ಹಾಗೆ, ಅಲ್ಲಿ ನಿಲ್ಲದೆ ಓಡಿ ಹೋಯಿತು.

ಕ್ಷಮಾಗುಣವನ್ನು ಅಭ್ಯಾಸ ಮಾಡುತ್ತಿದ್ದ ಕೋಣ, ಸತ್ತು ಬಿದ್ದಿದ್ದ ಕಪಿಯನ್ನು ನೋಡಿತು. ಅದರ ದುರ್ಗತಿಯನ್ನು ಕಂಡು ದುಃಖಪಟ್ಟಿತು. "ಬುದ್ಧಿಯಿಲ್ಲದೆ ಅನ್ಯಾಯವಾಗಿ ತನ್ನ ಪ್ರಾಣವನ್ನು ಕಳೆದುಕೊಂಡಿತಲ್ಲಾ" ಎಂದು ಮರುಗಿತು. ವೃಕ್ಷದೇವತೆ ಕೋತಿಗೆ ಆದ ಅವಸ್ಥೆಯನ್ನೂ ನೋಡಿತು. ಕೋಣನ ಕ್ಷಮಾಗುಣವನ್ನೂ ನೋಡಿತು.

"ಅಯ್ಯಾ ಕೋಣ, ಸಾಮಾನ್ಯ ಪ್ರಾಣಿಗೆ ಇಂತಹ ಕ್ಷಮಾಗುಣ ಸಾಧ್ಯವಿಲ್ಲ. ನೀನು ಕೋಣನ ವೇಷದಲ್ಲಿರುವ ಯಾರೋ ಮಹಾಪುರುಷನೇ ಇರಬೇಕು. ಇದೇ ರೀತಿಯಲ್ಲಿ ನೀನು ಕ್ಷಮಾಗುಣವನ್ನು ಪರಿಪೂರ್ಣಗೊಳಿಸಿದರೆ, ಒಂದಲ್ಲ ಒಂದು ದಿನ ನೀನು ಬುದ್ಧನಾಗುವೆ" ಎಂದಿತು.

"ದೇವತೆಯೇ, ನಿನ್ನ ಬಾಯಿಂದ ಬಂದ ಮಾತು ನಿಜವಾಗಲಿ, ಮುಂದೆ ಎಂದಾದರೂ ಒಂದು ಜನ್ಮದಲ್ಲಿ ನಾನು ಬುದ್ಧನಾಗಬೇಕು ಎಂಬ ಸಂಕಲ್ಪದಿಂದಲೇ ಈ ಕ್ಷಮಾಗುಣವನ್ನು ಅಭ್ಯಾಸ ಮಾಡುತ್ತಿದ್ದೇನೆ. ಇದೊಂದೇ ಅಲ್ಲ ಸತ್ಯ, ದಾನ, ಉಪೇಕ್ಷಾ ಮುಂತಾದ ಇನ್ನೂ ಇತರ ಪರಿಪೂರ್ಣ ಗುಣಗಳನ್ನೂ ಜನ್ಮಜನ್ಮಗಳಲ್ಲಿಯೂ ಬೆಳೆಸಿಕೊಳ್ಳಬೇಕೆಂದಿದ್ದೇನೆ." ಎಂದಿತು ಕೋಣ.

"ಇಂತಹ ಸಂಕಲ್ಪವನ್ನು ಮಾಡಿಕೊಂಡ ನೀನು ಖಂಡಿತವಾಗಿಯೂ ಬುದ್ಧನಾಗುತ್ತೀಯ!" ಎಂದಿತು ವೃಕ್ಷದೇವತೆ.

ಉತ್ಸಾಹಜನಕವಾದ ಅದರ ಮಾತನ್ನು ಕೇಳಿ, ಕೋಣಕ್ಕೆ ಅನಿರ್ವಚನೀಯವಾದ ಆನಂದವಾಯಿತು.

## ಲೇಖಕರ ಪರಿಚಯ



ಡಾ. ಗುಂಡ್ಲುಪಂಡಿತ ರಾಜಯ್ಯಂಗಾರ್‌ರವರು ಕನ್ನಡ ಸಾಹಿತ್ಯಲೋಕದಲ್ಲಿ "ಜಿ.ಪಿ. ರಾಜರತ್ನಂ" ಎಂದೇ ಹೆಸರುವಾಸಿಯಾಗಿದ್ದಾರೆ. 'ರಾಜರತ್ನಂ' ಅವರು ೦೫-೧೨-೧೯೦೮ ರಂದು ಜನಿಸಿದರು. ಭ್ರಮರ ಇವರ ಕಾವ್ಯನಾಮ. ೧೯೩೧ ರಲ್ಲಿ ಕನ್ನಡ ಎಂ. ಎ. ಮುಗಿಸಿಕೊಂಡ ರಾಜರತ್ನಂ ಕೆಲವುಕಾಲ ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ೧೯೩೮ ರಲ್ಲಿ ಕಾಲೇಜು ಉಪನ್ಯಾಸಕರಾದರು. ಕವಿತೆ, ಬಾಲ ಸಾಹಿತ್ಯ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ವಿಮರ್ಶೆ, ವ್ಯಾಖ್ಯಾನ, ಕಾದಂಬರಿ ಮುಂತಾದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದವರು. ಕಥೆಗಾರ, ಗೀತರಚನೆಕಾರ, ಲೇಖಕ, ಕವಿ, ಅನುವಾದಕ, ಸಂಪಾದಕ ಇತ್ಯಾದಿ ಕಾರ್ಯಕ್ಷೇತ್ರಗಳಲ್ಲಿ ತಮ್ಮನ್ನು ಚೆನ್ನಾಗಿ ದುಡಿಸಿಕೊಂಡವರು. ರತ್ನನ ಪದಗಳು, ನಾಗನ ಪದಗಳು ಇವರ ಗಮನಾರ್ಹ ಕೃತಿಗಳು. ೧೯೭೮ ರಲ್ಲಿ ದೆಹಲಿಯಲ್ಲಿ ನಡೆದ ೫೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಇವರು ೧೯೭೯ ನೆಯ ಮಾರ್ಚ್ ತಿಂಗಳ ೧೩ ರಂದು ನಿಧನಹೊಂದಿದರು.

'ಕಾಡುಕೋಣ' ಕಥೆಯನ್ನು ಇವರು ಬರೆದ 'ಸೈಂಧವ ಕುದುರೆ' ಎಂಬ ಕಥಾಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕಾಡುಕೋಣವನ್ನು ಕಂಡು ಇತರ ಪ್ರಾಣಿಗಳು ಭಕ್ತಿಗೌರವದಿಂದ ನಡೆದುಕೊಳ್ಳಲು ಕಾರಣವೇನು?
2. ಕಾಡಿನ ಇತರ ಪ್ರಾಣಿಗಳು ದುಷ್ಟಕಪಿಯ ಮೇಲೆ ಹಲ್ಲು ಮಸೆಯಲು ಕಾರಣವೇನು?
3. ವೃಕ್ಷದೇವತೆಯು ಕೋಣಕ್ಕೆ ನೀಡಿದ ಸಲಹೆಗಳು ಯಾವುವು?
4. ಕಾಡುಕೋಣ ಏನೆಂದು ಪ್ರತಿಜ್ಞೆ ಮಾಡಿತ್ತು?
5. ಸಾಧುಕೋಣನಲ್ಲಿದ್ದ ಉತ್ತಮ ಗುಣಗಳು ಯಾವುವು?

## ಸಂದೇಶ ಬರೆಯಿರಿ

'ಕಾಡುಕೋಣ' ಕಥೆಯು ನಮಗೆ ನೀಡುವ ಸಂದೇಶವನ್ನು ಬರೆಯಿರಿ.

## ವಿವರಿಸಿ ಬರೆಯಿರಿ

ಈ ಕಥೆಯಲ್ಲಿ ಬರುವ 'ಕಾಡುಕೋಣ'ನಲ್ಲಿ ಅಡಕವಾಗಿರುವ ಉತ್ತಮ ಗುಣಗಳನ್ನು ನೀವು ತಿಳಿದಿರುವಿರಿ. ಅಂತೆಯೇ ಸಾಕುಪ್ರಾಣಿಗಳಲ್ಲಿ ಬಹಳಷ್ಟು ಸಾತ್ವಿಕ ಗುಣಗಳಿವೆ. ನಿಮ್ಮ ಮನೆಯಲ್ಲಿರುವ ಅಥವಾ ನೀವು ನೋಡಿರುವ ಸಾಕುಪ್ರಾಣಿಯ ಗುಣಗಳ ಕುರಿತು ವಿವರಿಸಿ ಬರೆಯಿರಿ.

## ಸಂಕ್ಷೇಪಿಸಿ ಬರೆಯಿರಿ

'ಕಾಡುಕೋಣ' ಕಥೆಯನ್ನು ಸಂಕ್ಷೇಪಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಜೋಡುನುಡಿ ಸಂಗ್ರಹಿಸಿರಿ

- ಸೂರ್ಯೋದಯದ ಹೊಂಬೆಳಕು <u>ಕಾಡು ಮೇಡು</u>ಗಳನ್ನು ಹಾದು ಪ್ರಕೃತಿಯಲ್ಲಿ ಪಸರಿಸಿತು.

ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದವನ್ನು ಗಮನಿಸಿರಿ. ಇಂತಹ ಪದಗಳನ್ನು 'ಜೋಡುನುಡಿ' ಎನ್ನುತ್ತೇವೆ. 'ಜೋಡುನುಡಿ'ಯಲ್ಲಿ ಎರಡು ಪದಗಳಿರುತ್ತವೆ. ಎರಡೂ ಪದಗಳಿಗೆ ಅರ್ಥವಿರುತ್ತದೆ. ಉದಾ : ಹಗಲುಇರುಳು, ಸುಖದುಃಖ, ಕಷ್ಟನಷ್ಟ ಇತ್ಯಾದಿ. ನಿಮಗೆ ತಿಳಿದಿರುವ ಜೋಡುನುಡಿಗಳನ್ನು ಸಂಗ್ರಹಿಸಿ ಬರೆಯಿರಿ.

## ವಿರುದ್ಧಾರ್ಥಕ ಪದಗಳನ್ನು ಬರೆಯಿರಿ

ಕೆಳಗೆ ನೀಡಲಾದ ಪದಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

- ಭೀತಿ
- ದುಃಖ
- ಪುಣ್ಯ
- ಸರಿ

## ಆಗಮಸಂಧಿಯನ್ನು ತಿಳಿಯಿರಿ

ಆಗಮಸಂಧಿಯು ಕನ್ನಡ ಸಂಧಿಗಳಲ್ಲಿ ಒಂದು. ಪಾಠಭಾಗದಲ್ಲಿ ಬಂದಿರುವ ಆಗಮಸಂಧಿಯಾಗುವ ಪದಗಳನ್ನು ಕೆಳಗೆ ಕೊಡಲಾಗಿದೆ.

ಉಯ್ಯಾಲೆಯಾಡು, ಸೈರಣೆಯನ್ನು, ಆನಂದವಾಗು, ಭಯವಾಗು ಇತ್ಯಾದಿ. ಅವುಗಳನ್ನು ಈ ರೀತಿ ವಿಂಗಡಿಸಬಹುದು.

ಉದಾ : ಉಯ್ಯಾಲೆ + ಆಡು - ಉಯ್ಯಾಲೆಯಾಡು

ಸೈರಣೆ + ಅನ್ನು - ಸೈರಣೆಯನ್ನು

ಮೇಲಿನ ಉದಾಹರಣೆಗಳಲ್ಲಿ 'ಯ' ಕಾರವು ಹೊಸದಾಗಿ ಆಗಮಿಸಿದೆ.

ಉದಾ : ಆನಂದ + ಆಗು - ಆನಂದವಾಗು

ಭಯ + ಆಗು - ಭಯವಾಗು

ಮೇಲಿನ ಉದಾಹರಣೆಗಳಲ್ಲಿ 'ವ' ಕಾರವು ಹೊಸದಾಗಿ ಆಗಮಿಸಿದೆ.

ಪೂರ್ವಪದ ಮತ್ತು ಉತ್ತರಪದಗಳು ಸೇರಿ ಆದ ರೂಪವನ್ನು ಗಮನಿಸಿರಿ. ಇಲ್ಲಿ ಆದ ಬದಲಾವಣೆಯನ್ನು ಅಡಿಗೆರೆ ಎಳೆದು ಸೂಚಿಸಲಾಗಿದೆ. 'ಯ್' ಹೊಸತಾಗಿ ಬಂದರೆ 'ಯಕಾರಾಗಮ' ಮತ್ತು 'ವ್' ಹೊಸತಾಗಿ ಬಂದರೆ 'ವಕಾರಾಗಮ'ವಾಗುತ್ತದೆ. ಆಗಮ ಸಂಧಿಯಲ್ಲಿ 'ಯಕಾರಾಗಮ' ಮತ್ತು 'ವಕಾರಾಗಮ'ಗಳೆಂಬ ಎರಡು ಪ್ರಭೇದಗಳನ್ನು ಕಾಣಬಹುದು.

- ಕೆಳಗೆ ನೀಡಿರುವ ಪದಗಳನ್ನು ತಖ್ತೆಯಲ್ಲಿ ವರ್ಗೀಕರಿಸಿ ಬರೆಯಿರಿ.

ಪ್ರಾಣಿಯೊಡನೆ, ಬಾಲವನ್ನು, ಕೋಣವಾಗಿ, ಮೈಯನ್ನು, ಮರವನ್ನು, ಅಡ್ಡಿಯಿಲ್ಲ, ಮರವೇರು, ಕಪಿಯನ್ನು, ಕರವೆತ್ತಿ, ಒಂಟಿಯಾದ

| 'ಯ'ಕಾರಾಗಮ | 'ವ'ಕಾರಾಗಮ |
|---|---|
| | |

# ಪರಿಸರದ ಉಳಿವು ಬಾಳಿನ ಗೆಲುವು

- ಸುಮುಖಾನಂದ ಜಲವಳ್ಳಿ

(ಪ್ರಕೃತಿ ಮಾತೆಯ ಸ್ತುತಿ)

ಸ್ತುತಿ : ನಿತ್ಯಹರಿದ್ವರ್ಣೇ ಸತ್ಯಸುಂದರೀ ಚಿತ್ಕಳಾರೂಪೇ ಚಿನ್ಮಯೀ
ನಾದರಂಜಿತೇ ಸಂಜೀವಿನೀ ಸಪ್ರಾಣಮಯೀ ತನ್ಮಯೀ
ಸರ್ವಜನ ಸಂಸ್ತುತೇ ಮಂದಸ್ಮಿತೇ ಸರ್ವಮಂಗಳೇ ಮನೋನ್ಮಯೀ
ಕಾರ್ಯಕಾರಿಣೀ ಭವತಾರಿಣೀ ಜಗದ್ವಂದ್ಯೇ ನಿನಗೆ ನಮನ.

## ದೃಶ್ಯ ೧

[ಜಿಂಕೆ, ನವಿಲು, ಹಾವು ಮೊದಲಾದ ಜೀವಿಗಳು ನರ್ತಿಸಬೇಕು. ಗೀತೆಯ ಮೊದಲ ಸೊಲ್ಲನ್ನು ಹಾಡುವಾಗ ರಂಗದ ಮೇಲೆ ಬರುವ ಪ್ರಾಣಿಗಳು ಪ್ರೇಕ್ಷಕರಿಗೆ ಕಾಣುವಂತೆ ನಿಂತಲ್ಲೇ ನಲಿಯುತ್ತಿರಬೇಕು. ಆಯಾ ಪ್ರಾಣಿಯ ಕುರಿತು ಹಾಡುವಾಗ ಆ ಪ್ರಾಣಿ ನರ್ತಿಸಬೇಕು. ಪ್ರಕೃತಿಮಾತೆ ಪ್ರವೇಶಿಸಿದ ಮೇಲೆ ಅವಳೊಂದಿಗೆ ಇವೆಲ್ಲವೂ ನರ್ತಿಸಬೇಕು]

ಹಿನ್ನೆಲೆ ಗಾಯನ : ವನಸಿರಿ ಪಸುರಲಿ ಕಾಡಿನ ಸೊಬಗಲಿ
ನಲಿನಲಿದಾಡುವ ಜೀವ ಸುಮ
ಈ ಸುಖ ಸಾರಕೆ ನಿಯತಿಯ ಭಾವಕೆ
ಮೈಮನ ಪುಲಕಿತ ರೋಮಾಂಚನ

ಜಿಂಕೆ : ನೆಗೆದಾಡುವ ಜಿಗಿದಾಡುವ ಓಡೋಡುವ ಚಿಗರೆ
ಬಂಗಾರದ ಮೈಚುಕ್ಕೆಯ ಸಿಂಗಾರದ ಹೊಗರೆ
ಎಳೆಚಿಗುರಿಗೆ ಹಸುರ್ಹುಲ್ಲಿಗೆ ಹಿರಿಹಿಗ್ಗುವ ಮೋಡಿ


20

ತಂಗೊಳಲಿನ ಸವಿನೀರಿಗೆ ಮನತಣಿವವು ನೋಡಿ
(ಸ್ವಸ್ಥಾನದಲ್ಲಿ ನಿಲ್ಲುವುದು)

ನವಿಲು : ತೂಗುತ ಬಾಗುತ ತಕದಿಮಿ ಕುಣಿವುತ
ಆಮೋದದ ನವ ನಾಟ್ಯ ಮಯೂರಿ
ಹೊನ್ನಿನ ಕಣ್ಣಿನ ಸುಂದರ ಗರಿಯನು
ತೆರೆಯುತ ಬಂದಳು ಬಲು ವೈಯಾರಿ
(ಸ್ವಸ್ಥಾನದಲ್ಲಿ ನಿಲ್ಲುವುದು)

ಕಾಳಿಂಗ : ಬುಸು ಬುಸುಗುಡುತಲಿ ಹೆಡೆಯನು ತೆಗೆದು
ತಲೆದೂಗುವ ಕಾಳಿಂಗ
ಭೋರ್ಗರೆಯುತ ಹರಿದಾಡುವ ರಭಸಕೆ
ಗಡಗಡವೆನುವುದು ಅಂಗಾಂಗ
ಕೆನ್ನಾಲಿಗೆ ಹೊರಚಾಚುವ ವೈಭವ
ಬಿಡುಗಣ್ಣಿನ ರಾಜ
ಸರಸಪ್ಪಳ ಹೊರ ಹೊಮ್ಮಲು ತಕ್ಷಣ
ತಲೆಯೆತ್ತುವ ಓಜ
(ಸ್ವಸ್ಥಾನದಲ್ಲಿ ನಿಲ್ಲುವುದು)

(ಪ್ರಕೃತಿಮಾತೆಯ ಪ್ರವೇಶ. ಅವಳ ಜೊತೆಯಲ್ಲಿ ಇವೆಲ್ಲವೂ ನರ್ತಿಸುವುವು)

ಸಸ್ಯ ಶ್ಯಾಮಲೆ ಬಾಲ ಕೋಮಲೆ
ಇವಳೆ ಪ್ರಕೃತಿ ಮಾತೆಯು
ಹಸಿರು ಉಡುಗೆಯು ಹೊನಲು ತೊಡುಗೆಯು
ಪರ್ವತಾವಳಿ ಮಾಲೆಯು
ಗಗನ ತಾರೆಗಳವಳ ಹಾರವು


21

ಶಿರದ ಮಕುಟದ ಮಣಿಗಳು

ಜಗದಿ ತುಂಬಿಹ ಜೀವ ಸಂಕುಲ

ಅವಳ ಅಂಗೋಪಾಂಗವು

ತಂಪು ಗಾಳಿಯು ಇಂಪು ಸ್ವರಗಳು

ಮಧುರ ಲೀಲಾ ಗಾನವು

ರಾಗ ರಂಜಿನಿ ನಾದ ಮೋಹಿನಿ

ಮಂದ ಹಾಸದ ಮಾನಿನಿ (ನಿರ್ಗಮನ)

ಹಿನ್ನೆಲೆ : ಇಂತು ಪ್ರಕೃತಿ ಮಾತೆಯು

ತನ್ನ ಪರಿವಾರಮಂ ಬೆರೆಸಿ

ಪರಮ ಸಂತಸದಿ ಇರುತಿರೆ

ಸ್ವಾರ್ಥಿಯಾಗುತ ನರನು

ವಿಲಾಸ ಜೀವನಕೆ ಪರವಶನಾಗಿ

ಪ್ರಕೃತಿ ನಾಶವ ಗೈದು

ದಿನದಿನವು ವಿನಾಶದೆಡೆಗೈದುತಿಹನು

## ದೃಶ್ಯ ೨

(ಬೇಟೆಗಾರರ ಪ್ರವೇಶ)

ಬೇಟೆಗಾರರು : ಕಾಡಿನ ಪ್ರಾಣಿಗಳೊಡೆಯರು ನಾವು

ಅವುಗಳ ಧ್ವಂಸವ ಗೈವೆವು ನಾವು

ಹುಲಿಜಿಂಕೆಗಳು ಕಾಡ್ಕೋಣಗಳು

ಉಡಹಾವುಗಳು ಮೃಗಪಕ್ಷಿಗಳು

ದ್ರವ್ಯದ ರಾಶಿಯ ಮೂಲಗಳೆಮಗೆ

ಅವುಗಳ ಕೊಲುವೆವು ಚರ್ಮವ ಸುಲಿವೆವು

ಆನೆಯ ಕೆಡಹಿ ದಂತವ ಮುರಿವೆವು

(ಕಳ್ಳದೃಷ್ಟಿಯಿಂದಲೂ ಸುತ್ತಲೂ ನೋಡುವರು)

ಬಂದಿತು ಆಹಾ ಕೊಬ್ಬಿದ ಜಿಂಕೆ
ಬೆಳ್ಳಿಯ ಚಿಟ್ಟೆಯ ಕೊಂಬಿನ ಜಿಂಕೆ

(ಜಿಂಕೆಯು ಪ್ರವೇಶಿಸುವುದು) ಇಲ್ಲಿ ನಾಲ್ಕಾರು ಜಿಂಕೆಗಳನ್ನು ಬಳಸಿಕೊಳ್ಳಬಹುದು. ಬೇಟೆಗಾರರನ್ನು ಕಂಡು ತಬ್ಬಿಬ್ಬಾಗಿ ಓಡತೊಡಗುವವು. ಬೇಟೆಗಾರರು ಬೆನ್ನಟ್ಟಿ ಓಡುವರು. ಆಯುಧ ಪ್ರಯೋಗಿಸಿ ಹೊಡೆಯುವರು. ಜಿಂಕೆಗಳು ಒದ್ದಾಡುತ್ತಾ ಪ್ರಾಣ ಬಿಡುವವು. ಇದನ್ನು ನೃತ್ಯದ ಮೂಲಕ ಅಭಿನಯಿಸಬೇಕು.)

(ಪ್ರಕೃತಿ ಮಾತೆ ಪ್ರವೇಶಿಸುವಳು)

ಪ್ರಕೃತಿ ಮಾತೆ : (ಸ್ವಗತ)
ಕಾಯುವವರೆ ಕೊಲ್ಲುತಿಹರು
ಕಣ್ಣನೀರು ಸುರಿದಿದೆ
ಕಂಡು ನಲಿವ ನನ್ನ ಕುಲದ
ರಕ್ತ ಕೋಡಿ ಹರಿದಿದೆ
(ದುಃಖಿಸುತ್ತಾ ಮರೆಯಾಗುವಳು)

(ಇನ್ನೊಂದು ಕಡೆಯಿಂದ ಮರಗಡುಕನ ಪ್ರವೇಶ, ಕೈಯಲ್ಲಿ ಕತ್ತಿ ಹೆಗಲಲ್ಲಿ ಮಚ್ಚು ಇರುವುದು)

ಮರಗಡುಕ : ಏನು ಕಾಡಿದು ದೊಡ್ಡ ಕಾಡಿದು
ಮರದ ರಾಶಿಯು ಎದ್ದಿದೆ
ಮತ್ತಿ ತೇಗು ಮತ್ತೆ ಗಂಧವು
ಭಾರಿ ಗಾತ್ರದಿ ಬೆಳೆದಿದೆ
ಬುಡವ ಕಡಿವೆನು ತುಂಡು ಕೊರೆವೆನು
ಕಣ್ಣು ತಪ್ಪಿಸಿ ಮಾರುವೆ
ಅಧಿಕ ಹಣವನು ಗಳಿಸಿ ಸುಖಿಸುವೆ
ಧನಿಕನಾಗಿ ಬಾಳುವೆ
ಅಡವಿ ನಾಶವ ಮಾಡುವೆ



(ಮರಕಡಿಯಲು ತೊಡಗುವನು. ಪ್ರಕೃತಿ ಮಾತೆ ಪ್ರವೇಶಿಸುವಳು)

ಪ್ರಕೃತಿ ಮಾತೆ : (ದುಃಖಿತಳಾಗಿ)

ಏನು ಮಾಡಲಿ ಅಯ್ಯೋ
ಹೇಗೆ ಸಹಿಸಲಿ ನೋವು
ಹಸುರೆಲ್ಲ ಬಯಲಾಯಿತು
ಉಟ್ಟ ಸೀರೆಯು ಬಿರಿಯಿತು
ನನ್ನ ಅಂಗಗಳೆಲ್ಲವೂ
ಛಿದ್ರ ಛಿದ್ರಗಳಾದವು
ನನ್ನ ಒಲವಿನ ಮಕ್ಕಳು
ನನ್ನ ಕೈಯನೆ ಕಡಿವರು
ಏನು ಮಾಡಲಿ ಅಯ್ಯೋ
ಹೇಗೆ ಸಹಿಸಲಿ ನೋವು

(ನಿರ್ಗಮನ)

## ದೃಶ್ಯ ೩

(ಯಂತ್ರಾಸುರ, ಮೈಕಾಸುರ, ಪ್ಲಾಸ್ಟಿಕಾಸುರ ಮೂವರು ಪ್ರವೇಶಿಸುವರು. ಇವರಿಗೆ ಯಕ್ಷಗಾನದ ರಕ್ಕಸ ಪಾತ್ರಗಳಂತೆ ವೇಷ ಹಾಕಬಹುದು. ಆದರೆ ವೇಷದಲ್ಲಿ ಇವರು ಇಂಥವರು ಎಂದು ಗುರುತಿಸುವಂತಿರಬೇಕು. ಇಲ್ಲಿ ಚೆಂಡೆಯನ್ನು ಬಳಸಬಹುದು.)

(ಮೂವರು ಒಟ್ಟಿಗೆ ಪ್ರವೇಶಿಸುವರು)
ತೋಂತನನ ತೋಂ ತನನ ತೋ ತನನ ತೋಂ
ತತ್ತನನ ತತ್ತನನ ತತ್ತನನ ತೋಂ
(ಈಗ ಒಬ್ಬೊಬ್ಬರೆ ನರ್ತಿಸಬೇಕು)

ಮೈಕಾಸುರ : ಮೈಕಾಸುರ ಮೈಕಾಸುರ
ಮೈಕಾಸುರ ನಾನು
ಎಲ್ಲೆಲ್ಲಿಯು ಕರ್ಕಶದಿಂ
ಹೊರಹೊಮ್ಮುವ ಶಬ್ದ
ನಾ ಕಿರುಚುವೆ ನಾ ಅರಚುವೆ
ದಿಕ್ತಟವನು ಬಿರಿವೆ
ಗುಡುಗುಡಿಸುವೆ ಅಬ್ಬರಿಸುವೆ
ಕಿವಿಯೊಡೆಯುವ ಶೂರ
ಬಾಳೆಲ್ಲವೂ ಅಲ್ಲೋಲವು
ಕಲ್ಲೋಲವು ಕ್ರೂರ
(ನಿರ್ಗಮನ)

ಯಂತ್ರಾಸುರ : ಯಂತ್ರಾಸುರ ಯಂತ್ರಾಸುರ
ಯಂತ್ರಾಸುರ ನಾನು
ಜಗವೆಲ್ಲವ ನಾನಾಳುವೆ
ಉಗುಳುಗುಳುವೆ ಕರಿ ಹೊಗೆಯನು
ಧೂಮ್ರಾಕ್ಷಸ ನಾನು

ತಂಗಾಳಿಯ ಕೆಡಿಕೆಡಿಸುವೆ
ವಿಷ ಮಾಡುವೆ ನಾನು
ಕೊಳೆ ನೀರನು ಹರಿ ಬಿಡುವೆನು
ದುರ್ಗಂಧನು ನಾನು
ನದಿ ನೀರನು ಬಲು ಕೆಡಿಸುವೆ
ವಿಷಕಾರಿಯು ನಾನು
ಹಣವಂತರ ಕುಲತಂತ್ರರ
ಸಂಗಾತಿಯು ನಾನು
ಬಡಬಗ್ಗರ ತಲೆ ಮೆಟ್ಟುವೆ
ರೋಗೀಶನು ನಾನು

ಪ್ಲಾಸ್ಟಿಕಾಸುರ : ಪ್ಲಾಸ್ಟಿಕಾಸುರ ಪ್ಲಾಸ್ಟಿಕಾಸುರ
ಪ್ಲಾಸ್ಟಿಕಾಸುರ ನಾನು
ರಂಗುರಂಗಿನ ಲೀಲೆ ನನ್ನದು
ಪ್ಲಾಸ್ಟಿಕಾಸುರ ನಾನು
ಊರೂರಲಿ ಬೀದಿಬೀದಿಯಲಿ
ನಲಿಯುತಿರುವೆ ನಾನು
ಎಲ್ಲ ಮನೆ ಮನೆಗಳಲಿ ಜನರ ಕೈಗಳಲಿ
ಮೆರೆಯುತ್ತಿರುವೆ ನಾನು
ನೀರ ಕೆಡಿಸುವೆ ತಿಂಡಿ ಕೆಡಿಸುವೆ
ಬಳಕೆ ವಸ್ತುವ ಕೆಡಿಸುವೆ
ನನ್ನ ಸುಟ್ಟರೆ ವಿಷವ ಬಿಡುವೆನು
ರೋಗವನ್ನೇ ಬರಿಸುವೆ
ಮಣ್ಣಿನೊಳಗೆ ಹುದುಗಿಕೊಂಡು
ಮಣ್ಣ ನಾನೆ ಕೆಡಿಸುವೆ
ನನ್ನ ಗೆಲ್ಲುವರಿಲ್ಲ ಜಗದಲಿ
ನಾನೇ ಭಸ್ಮಾಸುರನು

(ಮೂವರು ಮೊದಲಿನ ಗತಿಯಲ್ಲೇ ಕುಣಿಯುತ್ತಾ ನಿರ್ಗಮಿಸುವರು. ಕಳಾಹೀನ ಪ್ರಕೃತಿಮಾತೆ ಪ್ರವೇಶಿಸುವಳು)

ಪ್ರಕೃತಿಮಾತೆ : ಮಲಿನವಾಯಿತು ನನ್ನ ಪರಿಶುದ್ಧ ಜಲಧಾರೆ
ತಂಪುಗಾಳಿಗೆ ಈಗ ಬೆರೆತುಕೊಂಡಿಹುದು ವಿಷವು
ನೆಲದ ಸತ್ವವು ಅಡಗಿ ಸಪ್ಪೆಗಟ್ಟಿಹುದು ಮಣ್ಣು
ಕ್ಷೀಣವಾದೆನು ನಾನು ಅಂದಗೆಟ್ಟಿತು ಬದುಕು
(ನಿರ್ಗಮನ)

(ಸೊಳ್ಳೆಗಳ ಪ್ರವೇಶ)

ಸೊಳ್ಳೆಗಳು : ಆಹ ಆಹ ಆಹ ಆಹ
ಏನು ಕಳೆ ನಮ್ಮ ಬೆಳೆ
ನಮಗೆ ಸುಖದ ಕಾಲವು
ನಿಂತ ನೀರು ಕೊಳಚೆ ನೀರು
ಚರಂಡಿ ದುರ್ನಾತವು
ಹಾದಿ ಬೀದಿ ಕೊಳೆತ ವಸ್ತು
ಅಲ್ಲೆ ನಮ್ಮ ವಾಸವು
ನರರ ರಕ್ತ ಹೀರಿ ನಾವು
ವಿಷದ ಮೊಟ್ಟೆ ಇಡುವೆವು
ಪ್ಲೇಗು ಜ್ವರವು ಕಾಲರಾ
ಗಡಗಡ ಮಲೇರಿಯಾ
ಮೆದುಳು ಬೇನೆ ಡೆಂಗೆ ಜ್ವರ
ವಿವಿಧ ರೋಗ ಕಾರಕ
ನರಗೆ ನಾವೇ ಅಂತಕ
(ನಿರ್ಗಮನ)

## ದೃಶ್ಯ ೪

[ಪ್ರಕೃತಿ ಮಾತೆ ನಡುವೆ ಇರುವಳು. ಮರಗಡುಕ, ಮೈಕಾಸುರ, ಯಂತ್ರಾಸುರ, ಪ್ಲಾಸ್ಟಿಕಾಸುರ, ರೋಗ ಪ್ರಸಾರಕ ಸೊಳ್ಳೆ ಇವೆಲ್ಲರೂ ಪ್ರಕೃತಿಮಾತೆಯನ್ನು ಸುತ್ತುಗಟ್ಟಿ ಅಟ್ಟಹಾಸ ಬೀರಿ ಕುಣಿವರು. ಪ್ರಕೃತಿ ಮಾತೆ ನರಳುತ್ತಿರುವಳು. ಇಲ್ಲಿ ಸಂಗೀತ ಮತ್ತು ಬೆಳಕನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಕುಣಿತ ಮುಗಿದ ಮೇಲೆ ಅವೆಲ್ಲವೂ ಮಾಯವಾಗುವುವು. ಈಗ ಪ್ರಕೃತಿ ಮಾತೆ ಮಾತ್ರ ಇರುವಳು. ಕಣ್ಣೀರಿಟ್ಟು ರೋದಿಸುತ್ತಿರುವಳು]



ಪ್ರಕೃತಿ ಮಾತೆ : ಬೇಡವಾದೆನೆ ನಾನು ನನ್ನ ಕಂದರಿಗೆಲ್ಲ

ಬಣ್ಣಗೆಟ್ಟೆನು ನಾನು ಕ್ಷೀಣವಾಯಿತು ದೇಹ

ನನ್ನ ಅವಯವಗಳೆಲ್ಲ ವಿಕೃತಗೊಂಡಿಹುದೀಗ

ನನ್ನ ರಕ್ಷಿಪರಾರು ನನ್ನ ಕಂದರು ಎಲ್ಲಿ

ಬನ್ನಿ ಕಂದರಿರಾ ಬನ್ನಿ ಕಂದರಿರಾ

ಓ, ಬನ್ನಿ ಕಂದರಿರಾ ಬನ್ನಿ ಬನ್ನಿ

(ಒಬ್ಬಳು ಯುವತಿ ಒಬ್ಬ ಯುವಕ ಪ್ರವೇಶಿಸುವರು. ಅವರನ್ನು ಇಲ್ಲಿ ಕಂದರು ಎಂದು ಸಂಬೋಧಿಸಲಾಗಿದೆ)

ಕಂದರು : ಯಾರು ಕರೆದರು ನಮ್ಮ

ಅಳುವ ರೋದನವೇನು?

(ಸುತ್ತಲೂ ನೋಡಿ ಪ್ರಕೃತಿಮಾತೆಯ ಕಂಡು)

ಯಾರು ನೀನೆಲೆ ತಾಯಿ

ರೂಪಗೆಟ್ಟಿಹುದೇಕೆ

ಅಳುವು ತುಂಬಿದ ಮೊಗವು

ಬಾಡಿ ಹೋಗಿದೆ ಚೆಲುವು

ಕಣ್ಣೀರ ಮಿಡಿಯುತಿಹೆ

ಯಾರು ನೀನೆಲೆ ತಾಯಿ

ಪ್ರಕೃತಿ ಮಾತೆ : ಅರಿಯಲಾರಿರಾ ಕಂದ ನಾನಾರು ಎಂಬುದನು?

ಈಗಲೇ ಮರೆತಿಹಿರಾ ನಾನಾರು ಎಂಬುದನು?

ಕಂದರು : (ತಮ್ಮೊಳಗೆ)

ಯಾರಿವಳು ತಾಯಿ? ಎಲ್ಲೋ ನೋಡಿದ ನೆನಪು

ಮಸುಕು ಮಸುಕಾಗಿಹುದು ಯಾರಿವಳು ಯಾರಿವಳು?

(ಪ್ರಕೃತಿಮಾತೆಗೆ)

ನೀನಾರು ಎಂಬುದೆಮಗಿಲ್ಲ ನೆನಹು

ಬಂದ ಬವಣೆಗಳೇನು ಯಾರೆಂಬುದನು ಹೇಳು...

| | | |
|---|---|---|
| ಪ್ರಕೃತಿ ಮಾತೆ | : | (ತನ್ನೊಳಗೆ) |
| | | ಪಡೆದ ಮಕ್ಕಳೆ ತಮ್ಮ ತಾಯಿಯನು ಗುರುತಿಸದ |
| | | ಕಾಲ ಬಂದಿಪುದಲ್ಲ. 'ಏನಿದಚ್ಚರಿಯೊ ಕಾಣೆ..' |
| | | ಕೇಳಿ ಮಕ್ಕಳೆ ಕೇಳಿ ಪ್ರಕೃತಿ ಮಾತೆಯು ನಾನು |
| | | ನನ್ನ ಮಕ್ಕಳು ನೀವು ನಿಮ್ಮ ತಾಯಿಯು ನಾನು |
| ಕಂದರು | : | ನಮ್ಮ ತಾಯಿಯೆ ನೀನು! ಮರೆತು ಹೋದೆವು ನಾವು! |
| | | ಕಣ್ಣೀರ ಸುರಿಸದಿರು ಬಂದ ಬನ್ನವಿದೇನು |
| | | ನಿನ್ನ ಒಳಿತಲ್ಲದೆಯೇ ನಮಗನ್ಯ ಒಳಿತಿಲ್ಲ |
| | | ನಿನಗಾಗಿ ಅರ್ಪಣವು ನಮ್ಮ ತನುಮನವೆಲ್ಲ |
| ಪ್ರಕೃತಿ ಮಾತೆ | : | ನನ್ನ ಮಕ್ಕಳು ನೀವು ನಿಮಗಾಗಿ ಬದುಕಿದೆನು |
| | | ಏನ ಹೇಳಲಿ ನಾನು ಬಂದ ಬವಣೆಗೆ ನೊಂದೆ |
| | | ನೋಡಿನೋಡಿ ಅಲ್ಲಿ ನನ್ನ ಪೀಡಿಪರವರು |

(ಪ್ರಕೃತಿ ಮಾತೆ ಮತ್ತು ಕಂದ ಒಂದು ಬದಿಗೆ ಸರಿದು ನಿಲ್ಲುವರು. ಅಟ್ಟಹಾಸ ಬೀರುತ್ತಾ ಬೇಟೆಗಾರ, ಮರಗಡುಕ, ಮೈಕಾಸುರ, ಯಂತ್ರಾಸುರ, ಪ್ಲಾಸ್ಟಿಕಾಸುರ, ರೋಗಪ್ರಸಾರಕ ಸೊಳ್ಳೆ - ಇವರು ರಂಗದ ಈ ತುದಿಯಿಂದ ಆ ತುದಿಗೆ ಹಾದು ಹೋಗುವರು. ಮರೆಯಾದ ಮೇಲೆ ರಂಗ ಸಜ್ಜಿಕೆಯ ನಡುವೆ ಜೊತೆಗೆ ಬಂದು)

ನೋಡಿದಿರಾ ಕಂದರಿರಾ, ನೋಡಿದಿರಾ ಕಂದರಿರಾ
ಅಟ್ಟಹಾಸದಿ ಮೆರೆವ ಈ ದುಷ್ಟರನ್ನು
ಹತಾಶಳಾಗಿಹೆ ನಾಶವಾಗಿಹುದೆನ್ನ ಹಸುರು ಸಿರಿಯೆಲ್ಲ
ಮಲಿನವಾಗಿಹುದೆನ್ನ ಹಳ್ಳ ಕೊಳ್ಳಗಳೆಲ್ಲ
ಬಂಗಾರದ ಮಣ್ಣೆಲ್ಲ ನಂಜುನಂಜಾಗಿಹುದು
ಕರ್ಬೊಗೆಯ ವಿಷದಿಂದ ಗಾಳಿ ಕೆಟ್ಟಿಹುದು
ಶಬ್ದ ಕರ್ಕಶದಿಂದ ಶಾಂತಿ ನೆಮ್ಮದಿಯಿಲ್ಲ
ನನ್ನದೆಯ ಹಾಲೆಲ್ಲ ಹಾಲಾಹಲವಾಗಿಹುದು
ಅದ ಕುಡಿಯೇ ನೀವೆಲ್ಲ ಉಳಿವಿರೇನು?

ಕಂದರು : ಇಲ್ಲ ತಾಯಿಯೇ ಇಲ್ಲ ಹಾಲು ಹಾಲಾಗಿರಲಿ
ನಿನ್ನುಳಿವಿಗಾಗಿ ನಾವಿರುವೆವು
ಅಳಬೇಡ ಅಳಬೇಡ ಅಳಬೇಡ ತಾಯೆ
ಕಣ್ಣೀರ ತೊಡೆವುದಕೆ ನಾವಿರುವೆವು
ದುಷ್ಟ ಬಾಧಕರಿರಲಿ ಭ್ರಷ್ಟ ಕಪಟಿಗಳಿರಲಿ
ಅವರ ದೌಷ್ಟ್ಯವ ಮುರಿಯೆ ನಾವಿರುವೆವು
ಹಸಿರು ಸಿರಿಸೊಬಗೆಲ್ಲ ಉಳಿಸಿ ಬೆಳೆಸುವೆವು
ನಿನ್ನ ಕಂಟಕ ಕಳೆಯೆ ನಾವಿರುವೆವು
ನಿನ್ನುಳಿವೇ ನಮ್ಮುಳಿವು ನಿನ್ನಳಿವೆ ನಮ್ಮಳಿವು
ನಿನ್ನ ಉಳಿಸಲು ಶಪಥಗೈಯುವೆವು
ನಿನ್ನ ನಗುವಿನಲಿ ನಮ್ಮ ನಗು ಅರಳಿ ಬರಲಿ
ನಿನ್ನ ಮಡಿಲಲ್ಲಿ ನಾವು ಬಾಳುವೆವು
ಸೌಭಾಗ್ಯವತಿಯಾಗಿ ನೀ ಆಳು ನೀಬಾಳು
ನಿನ್ನ ರಕ್ಷಣೆಗಾಗಿ ನಾವಿರುವೆವು

(ಪ್ರಕೃತಿ ಮಾತೆಯ ಪಾದಗಳಿಗೆ ನಮಿಸುವರು. ಪ್ರಕೃತಿ ಮಾತೆ ಸಂತಸದಿಂದ ಕಂದರನ್ನು ಹರಸುತ್ತಿರುವಳು)

## ಲೇಖಕರ ಪರಿಚಯ



'ಸುಮುಖಾನಂದ ಜಲವಳ್ಳಿ'ಯವರು ಮೂಲತಃ ಹೊನ್ನಾವರ ತಾಲೂಕಿನ ಜಲವಳ್ಳಿಯವರು. ಇವರ ಮೂಲ ಹೆಸರು ರಾಮ ವೆಂಕಟ ನಾಯಕ. 'ಸುಮುಖಾನಂದ ಜಲವಳ್ಳಿ' ಎಂಬುದು ಇವರ ಕಾವ್ಯನಾಮ. ವೆಂಕಟ ನಾಯಕ ಮತ್ತು ವೆಂಕಟಮ್ಮನವರ ಮಗನಾಗಿ ೧೯೫೩ ರಲ್ಲಿ ಜನಿಸಿದ ಇವರು ಪ್ರೌಢಶಾಲಾ ಕನ್ನಡ ಶಿಕ್ಷಕರಾಗಿ ಸ್ತುತ್ಯರ್ಹ ಸೇವೆ ಸಲ್ಲಿಸಿ ನಿವೃತ್ತರಾದರು.

ಇವರು ಶಾಲಾ ಮಕ್ಕಳಿಗಾಗಿ ಬರೆದ ಕೃತಿಗಳು ಹಲವಾರು. ನನ್ನ ಮರ, ಗರುಡನ ಮರಿ, ಬೆಳಕಿನ ಮರಿ, ವಿಕಟಕವಿ, ಕಾರ್ಗಿಲ್ ವೀರ, ಬೆಳಕಿನ ಕುಡಿ ಮುಂತಾದ ಹದಿನೈದು ನಾಟಕಗಳನ್ನು ರಚಿಸಿದ್ದಾರೆ. ಮರಾಠಿ ಮಾವನ ಮದುವೆ ಮತ್ತು ಪಾಚಣ್ಣ, ಬಾಲಣ್ಣರ ಸತ್ಯಾಗ್ರಹ, ಬಂಗಾರಳ್ಳಿಯ ನೆಗಸು ಇವರ ಶಿಶು ಕಥಾಸಂಕಲನಗಳು.

ಜಲವಳ್ಳಿಯವರ ಗೀತನಾಟಕ ಸಂಪುಟ ೨ ರಲ್ಲಿರುವ 'ಸರ್ವೋದಯವಾಗಲಿ ಸರ್ವರಲಿ' ಕೃತಿಯಿಂದ ಈ ಗೀತನಾಟಕವನ್ನು ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

**ಸ್ತುತಿ :** ತಾಯಿ, ಪ್ರಕೃತಿಮಾತೆಯೇ, ಸದಾ ಹಸಿರುಬಣ್ಣದಿಂದ ಶೋಭಿಸುವವಳೇ, ಪರಮಾತ್ಮನ ಚೈತನ್ಯದ ಅಂಶವಾಗಿರುವವಳೇ, ಜ್ಞಾನ ಸ್ವರೂಪಿಣಿಯೇ, ನಾದದಿಂದ ಸಂತಸ ಪಡುವವಳೇ, ಸಮಸ್ತರಲ್ಲೂ ಜೀವ ತುಂಬುವವಳೇ, ಎಲ್ಲರಿಂದಲೂ ಪ್ರಾರ್ಥಿಸಲ್ಪಡುವವಳೇ, ಸದಾ ಮುಗುಳು ನಗೆಯಿಂದ ಶೋಭಿಸುವವಳೇ, ಸಂಸಾರ ಸಾಗರವನ್ನು ದಾಟಿಸತಕ್ಕವಳೇ, ಎಲ್ಲರ ಕಾರ್ಯಗಳಿಗೆಲ್ಲ ಕಾರಣವಾಗಿರತಕ್ಕವಳೇ, ಲೋಕಕ್ಕೆಲ್ಲ ಪೂಜ್ಯಳಾಗಿರತಕ್ಕವಳೇ, ಇದೋ ನಿನಗೆ ನಮನಗಳು.

## ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಜಿಂಕೆಯ ಸೌಂದರ್ಯವನ್ನು ನಾಟಕಕಾರರು ಹೇಗೆ ವರ್ಣಿಸಿದ್ದಾರೆ?
2. ನವಿಲಿನ ಪ್ರವೇಶವನ್ನು ನಾಟಕಕಾರರು ಹೇಗೆ ಚಿತ್ರಿಸಿದ್ದಾರೆ?
3. ಬೇಟೆಗಾರನ ಅಟ್ಟಹಾಸವನ್ನು ನಾಟಕಕಾರರು ಹೇಗೆ ವಿವರಿಸಿದ್ದಾರೆ?
4. ಯಂತ್ರಾಸುರ ಪ್ರಕೃತಿಯನ್ನು ಯಾವ ರೀತಿ ನಾಶಗೊಳಿಸುತ್ತಾನೆ?
5. 'ಪ್ಲಾಸ್ಟಿಕ್ ಬಳಕೆ ಸರ್ವನಾಶಕ್ಕೆ ದಾರಿ' ಎಂಬುದನ್ನು ಹೇಗೆ ವಿವರಿಸಲಾಗಿದೆ?

## ಟಿಪ್ಪಣಿ ಬರೆಯಿರಿ

ಗೀತನಾಟಕದಲ್ಲಿ ಬಂದಿರುವ ಪ್ರಕೃತಿ ಮಾತೆಯ ರೋದನದ ಕುರಿತು ಲಘು ಟಿಪ್ಪಣಿ ಬರೆಯಿರಿ.

## ರೂಪಾಂತರಿಸಿರಿ

ಪ್ರಕೃತಿಮಾತೆ ಮತ್ತು ಕಂದರು ಇವರೊಳಗಿನ ಸಂಭಾಷಣೆಯನ್ನು ಗದ್ಯ ರೂಪದಲ್ಲಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

'ಪರಿಸರದ ಉಳಿವು ಬಾಳಿನ ಗೆಲುವು' ಗೀತನಾಟಕದಲ್ಲಿ ಬಂದಿರುವ ಪ್ರಕೃತಿಮಾತೆಯ ಪಾತ್ರಚಿತ್ರಣವನ್ನು ಮಾಡಿರಿ.

## ಕರಪತ್ರ ರಚಿಸಿರಿ

ಕಾಡಿನ ನಾಶವನ್ನು ತಡೆಗಟ್ಟಲು ಜಾಗೃತರಾಗುವ ಮಾಹಿತಿಯನ್ನೊಳಗೊಂಡ ಕರಪತ್ರವನ್ನು ಮಾಹಿತಿತಂತ್ರಜ್ಞಾನದ ಸಹಾಯದೊಂದಿಗೆ ಸಿದ್ಧಪಡಿಸಿರಿ.

## ಘೋಷಣ ವಾಕ್ಯ ಬರೆಯಿರಿ

ಪ್ರಕೃತಿಯನ್ನು ಸಂರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. 'ಪ್ರಕೃತಿ ಸಂರಕ್ಷಣೆ'ಗೆ ಸಂಬಂಧಿಸಿ ಎರಡು ಘೋಷಣ ವಾಕ್ಯಗಳನ್ನು ಬರೆಯಿರಿ.

## ಅಭಿನಯಿಸಿರಿ

'ಪರಿಸರದ ಉಳಿವು ಬಾಳಿನ ಗೆಲುವು' ಗೀತನಾಟಕದ ಪಾತ್ರಗಳನ್ನು ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.

## ದ್ವಿರುಕ್ತಿ ಪದಗಳನ್ನು ಗುರುತಿಸಿರಿ

ಬನ್ನಿ ಬನ್ನಿ ಕಂದರಿರಾ

ರಂಗು ರಂಗಿನ ಲೀಲೆ

ವಿಧವಿಧ ಕಾಯಿಲೆ

ಬನ್ನಿ ಬನ್ನಿ, ರಂಗು ರಂಗಿನ, ವಿಧವಿಧ ಇಲ್ಲಿ ಒಂದೇ ಪದ ಎರಡೆರಡು ಬಾರಿ ಬಂದಿದೆ. ಈ ರೀತಿಯ ಬಳಕೆಯನ್ನು 'ದ್ವಿರುಕ್ತಿ' ಎನ್ನುತ್ತೇವೆ. ನಾಟಕದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಹೆಕ್ಕಿ ಬರೆಯಿರಿ.

## ಆದೇಶ ಸಂಧಿಯನ್ನು ತಿಳಿಯಿರಿ

ಆದೇಶ ಸಂಧಿಯು ಕನ್ನಡ ಸಂಧಿಯಾಗಿದೆ.

ಉದಾ : ಬಿಡುಗಣ್ಣು, ಅಂದಗೆಡು, ರೂಪಗೆಡು ಇಂತಹ ಪದಗಳು ಪಾಠಭಾಗದಲ್ಲಿ ಬಂದಿವೆ. ಇವುಗಳನ್ನು ಈ ರೀತಿ ವಿಂಗಡಿಸಬಹುದು.

ಬಿಡು + ಕಣ್ಣು - ಬಿಡುಗಣ್ಣು

ಅಂದ + ಕೆಡು - ಅಂದಗೆಡು

ಬೆಟ್ಟ + ತಾವರೆ - ಬೆಟ್ಟದಾವರೆ

ಕಣ್ + ಪನಿ - ಕಂಬನಿ

ಅಡಿಗೆರೆ ಎಳೆದ ಅಕ್ಷರಗಳನ್ನು ಗಮನಿಸಿರಿ. ಉತ್ತರಪದದ ಆದಿಯಲ್ಲಿ 'ಕ' ಅಕ್ಷರ ಬಂದಿದೆ. ಸಂಧಿಯಾದಾಗ 'ಕ' ದ ಬದಲು 'ಗ' ಬಂದಿದೆ. ಹೀಗೆ ವರ್ಗ ಪ್ರಥಮಾಕ್ಷರಗಳಾದ ಕ, ತ, ಪ ಗಳಿಗೆ ಬದಲಾಗಿ ವರ್ಗ ತೃತೀಯಾಕ್ಷರಗಳಾದ ಗ, ದ, ಬ ಗಳು ಆದೇಶವಾಗಿ ಬರುತ್ತವೆ. ಇದನ್ನು 'ಆದೇಶ ಸಂಧಿ' ಎನ್ನುತ್ತಾರೆ.

ಉತ್ತರ ಪದದ ಆದಿಯಲ್ಲಿ ಬರುವ ಪ, ಬ, ಮ ಗಳಿಗೆ ಸಂಧಿಯಾದಾಗ 'ವ' ಕಾರವು ಆದೇಶವಾಗಿ ಬರುತ್ತದೆ. ಇದು ಕೂಡಾ 'ಆದೇಶ ಸಂಧಿ'ಯೆನಿಸುವುದು.

ಉದಾ :

ನೊರೆ + ಪಾಲ್ - ನೊರೆವಾಲ್

ಎಳ + ಬಳ್ಳಿ - ಎಳವಳ್ಳಿ

ನೆಲೆ + ಮನೆ - ನೆಲೆವನೆ

# 2. ಜೀವನ ಮೌಲ್ಯ



ಮಾನವನು ಹಕ್ಕಿಯಂತೆ ಹಾರಾಡುವುದನ್ನೂ, ಮೀನಿನಂತೆ ಈಜುವುದನ್ನೂ ಕಲಿತಿದ್ದಾನೆ. ಆದರೆ ಮೌಲ್ಯಗಳನ್ನು ಅಳವಡಿಸಿಕೊಂಡು ಮಾನವನಾಗಿ ಬಾಳುವುದನ್ನು ಮಾತ್ರ ಕಲಿಯಲಿಲ್ಲ. ಹಾಗಾಗಿ ಇಂದು ವೈಜ್ಞಾನಿಕವಾಗಿ ನಾವು ಎಷ್ಟೇ ಪ್ರಗತಿ ಹೊಂದಿದ್ದರೂ ಸುಖ, ಶಾಂತಿ, ನೆಮ್ಮದಿಗಳಿಲ್ಲದೆ ಹಲವಾರು ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ನೈತಿಕ ಮೌಲ್ಯಗಳು ರೂಪುಗೊಳ್ಳುವಲ್ಲಿ ಸ್ವಾರ್ಥರಹಿತ ಮನೋಭಾವವು ಪ್ರಧಾನ ಪಾತ್ರ ವಹಿಸುತ್ತದೆ. ಅದರ ಒಂದು ಎಳೆಯೇ ಶಾಂತಾದೇವಿ ಮಾಳವಾಡ ಅವರ 'ಸ್ನೇಹ' ಎಂಬ ಲೇಖನ.

ಲೋಕಾನುಭವ, ಲೋಕನೀತಿ, ಸಾಮಾಜಿಕ ನೀತಿ ಮೊದಲಾದ ಮೌಲ್ಯಗಳನ್ನೊಳಗೊಂಡ ಡಿ.ವಿ.ಜಿ.ಯವರ ಕೆಲವು ಮುಕ್ತಕಗಳನ್ನು ನೀಡಲಾಗಿದೆ. ಇದು ಸಮಾಜವನ್ನು ಒಳಿತಿನ ಕಡೆಗೆ ಕೊಂಡೊಯ್ಯಲು ಪೂರಕವಾಗಿದೆ. ಅಲ್ಲದೆ ಸಮಾಜದಲ್ಲಿ ಕಂಡು ಬರುವ ಕೋಮು ಗಲಭೆ ನಿರ್ನಾಮಗೊಂಡು ಮತ ಸೌಹಾರ್ದತೆಯ ಬದುಕು ನಮ್ಮದಾಗಿಸಬೇಕು ಎಂಬುದನ್ನು ಫಕ್ರುದ್ದೀನ್ ಇರುವೈಲ್ ಅವರ 'ಇಸ್ಲಾಮೀಪುರದಲ್ಲೊಂದು ಯಕ್ಷಗಾನ' ಎಂಬ ಕಥೆಯು ಸಾರುತ್ತದೆ.

ಒಟ್ಟಿನಲ್ಲಿ, ಇಡೀ ಘಟಕವು ಮೌಲ್ಯಗಳ ಕುರಿತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವಂತಹ ಆಶಯಗಳನ್ನು ಹೊಂದಿರುವ ಸಾಹಿತ್ಯ ಕೃತಿಗಳನ್ನು ಒಳಗೊಂಡಿದೆ. ಮುಂದಿನ ಪೀಳಿಗೆಯ ನೈತಿಕಮೌಲ್ಯಗಳಲ್ಲಿ ಕುಸಿತ ಉಂಟಾಗದೆ ಪರಸ್ಪರ ಏಕತಾ ಮನೋಭಾವದಿಂದ ಶಾಂತಿಯುತ ಸಮಾಜ ನಿರ್ಮಾಣವಾಗಬೇಕು ಎಂಬ ದೂರದೃಷ್ಟಿಯನ್ನೂ ಹೊಂದಿದೆ.

ವಿದ್ಯಾರ್ಥಿಗಳು ಆಧುನಿಕ ಜಗತ್ತಿನಲ್ಲಿ ಪ್ರಗತಿಯೊಂದಿಗೆ ಕೈಜೋಡಿಸುತ್ತಾ ನೈತಿಕ ಮೌಲ್ಯಗಳನ್ನು ಕೈಬಿಡದೆ ಮತಸೌಹಾರ್ದತೆಯನ್ನು ಮೈಗೂಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣದಲ್ಲಿ ಭಾಗಿಯಾಗುವಂತೆ ಈ ಘಟಕವು ಪ್ರೇರಣೆಯನ್ನು ನೀಡುತ್ತದೆ.

# ಬೇವು ಬೆಲ್ಲದೊಳಿಡಲೇನು ಫಲ

**- ಪುರಂದರದಾಸ**

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದರೇನು ಫಲ

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತತನವನು ಬಿಡದೆ ನಿರಂತರ
ತಪವನು ಮಾಡಿದರೇನು ಫಲ

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

- ಮೇಲೆ ನೀಡಿರುವ ಪುರಂದರದಾಸರ ಕೀರ್ತನೆಯನ್ನು ಓದಿ ಅದರ ಆಶಯವನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಬರೆದು ಮಂಡಿಸಿರಿ.

# ಸ್ನೇಹ

**- ಶಾಂತಾದೇವಿ ಮಾಳವಾಡ**

ಸಣ್ಣ ಇರುವೆಯ ಸಾಲು ಸೈನಿಕರಂತೆ ಸಾಲು ಸಾಲಾಗಿ ಶಿಸ್ತಿನಿಂದ ಹೊರಟಿತ್ತು. ಎದುರಿಗೆ ಕೆಲವು ಇರುವೆಗಳು ಬಂದವು. ಒಂದಕ್ಕೊಂದು ಮುದ್ದಿಟ್ಟವು. ತಮ್ಮ ಮೌನ ಭಾಷೆಯಲ್ಲಿ ಮಾತಾಡಿಕೊಂಡವು. ತಕ್ಷಣ ಇರುವೆಯ ಸಾಲು ದಿಕ್ಕನ್ನು ಬದಲಿಸಿ, ಬೇರೆ ದಿಕ್ಕಿನತ್ತ ಸಾಗಿತು. ಅವುಗಳ ಸ್ನೇಹ ಮನೋಧರ್ಮವನ್ನು ಕಂಡು ಬೆರಗಾಗಿ ನಿಂತೆ. ಸ್ನೇಹಕ್ಕೆ ಸಮಾನ ಮನೋಧರ್ಮ ಅವಶ್ಯ. ನಮ್ಮ ಮನೆಯ ಮುಂದಿನ ಮಾವಿನ ಮರದಲ್ಲಿ ಚೈತ್ರ ಮಾಸದ ಚಿಗುರೆಲೆ ಸವಿಯಲು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ - ಹೀಗೆ ಮೂರು ಹೊತ್ತು ಕೋಗಿಲೆಗಳು ಬರುತ್ತಿದ್ದವು. ಚಿಗುರೆಲೆ ಸವಿದು ಸಂತಸದಿಂದ ಕುಹೂರವಗೈಯ್ಯುತ್ತಿದ್ದವು. ಆ ಕೋಗಿಲೆಯ ಸುಮಧುರ ಸಂಗೀತ ಕೇಳಿ ನನ್ನ ಮನಸ್ಸು ದೇವರತ್ತ ಹೊರಳುತ್ತಿತ್ತು. ತ್ರಿಕಾಲಪೂಜೆ ಮಾಡಿಕೊಳ್ಳುವಂತೆ, ನಿಶ್ಚಿತ ಸಮಯದಲ್ಲಿ ಕೂಗುತ್ತಿದ್ದವು. ದೇವರ ಸೃಷ್ಟಿ ಅದ್ಭುತವೆನಿಸುತ್ತಿತ್ತು. ಮುಂದೆ ಕೆಲದಿನಗಳಲ್ಲಿ ಆ ಮಾಮರದಲ್ಲಿ ಕಾಗೆ ಗೂಡುಕಟ್ಟಿತು. ಮರಿಯನ್ನಿಟ್ಟಿತು. ಕೋಗಿಲೆಗಳು ಬಂದೊಡನೆ ಹಲವಾರು ಕಾಗೆಗಳು ತಮ್ಮ ಕರ್ಕಶ ಧ್ವನಿಯಿಂದ 'ಕಾವ್ ಕಾವ್' ಎಂದು ಒದರಿ ಕೋಗಿಲೆಗಳನ್ನು ಓಡಿಸುತ್ತಿದ್ದವು. ಮನೆಯ ಅಂಗಳದಲ್ಲಿ ಅಕ್ಕಿ, ಅವಲಕ್ಕಿ ಒಣಹಾಕಿದುದನ್ನು ಕಂಡರೆ ಸಾಕು ಕಾಗೆ ಬಳಗವನ್ನೆಲ್ಲ ಕರೆದು ಸ್ವಾಹಾ ಮಾಡುತ್ತಿದ್ದವು. ಅದೇ ಕೋಗಿಲೆಯನ್ನು ಸನಿಹ ಬರಗೊಡುತ್ತಿರಲಿಲ್ಲ. ಶ್ರೀ ಅರವಿಂದ ಆಶ್ರಮದ ಅಂಗಳದಲ್ಲಿ ಹವೆಯ ಪರಿಶುದ್ಧತೆಗಾಗಿ ನೀಲಗಿರಿ ಗಿಡವೊಂದನ್ನು ತಂದು ಹಚ್ಚಿಸಿದರು. ಒಂದು ಸಲ ಬಿರುಗಾಳಿ ಬಿಟ್ಟಾಗ ಆ ಮರ ಗಾಳಿಗೆ ಹೊಯ್ದಾಡಿ ತೊಂದರೆಗೊಳಗಾಯಿತು, ಬಾಡಹತ್ತಿತು. ಆ ಗಿಡದ ಚೇತನ ಆಶ್ರಮದ ತಾಯಿಯವರ ಬಳಿ ಹೋಗಿ ಮೊರೆಯಿಟ್ಟಿತಂತೆ. ತಾಯಿ ಅರಣ್ಯದಲ್ಲಿ ನೂರಾರು ಗಿಡಗಳ ಜೊತೆಗೆ ಸೌಖ್ಯವಾಗಿದ್ದೆ, ಈಗ ಒಬ್ಬಂಟಿಗನಾಗಿದ್ದೇನೆ, ಜೊತೆಗಾರರಿಲ್ಲದೆ ಬೇಸತ್ತಿರುವೆ ಎಂದು. ಮರುದಿನ ತಾಯಿಯವರು ತೋಟದ ಮುಖ್ಯಸ್ಥನನ್ನು ಕರೆದು, ಆ ನೀಲಗಿರಿ ಗಿಡದ ಜೊತೆಗೆ ಮತ್ತೊಂದು ನೀಲಗಿರಿ ಗಿಡವನ್ನು ಹಚ್ಚಿಸಿದರು. ಪಶುಪಕ್ಷಿಗಳಿಗೂ, ಮರ ಬಳ್ಳಿಗಳಿಗೂ ಸಮಾನ ಮನೋಧರ್ಮದ ಸ್ನೇಹಿತರು ಬೇಕೆನಿಸಿರುವಾಗ, ಸಮಾಜಜೀವಿ, ಬೌದ್ಧಿಕ ಪ್ರಜ್ಞೆಯುಳ್ಳ ಮಾನವರು ಸ್ನೇಹಿತರಿಲ್ಲದೆ ಬಾಳುವುದು ಸಾಧ್ಯವೇ? ಸ್ನೇಹ ಪರಿಶುದ್ಧ ಸ್ನೇಹವಾಗಿದ್ದರೆ, ಫಲಾಪೇಕ್ಷೆಯಿಲ್ಲದಿದ್ದರೆ ಕೊನೆಯವರೆಗೂ ಸ್ನೇಹ ಉಳಿದು ಬರುತ್ತದೆ.

ಭಕ್ತಿಯೂ ಅಷ್ಟೇ. ದೇವರ ಬಗೆಗೆ ನಿಜವಾದ ಭಕ್ತಿ, ಶ್ರದ್ಧೆ, ಇದ್ದರೆ ದೇವರು ತನ್ನನ್ನೇ ಭಕ್ತರಿಗೆ ಒಪ್ಪಿಸಿಕೊಳ್ಳುವನು. ಅದೇ ವ್ಯಾಪಾರಿ ಭಾವನೆ ಇದ್ದರೆ ಸ್ನೇಹಿತರು ಸಹ ದೂರ ಸರಿಯುತ್ತಾರೆ. ದೇವರು ತನ್ನಷ್ಟಕ್ಕೆ ತಾನಿರುವನು. 'ಸಂಕಟ ಬಂದಾಗ ವೆಂಕಟರಮಣ'ನನ್ನು ನೆನೆಯುವುದು ಮನುಜರ ಸಹಜ ಸ್ವಭಾವವಾಗಿದೆ. ಅದರಂತೆ ಸಹಾಯ ಲಾಭದ ಆಸೆಗಾಗಿ ಅಧಿಕಾರದಲ್ಲಿದ್ದವರನ್ನು ಶ್ರೀಮಂತರನ್ನು ಸ್ನೇಹಿತರನ್ನಾಗಿ ಪಡೆಯಲು ಪರಿಶ್ರಮಿಸುವವರೂ ಇದ್ದಾರೆ. ಸ್ನೇಹದಲ್ಲಿಯೂ ಹಲವಾರು ಬಗೆಯ ಸ್ನೇಹಗಳಿವೆ.

ನಿಜವಾದ ಸ್ನೇಹಿತರು ಪರಸ್ಪರ ಏನನ್ನೂ ಬಯಸುವುದಿಲ್ಲ. ಅಂತಸ್ತು, ಅಧಿಕಾರ, ಜಾತಿ ಯಾವುದೂ ಸನಿಹದಲ್ಲಿ ಸುಳಿಯುವುದಿಲ್ಲ. ಪ್ರೀತಿ- ಅಂತಃಕರುಣೆಯನ್ನು ಮಾತ್ರ ಬಯಸುತ್ತಾರೆ. ದುಃಖದ ಪ್ರಸಂಗ ಬಂದಾಗ, ಹಲವಾರು ಬಗೆಯ ತೊಂದರೆಗಳು ಎದುರಾದಾಗ, ಆರ್ಥಿಕ ಸಂಕಷ್ಟ ಒದಗಿದಾಗ ಸಹಾಯ ಮಾಡುವವರೇ ನಿಜವಾದ ಸ್ನೇಹಿತರು. ಅಂಥವರು ಗೆಳೆಯರ ಸಂತಸದ ಸಂದರ್ಭದಲ್ಲಿಯೂ ಸಮಾನ ಸುಖವನ್ನು ಅನುಭವಿಸುವರು. ಜಾನಪದ ಗರತಿಯೊಬ್ಬಳು, ನಿಷ್ಠೆಯಿಂದ ದೇವರಲ್ಲಿ ಮೊರೆಯಿಟ್ಟು ಗಂಡು ಮಗನನ್ನು ಬೇಡುವಳು ಕೊನೆಗೆ ದೇವರಿಗೆ ಹೇಳುವಳು :"ಗಂಡು ಮಗುವನ್ನು ಕೊಡು ದೇವರೆ, ನನಗಲ್ಲ ನನ್ನ ಗೆಳತೀಗೆ" ಎನ್ನುವುದು ನಿಜಸ್ನೇಹದ ಸಂಕೇತವಾಗಿದೆ.

ಮೊದಲಿನ ಕಾಲದಲ್ಲಿ ಪತಿಗೃಹಕ್ಕೆ ಹೋದ ಗೆಳತಿಯರೆಲ್ಲ ತೌರೂರಿನಲ್ಲಿ ಕೂಡುತ್ತಿದ್ದರು. ಊರ ಹೊರಗೆ ಬೇವು, ಹುಣಸೆ ಮರಗಳಿಗೆ ಕಟ್ಟಿದ ಜೋಕಾಲಿಯನ್ನು ಆಡುತ್ತಿದ್ದರು. ಅತ್ತೆಯ ಮನೆಯ ಸಂಕಷ್ಟಗಳನ್ನು ಹೆತ್ತವರಿಗೆ ಹೇಳಿದರೆ ಅವರು ನೊಂದುಕೊಳ್ಳುವರೆಂದು ಗೆಳತಿಯ ಎದುರು ತನ್ನ ಅಳಲನ್ನು ತೋಡಿಕೊಳ್ಳುವಳು.

"ಕಂಡಂತ ಗೆಳತವ್ವ ಉಂಡೆಂತ ಕೇಳಿದರ
ಉಂಡೆ ಬಾ ಗೆಳತಿ ಸುಖವಿಲ್ಲ ಬಾಳೀಯ
ದಿಂಡ ನೀರಾಗ ಕೊಳೆತ್ಹಾಂಗ"

ಕೊಳೆಯುತ್ತಿರುವೆ, ಬೆಳದಿಂಗಳು ನನ್ನ ಪಾಲಿಗೆ ಬಿಸಿಲಾಗಿದೆ ಎನ್ನುವಳು. ತಂದೆ ತಾಯಿ ಕೇಳಿದರೆ ದುಃಖಿಸುವರೆಂದು ತನ್ನ ಗಂಡನ ಮನೆಯಲ್ಲಿ ಕೊಡುತ್ತಿದ್ದ ಹಿಂಸೆಯನ್ನು, ಗೆಳತಿಯ ಮುಂದೆ ಮನ ಬಿಚ್ಚಿ ಮಾತನಾಡಿ ಹೃದಯವನ್ನು ಹಗುರಾಗಿಸಿಕೊಳ್ಳುವಳು. ನಿಜವಾದ ಸ್ನೇಹಿತರು, ತಮ್ಮ ಮಕ್ಕಳಿಗೆ ತೋರುವ ಮಮತೆಯನ್ನು ಸ್ನೇಹಿತರ ಮಕ್ಕಳಿಗೂ ತೋರಿಸುವ ಉದಾರ ಹೃದಯದವರೂ ಇದ್ದಾರೆ. ನಾನು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡೆ ಅವರ ಸ್ನೇಹಿತರೆಲ್ಲ ನನ್ನನ್ನು ಮಗಳಂತೆ ನೋಡಿಕೊಂಡರು. ವಾತ್ಸಲ್ಯದ ಧಾರೆಯನ್ನೆರೆದರು.

ಒಳ್ಳೆಯ ಸ್ನೇಹಿತರು ದೊರೆಯುವುದು ಪೂರ್ವ ಜನ್ಮದ ಸುಕೃತವೆನ್ನಬಹುದು. ಪರಸ್ಪರ ಪ್ರೀತಿ ವಿಶ್ವಾಸವುಳ್ಳ ಸ್ನೇಹಿತರಿಗೆ ಜೀವದ ಗೆಳೆಯರೆನ್ನುವರು. ಅಂಥ ಸ್ನೇಹಿತರ ದೇಹ ಎರಡಿದ್ದರೂ ಮನಸ್ಸು, ಆತ್ಮ ಒಂದೇ ಆಗಿರುತ್ತದೆ. ಹೆತ್ತವರ ಮುಂದೆ, ಪತ್ನಿಯ ಮುಂದೆ ಹೇಳಲಾರದ ಸಂಗತಿಗಳನ್ನು ಸ್ನೇಹಿತರೆದುರಿಗೆ ಹೇಳಿ ಪರಿಹಾರ ಕಂಡುಕೊಳ್ಳುವವರೂ ಇದ್ದಾರೆ. ಸ್ನೇಹಿತರೊಂದಿಗೆ ತೆರೆದ ಹೃದಯದಿಂದ ಮಾತನಾಡಿದಾಗ ಸ್ನೇಹ ವರ್ಧಿಸುವುದು. ನಿಸ್ವಾರ್ಥ ಪ್ರೇಮ, ವಿಶ್ವಾಸ, ತ್ಯಾಗದ ತ್ರಿವೇಣಿ ಸಂಗಮವೇ ಸ್ನೇಹವೆನ್ನಬಹುದು.

ಇತ್ತೀಚೆಗೆ ಕೆಲಸವಿದ್ದಾಗ ಸ್ನೇಹದ ಸೋಗು ಹಾಕಿಕೊಂಡು ಬರುವವರೂ ಇದ್ದಾರೆ. ತಮ್ಮ ಕಾರ್ಯಸಾಧನೆಗೈಯಲು, ಯಾರ ಹತ್ತಿರ ಕೆಲಸವಾಗಬೇಕೋ ಅಂತವರನ್ನು ಅವರ ಮನೆಯ ಮಕ್ಕಳನ್ನು ಇಂದ್ರ -ಚಂದ್ರರಿಗೆ ಹೋಲಿಸಿ ಹೊಗಳುವವರೂ ಇದ್ದಾರೆ. ಕೆಲಸವಾದ ನಂತರ ತೆಗಳುತ್ತಾ ಹೋಗುವವರೂ ಇದ್ದಾರೆ. ನಿಮ್ಮಿಂದ ಸಹಾಯ ಪಡೆದು, ಅಧಿಕಾರದಿಂದ, ಶ್ರೀಮಂತಿಕೆಯಿಂದ ನಿಮಗಿಂತ ಮೇಲ್ಮಟ್ಟ ತಲುಪಿದಾಗ ನಿಮ್ಮನ್ನು ಮಾತನಾಡಿಸಲು ಸಂಕೋಚಪಡುತ್ತಾರೆ. ಅಪಮಾನವೆಂದು ಭಾವಿಸುತ್ತಾರೆ. ಸ್ವಾರ್ಥಿಗಳಾದ ಇಂಥ ಸ್ನೇಹಿತರಿಂದ ದೂರವಿರುವುದೇ ಒಳ್ಳೆಯದು. ನಿಜವಾದ ಸ್ನೇಹ ಚೊಕ್ಕ ಚಿನ್ನದಂತಿರುತ್ತದೆ. ಅಂಥವರ ಸ್ನೇಹ ಶಾಶ್ವತ ಸ್ನೇಹವಾಗಿರುತ್ತದೆ. ಪರಸ್ಪರ ಪ್ರೀತಿ, ವಿಶ್ವಾಸದ ದ್ಯೋತಕವಾಗಿರುತ್ತದೆ.

## ಲೇಖಕರ ಪರಿಚಯ



ಕಥೆ, ಕಾದಂಬರಿ, ಜೀವನ ಚರಿತ್ರೆ , ಮಕ್ಕಳ ಸಾಹಿತ್ಯ, ವಿಚಾರ ಸಾಹಿತ್ಯ, ವಿಮರ್ಶೆ ಮುಂತಾಗಿ, ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಗಮನಾರ್ಹ ಸೇವೆ ಸಲ್ಲಿಸಿರುವ ಶಾಂತಾದೇವಿ ಮಾಳವಾಡ ಅವರು ೧೯೨೨ ಡಿಸೆಂಬರ್ ೧೦ ರಂದು ಬೆಳಗಾವಿಯಲ್ಲಿ ಜನಿಸಿದರು . ಅವರ ಮೊದಲ ಹೆಸರು ದಾನಮ್ಮ. ತಂದೆ ಮುರಿಗೆಪ್ಪ ಶೆಟ್ಟರು, ತಾಯಿ ಜಯವಂತಿ ದೇವಿ. ಇವರು 'ಮೊಗ್ಗೆಯ ಮಾಲೆ', 'ಕುಂಕುಮ ಬಲ' ಎಂಬ ಕಥಾ ಸಂಕಲನಗಳನ್ನೂ, 'ಹಚ್ಚೇವು ಕನ್ನಡದ ದೀಪ', 'ಕನ್ನಡದ ತಾಯಿ', 'ರಸಪಾಕ' ಮೊದಲಾದ ಗದ್ಯಕೃತಿಗಳನ್ನೂ, 'ಬಸವ ಪ್ರಕಾಶ'ವೆನ್ನುವ ಕಾದಂಬರಿಯನ್ನೂ, 'ಬೆಳವಡಿ ಮಲ್ಲಮ್ಮ', 'ಕೆಳದಿ ಚೆನ್ನಮ್ಮ', 'ನೀಲಾಂಬಿಕೆ', 'ನಾಗಲಾಂಬಿಕೆ', 'ಗಂಗಾಂಬಿಕೆ', 'ಕುಟುಂಬ' ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳನ್ನೂ ರಚಿಸಿದ್ದಾರೆ. 'ಮಹಿಳೆಯರ ಅಲಂಕಾರ' ಎಂಬುದು ಅವರ ಸಂಶೋಧನ ಕೃತಿಯಾಗಿದೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಅನುಪಮ ಪ್ರಶಸ್ತಿ, ಲಿಪಿ ಪ್ರಾಜ್ಞ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಎಂ. ಕೆ. ಇಂದಿರಾ ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಪ್ರಶಾಂತ' ಇವರಿಗೆ ಸಮರ್ಪಿಸಿದ ಅಭಿನಂದನ ಗ್ರಂಥ. ಇವರು ೨೦೦೫ ಆಗಸ್ಟ್ ೭ ರಂದು ನಿಧನರಾದರು. ಈ ಪಾಠಭಾಗವನ್ನು ಇವರ 'ಹಚ್ಚೇವು ಕನ್ನಡದ ದೀಪ' ಎಂಬ ಗದ್ಯ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನೀಲಗಿರಿ ಗಿಡದ ಚೇತನವು ಆಶ್ರಮದ ತಾಯಿಯ ಬಳಿ ಏನೆಂದು ಮೊರೆಯಿಟ್ಟಿತು?
2. ಗರತಿಯು ದೇವರಲ್ಲಿ ಏನೆಂದು ಬೇಡಿಕೊಳ್ಳುತ್ತಾಳೆ?
3. ತವರಿಗೆ ಬಂದ ಹೆಣ್ಣುಮಗಳೊಬ್ಬಳು ತನ್ನ ಅಳಲನ್ನು ಗೆಳತಿಯಲ್ಲಿ ಹೇಗೆ ತೋಡಿಕೊಂಡಳು?
4. ಸ್ವಾರ್ಥಿಗಳಾದ ಸ್ನೇಹಿತರಿಂದ ದೂರವಿರುವುದು ಉತ್ತಮ ಎಂದು ಲೇಖಕರು ಹೇಳಲು ಕಾರಣವೇನು?

## ಲೇಖನ ಬರೆಯಿರಿ

"ಉತ್ತಮ ವ್ಯಕ್ತಿತ್ವ ರೂಪುಗೊಳಿಸುವಲ್ಲಿ ಉತ್ತಮ ಸ್ನೇಹ ಸಂಬಂಧಗಳು ಮಹತ್ತರ ಪಾತ್ರವಹಿಸುತ್ತವೆ" ಈ ಹೇಳಿಕೆಯನ್ನು ವಿಶ್ಲೇಷಿಸಿ ಲೇಖನ ಬರೆಯಿರಿ.

## ಸಮರ್ಥಿಸಿ ಬರೆಯಿರಿ

ಉತ್ತಮ ಸಮಾಜ ನಿರ್ಮಾಣಕ್ಕೆ ನಿಸ್ವಾರ್ಥ ಸ್ನೇಹ ಸಂಬಂಧಗಳು ಅತ್ಯಗತ್ಯ - ಈ ಮಾತನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿ ಬರೆಯಿರಿ.

## ಆಶಯ ಬರೆಯಿರಿ

'ಸ್ನೇಹ' ಪಾಠದಲ್ಲಿ ನಿಜವಾದ ಸ್ನೇಹಿತರು ಯಾರು ಎಂಬುದನ್ನು ತಿಳಿದಿರುವಿರಿ. ಈ ಹಿನ್ನೆಲೆಯಲ್ಲಿ ಕೆಳಗೆ ನೀಡಿರುವ ತ್ರಿಪದಿಯ ಆಶಯವನ್ನು ಬರೆಯಿರಿ.

ಉತ್ತಮರ ಗೆಳೆತನ ಪುತ್ಥಳಿ ಬಂಗಾರ |
ಮತ್ತ ಹೀನರ ಗೆಳೆತನ | ಮಾಡಿದರ |
ಹಿತ್ತಾಳಿಗಿಂತ ಬಲು ಹೀನ ||

## ಪ್ರಬಂಧ ಬರೆಯಿರಿ

ನಿಜವಾದ ಸ್ನೇಹಿತರು ಪರಸ್ಪರ ಏನನ್ನೂ ಬಯಸುವುದಿಲ್ಲ . ಅಂತಸ್ತು, ಅಧಿಕಾರ, ಜಾತಿ ಯಾವುದೂ ಸನಿಹದಲ್ಲಿ ಸುಳಿಯುವುದಿಲ್ಲ. ಪ್ರೀತಿ- ಅಂತಃಕರುಣೆಯನ್ನು ಮಾತ್ರ ಬಯಸುತ್ತಾರೆ. ಪಾಠದಲ್ಲಿ ಬಂದಿರುವ ಈ ಮಾತಿನ ಆಧಾರದಲ್ಲಿ 'ಗೆಳೆತನದ ಮಹತ್ವ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

## ತದ್ಭವ ರೂಪ ಬರೆಯಿರಿ

ಕನ್ನಡದ ಉಚ್ಚಾರ ವ್ಯವಸ್ಥೆಗೆ ಅನುಗುಣವಾಗಿ ಬದಲಾವಣೆಗೊಂಡ ಸಂಸ್ಕೃತ ಪದಗಳನ್ನು ತದ್ಭವ ಪದಗಳು ಎನ್ನುತ್ತಾರೆ. ತದ್ಭವ (ತತ್ ಭವ) ಎಂದರೆ ಅದರಿಂದ ಹುಟ್ಟಿದ್ದು ಎಂದರೆ ಸಂಸ್ಕೃತದಿಂದ ಹುಟ್ಟಿದ್ದು ಎಂಬ ಅರ್ಥವನ್ನು ನೀಡುತ್ತದೆ.

ಕೆಳಗೆ ನೀಡಿರುವ ಸಂಸ್ಕೃತ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

ಸ್ನೇಹ, ಧ್ವನಿ, ಸುಖ, ಪಕ್ಷಿ, ಗೃಹ, ತ್ಯಾಗ, ಕಾರ್ಯ.

# ಮಂಕುತಿಮ್ಮನ ಕಗ್ಗ

- ಡಿ. ವಿ. ಗುಂಡಪ್ಪ

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು |
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ||
ಒಂದೇ ಗಾಳಿಯನುಸಿರ್ವ ನರ ಜಾತಿಯೊಳಗೆಂತು |
ಬಂದುದೀ ವೈಷಮ್ಯ- ಮಂಕುತಿಮ್ಮ ||೧||

ಕಟ್ಟಡದ ಪರಿಯನಿಟ್ಟಿಗೆಯೆಂತು ಕಂಡೀತು |
ಗಟ್ಟಿ ನಿಲದದು ಬೀಳೆ ಗೋಡೆ ಬಿರಿಯುವುದು ||
ಸೃಷ್ಟಿ ಕೋಟಿಯಲಿ ನೀನೊಂದಿಟಿಕೆ;ಸೊಟ್ಟಾಗೆ |
ಪೆಟ್ಟು ತಿನ್ನುವೆ ಜೋಕೆ- ಮಂಕುತಿಮ್ಮ || ೨ ||

ಒಣಗಿ ಬೇಸಗೆಯಿಂದ ಮಣ್ಣಾಗಿ ಕಾಣದಿಹ |
ತೃಣ ಮೊಳೆಯುವುದು ಮರಳಿ ಹನಿ ಎರಡು ಬೀಳೆ ||
ಅಣಗಿರ್ದು ನರನಾಶೆಯಂತು ಕಷ್ಟದ ದಿನದಿ |
ಕುಣಿವುದನುಕೂಲ ಬರೆ- ಮಂಕುತಿಮ್ಮ || ೩ ||

ಹೊಟ್ಟೆಯೊಂದರ ರಗಳೆ ಸಾಲದೆಂದೇನೋ ವಿಧಿ |
ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್ ||
ಹೊಟ್ಟೆ ತುಂಬಿದ ತೋಳ ಮಲಗೀತು; ನೀಂ ಪೆರರ |
ದಿಟ್ಟಿಸುತ ಕರುಬುವೆಯೊ- ಮಂಕುತಿಮ್ಮ || ೪ ||

ತಲೆ ಕೊಡವ ತಳೆದಿರಲು, ಕೈ ಕತ್ತಿ ಪಿಡಿದಿರಲು |
ಬಳುಕು ಹಗ್ಗದ ಮೇಲೆ ತಾನಡಿಯನಿಡುತ ||
ಕೆಲ ಬಲಕೆ ಬೀಳದೆ ಮುನ್ನಡೆವ ಡೊಂಬನುಪಾಯ |
ಕಲೆಯೆ ಜೀವನಯೋಗ- ಮಂಕುತಿಮ್ಮ || ೫ ||

ಅಡಿಜಾರಿ ಬೀಳುವುದು, ತಡವಿಕೊಂಡೇಳುವುದು |
ಕಡುಬ ನುಂಗುವುದು, ಕಹಿಮದ್ದ ಕುಡಿಯುವುದು ||
ದುಡುಕಿ ಮತಿದಪ್ಪುವುದು, ತಪ್ಪನೊಪ್ಪೆನ್ನುವುದು |
ಬದುಕೆಂಬುದಿದು ತಾನೆ?- ಮಂಕುತಿಮ್ಮ || ೬ ||

## ಕವಿ ಪರಿಚಯ



ಡಿವಿಜಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕನ್ನಡದ ಪ್ರಸಿದ್ಧ ಸಾಹಿತಿಗಳೂ, ಪತ್ರಕರ್ತರೂ, ಸುಧಾರಣಾವಾದಿಗಳೂ, ಚಿಂತನಶೀಲರೂ, ಸಾಮಾಜಿಕ ಕಾರ್ಯಕರ್ತರೂ ಆಗಿದ್ದರು. ಅವರು ವೆಂಕಟರಮಣಯ್ಯ ಹಾಗೂ ಅಲಮೇಲಮ್ಮ ದಂಪತಿಗಳಿಗೆ ೧೮೮೭ ಮಾರ್ಚ್ ೧೭ ರಂದು ಕೋಲಾರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ, ಅಂತಃಪುರ ಗೀತೆ, ಉಮರನ ಒಸಗೆ, ಶೃಂಗಾರ ಮಂಗಳಂ ಮುಂತಾದವು ಅವರ ಪದ್ಯ ಕೃತಿಗಳು. ಜೀವನ ಸೌಂದರ್ಯ ಮತ್ತು ಸಾಹಿತ್ಯ, ಬಾಳಿಗೊಂದು ನಂಬಿಕೆ, ಸಂಸ್ಕೃತಿ, ಜ್ಞಾಪಕ ಚಿತ್ರ ಶಾಲೆ, ಹಲವು ಮಹನೀಯರು ಅವರ ಗದ್ಯ ಕೃತಿಗಳು. ಅವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ಎಂಬ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ೧೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅವರು ೧೯೭೫ ಅಕ್ಟೋಬರ್ ೭ ರಂದು ನಿಧನರಾದರು. ಪ್ರಸ್ತುತ ಮುಕ್ತಕಗಳನ್ನು ಅವರ 'ಮಂಕುತಿಮ್ಮನ ಕಗ್ಗ' ಎಂಬ ಕೃತಿಯಿಂದ ಆರಿಸಲಾಗಿದೆ.

### ವಿಶದೀಕರಣ :

**ಮುಕ್ತಕ** - ವಿಶಾಲವಾದ ಮತ್ತು ಆಳವಾದ ಜೀವನಾನುಭವಗಳನ್ನು ಮನಮುಟ್ಟುವಂತೆ ಬಿಡಿಬಿಡಿಯಾಗಿ ಪದ್ಯ ರೂಪದಲ್ಲಿ ಹೇಳುವ ರಚನೆಗಳನ್ನು ಮುಕ್ತಕ ಎನ್ನುತ್ತಾರೆ. ಇವುಗಳಲ್ಲಿ ಹಾಸ್ಯ, ವಿಡಂಬನೆಗಳು ಬರುತ್ತವೆ. ಚುಟುಕುಗಳು, ಶತಕಗಳು, ವಚನಗಳು, ಸರ್ವಜ್ಞನ ತ್ರಿಪದಿಗಳು ಮುಕ್ತಕಗಳ ಸಾಲಿನಲ್ಲಿ ನಿಲ್ಲುತ್ತವೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನರಜಾತಿಯೆಲ್ಲಾ ಒಂದೇ ಎಂಬ ಭಾವನೆಯನ್ನು ಕವಿ ತಮ್ಮ ಕಗ್ಗದಲ್ಲಿ ಹೇಗೆ ವಿವರಿಸಿದ್ದಾರೆ?
2. 'ಸೃಷ್ಟಿಕೋಟಿಯಲಿ ನೀನೊಂದಿಟಿಕೆ' ಎಂಬ ಮಾತಿನ ಔಚಿತ್ಯವೇನು?
3. ಮನುಷ್ಯನ ಆಸೆ ಅನುಕೂಲವಾದ ಸ್ಥಿತಿ ಬಂದೊಡನೆ ಚಿಗುರುತ್ತದೆ ಎನ್ನುವುದಕ್ಕೆ ಡಿ.ವಿ.ಜಿ.ಯವರು ನೀಡಿರುವ ಹೋಲಿಕೆ ಯಾವುದು?
4. ಮನುಷ್ಯರಲ್ಲಿ ತುಂಬಿರುವ ಹೊಟ್ಟೆಕಿಚ್ಚಿನ ಕುರಿತಾಗಿ ಕವಿ ತಮ್ಮ ಕಗ್ಗದಲ್ಲಿ ಏನೆಂದು ವ್ಯಕ್ತಪಡಿಸಿದ್ದಾರೆ?
5. ಮಾನವ ಬದುಕು ಮತ್ತು ಡೊಂಬರಾಟದ ಮಹತ್ವವನ್ನು ಕವಿ ಹೇಗೆ ವಿವರಿಸಿದ್ದಾರೆ?

## ಹಾಡಿರಿ

ಪಾಠದಲ್ಲಿ ನೀಡಿರುವ ಮುಕ್ತಕಗಳನ್ನು ರಾಗವಾಗಿ ಹಾಡಿರಿ.

## ಪದವಿಂಗಡಣೆ ಮಾಡಿರಿ

| | | |
|---|---|---|
| ಧಾನ್ಯವನುಣ್ಣುತ್ತೊಂದೆ | - | ಧಾನ್ಯವನು+ ಉಣ್ಣುತ+ ಒಂದೆ |
| ನೀನೊಂದಿಟಿಕೆ | - | ನೀನು +ಒಂದು + ಇಟಿಕೆ |
| ನರನಾಶೆಯಂತು | - | ನರನ +ಆಶೆ +ಅಂತು |
| ಡೊಂಬನುಪಾಯ | - | ಡೊಂಬನ + ಉಪಾಯ |
| ಮತಿದಪ್ಪುವುದು | - | ಮತಿ +ತಪ್ಪುವುದು |

ಇದೇ ಮಾದರಿಯಲ್ಲಿ ಕೆಳಗೆ ನೀಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

- ಗಾಳಿಯನುಸಿರ್ವ -
- ಪರಿಯನಿಟ್ಟಿಗೆಯೆಂತು -
- ಕುಣಿವುದನುಕೂಲ -
- ಹೊಟ್ಟೆಯೊಂದರ -
- ತಾನಡಿಯನಿಡುತ -
- ತಡವಿಕೊಂಡೇಳುವುದು -
- ತಪ್ಪನೊಪ್ಪೆನ್ನುವುದು -

## ಆಶಯ ಬರೆಯಿರಿ

'ಮಂಕುತಿಮ್ಮನ ಕಗ್ಗ'ದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಕಗ್ಗದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಹೊಟ್ಟೆಯೊಂದರ ರಗಳೆ ಸಾಲದೆಂದೇನೋ ವಿಧಿ
ಹೊಟ್ಟೆ ಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್

## ಕಿರುಲೇಖನ ಬರೆಯಿರಿ

ಮುಕ್ತಕಗಳಲ್ಲಿ ವ್ಯಕ್ತವಾಗಿರುವ ಜೀವನ ಮೌಲ್ಯಗಳ ಕುರಿತು ಕಿರುಲೇಖನ ಬರೆಯಿರಿ.

## ಹೋಲಿಸಿ ಬರೆಯಿರಿ

ಕೆಳಗೆ ಡಿ. ವಿ. ಜಿ ಯವರ ಮುಕ್ತಕದ ಸಾಲುಗಳನ್ನೂ, ರಮಾನಂದ ಬನಾರಿಯವರ ಕವನದ ಕೆಲವು ಸಾಲುಗಳನ್ನೂ ನೀಡಲಾಗಿದೆ. ಅವುಗಳನ್ನು ಓದಿ ಹೋಲಿಸಿ ಟಿಪ್ಪಣಿಯೊಂದನ್ನು ತಯಾರಿಸಿರಿ.

- ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು ।
  ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥
  ಒಂದೇ ಗಾಳಿಯನುಸಿರ್ವ ನರಜಾತಿಯೊಳಗೆಂತು ।
  ಬಂದುದೀ ವೈಷಮ್ಯ – ಮಂಕುತಿಮ್ಮ ॥

- ಒಂದೆ ಗಾಳಿಯೊಳುಸಿರು ಒಂದೆ ನೀರ್ಕುಡಿಯುವೆವು
  ನಾವು ನೀವೆಂದೆಂಬ ಭೇದ ಸಲ್ಲ ।
  ಒಂದೆ ಮನೆಯಲಿ ಹುಟ್ಟಿ ಒಂದೇ ಬಾಳನು ಬದುಕಿ
  ಒಂದೆಡೆಗೆ ಸಾರುವೆವು ಕೇಳಿ ಸೊಲ್ಲ ॥

## ವಾಕ್ಯ ರಚಿಸಿರಿ

ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಪರ್ಯಾಯ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನುರಚಿಸಿರಿ.

- ಒಂದೆ <u>ಗಗನ</u>ವ ಕಾಣುತೊಂದೆ ನೆಲವನು ತುಳಿಯುತ
- ಒಂದೆ ಗಾಳಿಯನುಸಿರ್ವ <u>ನರ</u> ಜಾತಿಯೊಳಗೆಂತು ಬಂದುದೀ ವೈಷಮ್ಯ
- <u>ಹೊಟ್ಟೆ</u> ತುಂಬಿದ ತೋಳ ಮಲಗೀತು

## ಸಮಾಸ ತಿಳಿಯಿರಿ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರವಾಗಿ ಸೇರಿ ಒಂದೇ ಪದವಾಗುವುದನ್ನು ಸಮಾಸ ಎಂದು ಕರೆಯುತ್ತಾರೆ.

ಕಡುಬನುಂಗುವುದು ಕಹಿಮದ್ದ ಕುಡಿಯುವುದು

ಮೇಲಿನ ಸಾಲಿನಲ್ಲಿ ಬಂದಿರುವ ಕಹಿಮದ್ದು ಎಂಬ ಪದವು ಸಮಾಸ ಪದವಾಗಿದೆ. ಸಮಾಸ ಪದವನ್ನು ಸಮಸ್ತ ಪದವೆಂದೂ ಕರೆಯುತ್ತಾರೆ. ಕಹಿಮದ್ದು ಎಂಬ ಪದವನ್ನು ಕಹಿಯಾದ ಮದ್ದು ಎಂದು ಬಿಡಿಸಿ ಬರೆಯಬಹುದು. ಈ ರೀತಿ ವಿಗ್ರಹಿಸಿ ಬರೆಯುವುದನ್ನು ವಿಗ್ರಹ ವಾಕ್ಯ ಎನ್ನುವರು.

ಸಮಾಸ ಪದವೊಂದನ್ನು ವಿಗ್ರಹಿಸಿ ಬರೆದಾಗ ಅದರಲ್ಲಿ ಪೂರ್ವಪದ ವಿಶೇಷಣ ಮತ್ತು ಉತ್ತರಪದ ನಾಮಪದವಾಗಿದ್ದರೆ ಅದನ್ನು ಕರ್ಮಧಾರಯ ಸಮಾಸ ಎನ್ನುವರು. ಕಹಿಮದ್ದು ಕರ್ಮಧಾರಯ ಸಮಾಸಕ್ಕೆ ಉದಾಹರಣೆಯಾಗಿದೆ. ಕರ್ಮಧಾರಯ ಸಮಾಸವಾಗುವ ಕೆಲವು ಪದಗಳನ್ನು ಮತ್ತು ಅವುಗಳ ವಿಗ್ರಹವಾಕ್ಯಗಳನ್ನು ಕೆಳಗೆ ನೀಡಲಾಗಿದೆ.

ಹೆಮ್ಮರ - ಹಿರಿದು ಮರ

ಹೆಬ್ಬುಲಿ - ಹಿರಿದು ಹುಲಿ

ಕಾರ್ಮೋಡ - ಕರಿದು ಮೋಡ

ಹೆಜ್ಜೇನು - ಹಿರಿದು ಜೇನು

ಕರ್ಮಧಾರಯ ಸಮಾಸವಾಗುವ ಇನ್ನಷ್ಟು ಪದಗಳನ್ನು ಹಿಂದಿನ ಪಾಠಗಳಿಂದ ಆಯ್ದು ಬರೆಯಿರಿ.

# ಇಸ್ಲಾಮೀಪುರದಲ್ಲೊಂದು ಯಕ್ಷಗಾನ

**- ಫಕ್ರುದ್ದೀನ್ ಇರುವೈಲ್**

ಶಂಕರನಾರಾಯಣನ ಕಂಠಕ್ಕೆ ವಿಶಿಷ್ಟ ಶಕ್ತಿ ಇದೆ. ಆತ ಭಾಗವತಿಕೆ ನಡೆಸುತ್ತಾನೆಂದರೆ ಆ ಯಕ್ಷಗಾನಕ್ಕೆ ಏನೋ ಒಂದು ಕಳೆ. ಟೆಂಟಿನ ತುಂಬಾ ಜನ ಮುಗಿಬೀಳುತ್ತಿದ್ದರು. ಯಕ್ಷಗಾನಕ್ಕೆ ಟಿಕೆಟ್ ಸಿಗದೆ ಆತನ ಭಾಗವತಿಯನ್ನು ನೋಡಲಾಗದೆ ಎಷ್ಟೋ ಮಂದಿ ಕೈ ಕೈ ಹಿಸುಕಿಕೊಂಡು ಹಿಂದಕ್ಕೆ ಹೋಗಿಬಿಡುತ್ತಿದ್ದರು. ಅಂತಹವರು ಟೆಂಟಿನ ಹೊರಗೆ ಕುಳಿತು ಮೈಕಿನಲ್ಲಿ ಕೇಳಿ ಬರುವ ಆತನ ಹಾಡುಗಾರಿಕೆಯನ್ನು ಕೇಳಿಸಿಕೊಂಡು ಧನ್ಯರಾಗುತ್ತಿದ್ದರು. ಆತ ಭಾಗವತಿಕೆ ನಡೆಸುವಾಗ ಚೆಂಡೆಯವನಿಗೂ ಮದ್ದಳೆಯವನಿಗೂ ಎಲ್ಲಿಲ್ಲದ ಹುರುಪು. ಇನ್ನು ರಂಗಮಂಟಪಕ್ಕೆ ಬಂದ ಪಾತ್ರಧಾರಿಗಳಂತೂ, ಪಾತ್ರಗಳೇ ಮೈಮೇಲೆ ಬಂದಂತೆ ಕುಣಿಯುತ್ತಿದ್ದರು. ಆದರೆ ಅಂದು, ಇಸ್ಲಾಮೀಪುರದ ಆ ದೊಡ್ಡ ಬಯಲಿನಲ್ಲಿ ಅಂದು ಝುಗಝುಗಿಸುವ ರಂಗಮಂಟಪ ಹಾಕಿದ್ದರು. ಟೆಂಟಿನೊಳಗೆಲ್ಲಾ ಜನವೋಜನ. ಯಾವ ಕ್ಷಣದಲ್ಲಿ ರಂಗ ಮಂಚದ ಮೇಲೆ ಶಂಕರನಾರಾಯಣ ಬಂದು ಭಾಗವತಿಕೆ ನಡೆಸುತ್ತಾನೋ ಎಂಬ ಕಾತರದಲ್ಲಿದ್ದರು ಜನ. ಮೇಳದ ವ್ಯವಸ್ಥಾಪಕರಿಗಂತೂ, ಹೇಳಲಾರದಷ್ಟು ಖುಷಿ, ಟೆಂಟು ತುಂಬಿದೆ; ಸಾಕಷ್ಟು ಹಣದ ಗಳಿಕೆಯಾಗಿದೆ.

ಎಲ್ಲರೂ ಬಂದಿದ್ದಾರೆ ಚೆಂಡೆಯವನೂ, ಮದ್ದಳೆಯವನೂ ಬಂದಿದ್ದಾರೆ. ಮೇಳದ ವ್ಯವಸ್ಥಾಪಕರು,'ಸರಿ, ಇನ್ನು ರಂಗಮಂಚಕ್ಕೆ ಹೊರಡಿ!' ಎಂದು ಅಪ್ಪಣೆ ಕೊಡುತ್ತಿದ್ದಂತೆ ಯಾರೋ ಹೇಳಿದರು,

"ಅರೇ ಶಂಕರನಾರಾಯಣ ಎಲ್ಲಿ?"

ವ್ಯವಸ್ಥಾಪಕರಿಗೆ ಒಮ್ಮೆಲೆ ದಿಗಿಲು ಹುಟ್ಟಿತು. ಮೈಯಲ್ಲೆಲ್ಲಾ ನಡುಕ ಉಂಟಾಯಿತು. "ಈತ ಎಲ್ಲಿ ತಪ್ಪಿಸಿಕೊಂಡಿದ್ದಾನೆ? ಹೀಗ್ಯಾಕೆ ಮಾಡಿದ ಈತ?.ಆತ ಹೀಗೆ ಕೈ ಕೊಟ್ಟರೆ ಹೇಗೆ?" ಹೀಗೆ ಅಂದುಕೊಂಡು ಗಟ್ಟಿಯಾಗಿ ಹೇಳಿದರು.

"ಯಾರಲ್ಲಿ? ಶಂಕರನಾರಾಯಣ ಎಲ್ಲಿದ್ದಾನೆ ಹುಡುಕಿ ಬೇಗ ಕರೆ ತನ್ನಿ!"

ವ್ಯವಸ್ಥಾಪಕರಾದ ಅಪ್ಪಾಜಿ ಶಾಸ್ತ್ರಿಗಳು ಗಾಬರಿಗೊಂಡಿದ್ದರು. ಹದಿನೈದು ದಿನಗಳ ಹಿಂದೆ ಪರಸ್ಪರ ಸೌಹಾರ್ದತೆಯಿಂದ ಇದ್ದ ಇಸ್ಲಾಮೀಪುರ ಒಮ್ಮೆಲೇ ಭುಗಿಲೆದ್ದಿತ್ತು. ಇಸ್ಲಾಮೀಪುರ ಕೋಮು ಭಾವನೆಯಿಂದ ನರಳಿತ್ತು. ಕಾರಣಗಳು ಏನೂ ಇದ್ದಿರಲಾರವು. ಆದರೆ ಯಾರೋ ಕಿಡಿಗೇಡಿ ಮಾಡಿದ ದುರಂತವೊಂದಕ್ಕೆ ಇಡೀ ಊರೇ ದ್ವೇಷಾಗ್ನಿಯಿಂದ ಬೇಯತೊಡಗಿತ್ತು. ಇಂತಹ ಸಮಯದಲ್ಲಿ ಇಸ್ಲಾಮೀಪುರದಲ್ಲಿ ಯಕ್ಷಗಾನ ಆಡಲೇಬೇಕಾದ ಸಂದರ್ಭ ಬಂದಿತ್ತು. ಆದರೆ ಈಗ ನೋಡಿದರೆ ಭಾಗವತಿಕೆ ನಡೆಸುವ ಶಂಕರನಾರಾಯಣ ನಾಪತ್ತೆ. ಅಲ್ಲಿ ಗಲಿಬಿಲಿ

ಉಂಟಾಯಿತು. ಶಂಕರನಾರಾಯಣ ಬರದಿದ್ದರೆ ಭಾಗವತಿಕೆ ನಡೆಸುವವರು ಯಾರು?

ಅಷ್ಟರಲ್ಲಿ ಯಾರೋ ಓಡಿ ಬಂದು ಹೇಳಿದರು "ಶಂಕರನಾರಾಯಣ ಮನೆಯಲ್ಲಿಯೇ ಇದ್ದಾನೆ. ಅವನು ಕಂಬಳಿ ಹೊದ್ದು ಮಲಗಿದ್ದಾನೆ".

"ವಿಪರೀತ ಚಳಿ ಜ್ವರ. ಒಂದೇ ಸವನೆ ಕೆಮ್ಮುತ್ತಾನೆ. ಸ್ವರ ಹೊರಡುತ್ತಿಲ್ಲ ಪಾಪ!"

"ಅಂದರೆ, ಶಂಕರ ಬರುವುದಿಲ್ಲವಂತೋ?"

"ಹುಂ.... ಹೇಗೆ ಬರಲಿಕ್ಕಾಗುತ್ತೆ ಬಂದರೂ ಅವನಿಂದ ಸ್ವರ ಹೊರಟೀತೇ?"

ಅಪ್ಪಾಜಿ ಶಾಸ್ತ್ರಿಗಳು ಒಮ್ಮೆಲೇ ಹೆಗಲ ಮೇಲಿನ ಬೈರಾಸನ್ನು ಕೊಡವಿಕೊಂಡು ಧಿಗ್ಗನೆ ಎದ್ದು ನಿಂತರು. "ಏನಾದರೂ ಮಾಡಬೇಕಲ್ಲ ಮಾರಾಯ, ಯಕ್ಷಗಾನ ನಿಲ್ಲಿಸಲಿಕ್ಕಾಗುತ್ತದೆಯೇ?" ಎಂದುಕೊಂಡು ಒಂದಿಬ್ಬರನ್ನು ಕರೆದುಕೊಂಡು ಶಂಕರನಾರಾಯಣನ ಮನೆಯ ಕಡೆ ಧಾವಿಸಿದರು.

"ಏನಿದು ಶಂಕರ, ಒಳ್ಳೆಯ ಟೈಮಿನಲ್ಲಿ ನಿನಗೆ ಹೀಗಾಯ್ತಲ್ಲ?"

"ನೀ ಹೇಗಾದರೂ ಮಾಡಿ ಭಾಗವತಿ ಕೆ ನಡೆಸಬೇಕಲ್ಲ? ಭಾಗವತಿಕೆ ಇಲ್ಲದೆ ಯಕ್ಷಗಾನ ನಡೆಯುವುದು ಹೇಗೆ? ದುಡ್ಡು ಕೊಟ್ಟು ನೋಡಲು ಬಂದೋರೆಲ್ಲಾ ಯಕ್ಷಗಾನ ನಡೆಯೋದಿಲ್ಲ ಎಂದರೆ ದಾಂದಲೆ ಎಬ್ಬಿಸಿಬಿಟ್ಟಾರು. ಟೆಂಟನ್ನೆಲ್ಲಾ ಸುಟ್ಟುಬಿಟ್ಟಾರು.!"

"ಯಕ್ಷಗಾನ ನಡೆಯುತ್ತೆ. ಅದಕ್ಕೆ ನೀವೇನು ಭಯಪಡಬೇಕಾಗಿದ್ದಿಲ್ಲ!"

"ಅದು ಹೇಗೆ ಶಂಕರಾ?"

"ನಿಮಗೆ ಅದ್ರಾಮ ಗೊತ್ತಿರಬೇಕಲ್ಲ? ಅದೇ ಅಬ್ಬು ಬ್ಯಾರಿಗಳ ಮಗ. ಆತ ಬಂದು ಭಾಗವತಿಕೆ ನಡೆಸುತ್ತಾನೆ!"

"ಎಂತಹ ಮಾತಿದು ಶಂಕರಾ? ನೀನು ಪರಿಸ್ಥಿತಿ ಗೊತ್ತಿದ್ದೂ ಹೀಗೆ ಹೇಳುವುದೇ?"

"ಯಕ್ಷಗಾನ ನಡೆಯಬೇಕಾದರೆ ಅದ್ರಾಮ ಭಾಗವತಿಕೆ ಮಾಡಲೇಬೇಕು. ಈಗ ಹೊತ್ತಿ ಉರಿಯುವ ಈ ಊರು ಅದ್ರಾಮನಿಂದ ಮತ್ತೆ ಒಂದಾಗುತ್ತೆ!"

"ಹಾಗನ್ನುತೀಯಾ ನೀನು?!"

"ಹೌದು!"

"ಆದರೆ ಆತನನ್ನು ಕರೆತರುವವರು ಯಾರು?"

"ಅದಕ್ಕೆಲ್ಲ ನಾ ವ್ಯವಸ್ಥೆ ಮಾಡಿದ್ದೇನೆ."

ಅಷ್ಟರಲ್ಲಿ ಅದ್ರಾಮ ಅಲ್ಲಿ ಕಾಣಿಸಿಕೊಂಡ.

ಅದ್ರಾಮ ಶಂಕರನಾರಾಯಣನ ಒಡನಾಡಿಯಾಗಿಯೇ ಬೆಳೆದಿದ್ದವ. ಎರಡು ದೇಹ ಒಂದೇ ಜೀವ ಎನ್ನುವಂತಿದ್ದರು. ಅವರ ನಡುವೆ ಎಂದೂ ಜಾತಿಭೇದದ ಸೋಂಕು ಸುಳಿದಿರಲಿಲ್ಲ. ಶಂಕರ ಮನೆಯಲ್ಲಿ ಕುಳಿತು ಯಕ್ಷಗಾನದ ಹಾಡಿನಲ್ಲಿ ತಲ್ಲೀನನಾಗುವಾಗ, ಅವನಂತೆ ಹಾಡಲು ಕಲಿತಿದ್ದ ಅದ್ರಾಮನ ಹಠ, ಸ್ವರದಲ್ಲಿರುವ ಲಾಲಿತ್ಯ ಮತ್ತು ಭಾಷೆಯ ಮೇಲಿನ ಹಿಡಿತ ಕಂಡು ಶಂಕರನಾರಾಯಣ ವಿಸ್ಮಿತನಾಗಿದ್ದ. ಎಷ್ಟು ಚೆನ್ನಾಗಿ ಹಾಡುತ್ತಾನೆ ಈತ ಎಂದು ಅಚ್ಚರಿಪಟ್ಟು ಯಾವ ಈರ್ಷೆಯೂ ಇಲ್ಲದೆ ಅವನು ತಾಳಕ್ಕೆ ತಕ್ಕಂತೆ ಹಾಡುವುದನ್ನು ಕಲಿಸಿದ್ದ. ಹಾಗೆ ಒಂದೊಮ್ಮೆ ಲೋಕಾಭಿರಾಮವಾಗಿ ಮಾತನಾಡುತ್ತಾ ಶಂಕರ ಅದ್ರಾಮನಲ್ಲಿ ಯಕ್ಷಗಾನದಲ್ಲಿ ಭಾಗವತಿಕೆ ಮಾಡುವ ಆಸಕ್ತಿ ಇದೆಯೇ ಎಂದು ಕೇಳಿದ್ದ.

"ಇಲ್ಲ, ನಾನು ನನ್ನ ಖುಷಿಗಾಗಿ ಹಾಡು ಕಲಿತೆ ಅಷ್ಟೇ ಹೊರತು ಮತ್ತೇನಕ್ಕೂ ಅಲ್ಲ" ಅಂದಿದ್ದ ಅದ್ರಾಮ.



ಆದರೆ ಈಗ ಭಾಗವತಿಕೆ ನಡೆಸುವ ಸಂದರ್ಭ ಬಂದಿತ್ತು. ಶಂಕರ ಆದ್ರಾಮನ ಕೈಹಿಡಿದು ಕೇಳಿದ,

"ನೀನು ಇವತ್ತು ಭಾಗವತಿಕೆ ಮಾಡಬೇಕು."

ಅದ್ರಾಮ ಅಚ್ಚರಿಗೊಂಡವನಂತೆ ಹೇಳಿದ "ಏನು ಹೇಳುತ್ತಿದ್ದಿ ಶಂಕರ ನೀನು, ಊರಿನ ಈಗಿನ ಪರಿಸ್ಥಿತಿ ನಿನಗೆ ಗೊತ್ತೇ ಇದೆ. ನಾನು ನಿನ್ನಲ್ಲಿಗೆ ಬಂದದ್ದೇ ಗೊತ್ತಾದರೆ ನನ್ನ ಬಂಧುಗಳು ಏನು ಮಾಡಿಬಿಡುತ್ತಾರೋ. ಇನ್ನು ಇಡೀ ರಾತ್ರಿ ನಿಮ್ಮ ಮೇಳಕ್ಕೆ ಭಾಗವತಿಕೆ ನಡೆಸಿದರೆ ಏನಾಗಬಹುದು ನೀನೇ ಹೇಳು.!"

ಅಪ್ಪಾಜಿ ಶಾಸ್ತ್ರಿಗಳು ಅವನ ಕೈ ಹಿಡಿದು ಹೇಳಿದರು.

"ಇಡೀ ಊರು ಹೊತ್ತಿ ಉರಿಯುವ ಈ ಹೊತ್ತಿನಲ್ಲಿ ನೀವು ಭಾಗವತಿಕೆ ನಡೆಸೋದರಿಂದ ಮತ್ತೆ ಈ ಊರು ಒಂದಾಗೋದು ಸಾಧ್ಯ.!"

"ಸರಿ" ಎಂದು ಆದ್ರಾಮ ದೃಢ ನಿರ್ಧಾರ ಮಾಡಿ ಎದ್ದ.

ರಂಗಮಂಚದಲ್ಲಿ ಹಾಡು ಕೇಳಿ ಬರತೊಡಗಿತು. ಚೆಂಡೆಯವನು, ಮದ್ದಳೆಯವನು ಹುರುಪಿನಿಂದ ಬಾರಿಸತೊಡಗಿದರು. ರಂಗಸ್ಥಳಕ್ಕೆ ವೇಷಧಾರಿಗಳು ಪ್ರವೇಶಿಸತೊಡಗಿದರು. ಜನ ಬಿಟ್ಟ ಕಣ್ಣು ತೆರೆದುಕೊಂಡೇ ನೋಡುತಿದ್ದಾರೆ. "ಏನಿದು ವಿಚಿತ್ರ! ಹಾಡುತ್ತಿರುವವನು ಶಂಕರನಾರಾಯಣ ಅಲ್ಲ! ಅದ್ರಾಮ! ಆದರೆ ಎಷ್ಟು ಚೆನ್ನಾಗಿ ಹಾಡುತ್ತಾನೆ, ಶಂಕರನಾರಾಯಣನೇ ಭಾಗವತಿಕೆ ನಡೆಸುತ್ತಾನೋ ಏನೋ ಅನ್ನುವಂತೆ."

ಜನ ನಿಬ್ಬೆರಗಾಗಿ ನೋಡುತ್ತಿದ್ದರು. ಪಾತ್ರಗಳು ಹುರುಪಿನಿಂದ ಕುಣಿಯುತ್ತಿದ್ದವು.

ಇತ್ತ,

ಮುಸ್ಲಿಮರ ಕೇರಿಯಲ್ಲಿ ಗುಸು ಗುಸು ಸುದ್ದಿ ಹರಡಿತು.

ಅದ್ರಾಮ ಯಕ್ಷಗಾನದಲ್ಲಿ ಭಾಗವತಿಕೆ ಮಾಡುತ್ತಿದ್ದಾನೆ. ಎಂತಹ ನಾಚಿಕೆ ಕೇಡಿನ ಸಂಗತಿ ಇದು! ಅವರು ಕರೆದರೂಂತ ಇವನು ಹೋಗಿಬಿಡೋದೆ? ನಾಳೆ ನಮ್ಮ ಮರ್ಯಾದೆ ಏನಾದೀತು?

ಹೀಗೆ ಅಂದುಕೊಳ್ಳುತ್ತಿರುವಾಗ ಒಬ್ಬಾತ ಹೇಳಿದ.

"ಈಗ ನಾವು ಸುಮ್ಮನೆ ಕೈಕಟ್ಟಿ ಕುಳಿತರೆ ಆಗೋ ಮಾತಲ್ಲ. ನಾವು ಈಗ ಎಲ್ಲಾ ಒಂದಾಗಿ ಯಾರಿಗೂ ಗೊತ್ತಾಗದಂತೆ"- ಹೀಗೆ ಹಲವಾರು ಮಂದಿಯಿಂದ ಹಲವಾರು ಸಲಹೆಗಳು ಬಂದವು.

ಅಲ್ಲಿ ಕುಳಿತಿದ್ದ ಜಮಾತ್ ಪ್ರೆಸಿಡೆಂಟ್ ಅಬೂಬಕರ್ ಸಾಹೇಬರು ಹೇಳಿದರು, "ಕೆಟ್ಟದಾಗುವಂತಹ ಕೆಲಸ ಮಾಡುವುದು ಬೇಡ. ಊರು ಹೊತ್ತಿ ಉರಿಯುವ ಸಮಯದಲ್ಲಿ ಹೀಗೆ ಮಾಡಿದರೆ ಅಲ್ಲಿ ಒಂಟಿಯಾಗಿರುವ ಅದ್ರಾಮನನ್ನು ಆ ಜನ ಕೊಂದೇಬಿಟ್ಟಾರು. ಅದ್ರಾಮನಿಂದಾಗಿ ಆ ಜನ ಮತ್ತೆ ನಮ್ಮಲ್ಲಿಗೆ ಬಂದು ಮತ್ತೆ ಊರು

ಒಂದಾಗುವಂತಾದರೆ ನಮಗೆ ಒಳ್ಳೆಯದಲ್ಲವೇ?"

ಅಷ್ಟರಲ್ಲಿ ಒಬ್ಬಾತ ಓಡಿ ಬಂದು ಹೇಳಿದ, "ಪ್ರೆಸಿಡೆಂಟರೆ, ಅಲ್ಲಿ ನಿಮ್ಮ ಹೆಂಡತಿಗೆ ನಾಗರಹಾವು ಕಚ್ಚಿದೆ!! ಓಡಿ ಬನ್ನಿ!!" ಒಮ್ಮೆಲೇ ಕುಳಿತಿದ್ದವರೆಲ್ಲ ಪ್ರೆಸಿಡೆಂಟರ ಮನೆಯತ್ತ ಓಡತೊಡಗಿದರು. ಓಡುತ್ತಲೇ ಅಬೂಬಕರ್ ಸಾಹೇಬರ ಕಂಗಳಲ್ಲಿ ಕಣ್ಣೀರು ಇಳಿಯತೊಡಗಿತು.

"ಇದೇನಾಗಿ ಹೋಯ್ತು ದೇವರೇ, ನನ್ನ ಫಾತುಮಾಳಿಗೆ ಏನೂ ಆಗದಿರಲಿ"

ಎಂದು ದೇವರಲ್ಲಿ ಬೇಡುತ್ತಾ ಮನೆಯತ್ತ ಬಂದಾಗ ಒಳಗಿನಿಂದ ಹೆಂಗಸರ ಬೊಬ್ಬೆ ಕೇಳಿಸುತ್ತಿತ್ತು. ಅವರು ಒಳಹೊಕ್ಕು ನೋಡಿದರು. ಫಾತುಮಾ ಅಂಗಾತ ಮಲಗಿದ್ದಾಳೆ. ಪಾದಕ್ಕಿಂತ ಮೇಲೆ ಮೊಣಕಾಲಿಗಿಂತ ಕೆಳಗೆ ಹಾವು ಕಚ್ಚಿದ ಗಾಯವಾಗಿದೆ. ಫಾತುಮಾ ಭಯದಿಂದ ಗಂಡನನ್ನು ನೋಡಿದಳು. ಅವರು ಅವಳನ್ನು ನೋಡಿದರು ಸಾವು ಇನ್ನೇನು ಕಬಳಿಸಿ ಬಿಡುತ್ತದೆಯೋ ಎನ್ನುವಂತಿತ್ತು ಅವರ ಸ್ಥಿತಿ. ಏನು ಮಾಡೋದು? ಈಗ ಹತ್ತಿರದಲ್ಲಿ ಎಲ್ಲೂ ಡಾಕ್ಟರರಿಲ್ಲ. ಪೇಟೆಗೆ ಡಾಕ್ಟರರ ಬಳಿ ಹೋಗಲು ನಾಲ್ಕು ಮೈಲು ದೂರ ನಡೆಯಬೇಕು. ತುರ್ತಾಗಿ ಏನು ಮಾಡೋದು?"

ಅಷ್ಟರಲ್ಲಿ "ದಾರಿಬಿಡಿ, ದಾರಿಬಿಡಿ!" ಎನ್ನುತ್ತಾ ಯಾರೋ ಒಳಬಂದರು. ಅವರೆಲ್ಲ ನೋಡುತ್ತಿದ್ದಾರೆ. ಕಂಬಳಿ ಹೊದ್ದುಕೊಂಡು ಕೆಮ್ಮುತ್ತಾ ಒಬ್ಬ ಬರುತ್ತಿದ್ದಾನೆ...."ಶಂಕರನಾರಾಯಣ!"

ಅವನು ಆಕೆಯ ಹತ್ತಿರ ಕುಳಿತು "ಸಾಹೇಬರೇ ನಿಮ್ಮ ಹೆಂಡತಿ ನಿದ್ರಿಸದಂತೆ ನೋಡಿಕೊಳ್ಳಿ" ಎನ್ನುತ್ತಾ ಯಾವುದೋ ಗಿಡಮೂಲಿಕೆ ಮದ್ದನ್ನು ಗಾಯಕ್ಕೆ ಹಚ್ಚಿ, ಗಾಯದ ಮೇಲೊಂದು ಕಟ್ಟು ಕಟ್ಟಿದ. ಅಬೂಬಕರ್ ಸಾಹೇಬರು ಹೆಂಡತಿ ನಿದ್ರಿಸದಂತೆ ಅವಳೊಡನೆ ಮಾತಾಡಿ ಎಚ್ಚರ ಇರುವಂತೆ ಮಾಡುತ್ತಿದ್ದರು.

ಸ್ವಲ್ಪ ಹೊತ್ತಿನಲ್ಲಿ ಮೈಗೆ ಹತ್ತಿದ ವಿಷವೆಲ್ಲ ಇಳಿದು ಹೋದ ಮೇಲೆ ಫಾತುಮಾ ಕಣ್ಣುಬಿಟ್ಟಳು. ಅಬೂಬಕರ್ ಸಾಹೇಬರು ನಿರಾಳವಾಗಿ ಉಸಿರು ಬಿಟ್ಟು ಶಂಕರನಾರಾಯಣನ ಕೈಹಿಡಿದು ಕೃತಜ್ಞತೆಯಿಂದ ಹೇಳಿದರು "ನಿಮ್ಮಿಂದ ನನ್ನ ಹೆಂಡತಿಯ ಪ್ರಾಣ ಉಳಿಯಿತು. ನಿಮ್ಮ ಈ ಉಪಕಾರವನ್ನು ನನ್ನ ಪ್ರಾಣ ಇರೋತನಕ ಮರೆಯುವುದಿಲ್ಲ!".

"ಉಪಕಾರ ಎಲ್ಲಿ ಬಂತು ಸಾಹೇಬರೇ, ಇದು ಮನುಷ್ಯರಾದ ನಾವು ಮಾಡೋ ಕರ್ತವ್ಯ. ಮನುಷ್ಯರು ಒಬ್ಬರಿಗೆ ಒಬ್ಬರು ನೆರವಾಗಬೇಕು. ಇಲ್ಲಿ ಹಿಂದುಗಳು ಮುಸ್ಲಿಮರೆಂಬ ಭೇದ ಭಾವ ಬರಬಾರದು. ಇಲ್ಲಿ ನನ್ನಿಂದಾಗಿ ನಿಮ್ಮ ಹೆಂಡತಿಯ ಪ್ರಾಣ ಉಳಿಯಿತೆನ್ನುತ್ತೀರಿ. ಅಲ್ಲಿ ನಿಮ್ಮ ಅದ್ರಾಮನಿಂದಾಗಿ ನಮ್ಮ ಯಕ್ಷಗಾನ ಕಾರ್ಯಕ್ರಮವೂ ನಡೆಯಿತು. ಇದೇ ರೀತಿ ಈ ಬಾಂಧವ್ಯ ಇನ್ನೂ ಮುಂದುವರಿಯಬೇಕು. ಈ ಹದಿನೈದು ದಿನಗಳಲ್ಲಿ ಇಲ್ಲಿ ಏನಾಗಿದೆ ಎಂಬುದನ್ನು ಸಂಪೂರ್ಣ ಮರೆತು ನಾವು ಮತ್ತೆ ಮೊದಲಿನಂತೆ ಒಂದಾಗೋಣ." ಶಂಕರನಾರಾಯಣ ಕೈ ಹಿಡಿದು ಹೇಳಿದಾಗ, ಅಬೂಬಕರ್ ಸಾಹೇಬರು ತುಂಬಿ ಬಂದ ಸಂತಸದೊಂದಿಗೆ ಹೇಳಿದರು.

"ಆಗಲಿ ನಾಳೆ ಅದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತೇನೆ!".

ರಾತ್ರಿ ಕಳೆಯಿತು. ಸೂರ್ಯ ಮೂಡಣದಲ್ಲಿ ಹುಟ್ಟಿದ. ಯಕ್ಷಗಾನ ಅಪೂರ್ವವಾಗಿ ವಿಜೃಂಭಿಸಿತ್ತು. ಎಲ್ಲರೂ ಅದ್ರಾಮನನ್ನು ಸುತ್ತುವರಿದು ಅವನನ್ನು ಕೊಂಡಾಡುತ್ತಿದ್ದರು. ಅಪ್ಪಾಜಿ ಶಾಸ್ತ್ರಿಗಳು ಅದ್ರಾಮನನ್ನು ತಬ್ಬಿಕೊಂಡು ಅಭಿನಂದಿಸುತ್ತಿದ್ದಂತೆಯೇ ಯಾರೋ ಕರೆದಂತಾಗಿ ಅವರು ಹಿಂತಿರುಗಿ ನೋಡಿದರು. ಅಲ್ಲಿ ಶಂಕರನಾರಾಯಣ ನಿಂತಿದ್ದ. ಅವನೊಂದಿಗೆ ಊರಿನ ಅನೇಕ ಮುಸ್ಲಿಮರು ಅಬೂಬಕರ್ ಸಾಹೇಬರು ಹೋಗಿ ಅಪ್ಪಾಜಿ ಶಾಸ್ತ್ರಿಗಳನ್ನು ಪ್ರೀತಿಯಿಂದ ತಬ್ಬಿಕೊಂಡರು. ಶಂಕರನಾರಾಯಣ ಅದ್ರಾಮನ ಹೆಗಲ ಮೇಲೆ ಕೈ ಹಾಕಿ ನಿಂತಿದ್ದ. ಇಸ್ಲಾಮೀಪುರ ಮತ್ತೆ ಒಂದಾಗಿತ್ತು.

## ಲೇಖಕರ ಪರಿಚಯ



ಫಕ್ರುದ್ದೀನ್ ಇರುವೈಲ್ ಅವರು ಕರ್ನಾಟಕದ ಮೂಡಬಿದಿರೆ ಸಮೀಪದ ಇರುವೈಲ್ ಎಂಬಲ್ಲಿ ಶೇಕ್ ಬ್ಯಾರಿ- ಮರಿಯಮ್ಮ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಲ್ಲೇ ಸಾಹಿತ್ಯಾಸಕ್ತರಾದ ಶ್ರೀಯುತರು ಬರೆದ ಕಥೆಗಳು ಕನ್ನಡ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಮುಂದೆ ಕನ್ನಡ ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರು ಬರೆದ ಕಥೆಗಳು ಪ್ರಕಟವಾಗಿ ಉತ್ತಮ ಸಣ್ಣ ಕಥೆಗಾರರೆಂಬ ಖ್ಯಾತಿಗೆ ಪಾತ್ರರಾದರು. ಕನ್ನಡದ ವಿವಿಧ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾದ ಇವರ ಕಥೆಗಳೆಲ್ಲ 'ಅನಿರೀಕ್ಷಿತ' ಎಂಬ ಕಥಾಸಂಕಲನದಲ್ಲಿ ಮೂಡಿಬಂದಿವೆ. ಎಲ್ಲಿರುವೆ ಕಂದಾ, ಅಲೀಮಾ ಅಕ್ಷರ ಕಲಿತದ್ದು, ನೊಂಬಲ ಮುಂತಾದವುಗಳು ಇವರ ಇತರ ಪ್ರಕಟಿತ ಕಥಾ ಸಂಕಲನಗಳು. ಹಲೀಮಾ, ಬದುಕೆಂಬ ಮಾಯೆ ಹಾಗೂ ನಾದಿರ ಎಂಬ ನೀಳ್ಗತೆಯೂ ಇವರಿಂದ ರಚಿತವಾಗಿದೆ. ಅಲೀಮಾ ಅಕ್ಷರ ಕಲಿತದ್ದು ಎಂಬ ಕೃತಿಗೆ ೨೦೦೧ನೇ ಇಸವಿಯಲ್ಲಿ ಮುಸ್ಲಿಂ ಸಾಹಿತ್ಯ ಪ್ರಶಸ್ತಿ ದೊರಕಿದೆ. ಪ್ರಸ್ತುತ ಕಥೆಯನ್ನು 'ಅಲಿಮಾ ಅಕ್ಷರ ಕಲಿತದ್ದು' ಎಂಬ ಕಥಾಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

**ಜಮಾತ್ :** ಮಸೀದಿಯ ಆಡಳಿತವನ್ನು ನಡೆಸುವ ಸಮಿತಿ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಶಂಕರನಾರಾಯಣನ ಭಾಗವತಿಕೆಯ ವೈಶಿಷ್ಟ್ಯವೇನು?
2. ಶಂಕರನಾರಾಯಣನು ಯಕ್ಷಗಾನ ಭಾಗವತಿಕೆ ನಡೆಸಲು ಬಾರದೆ ಇರಲು ಕಾರಣವೇನು?
3. ಅದ್ರಾಮನು ಭಾಗವತಿಕೆ ನಡೆಸಲು ಹಿಂದೇಟು ಹಾಕಲು ಕಾರಣವೇನು?
4. ಅಬೂಬಕರ್ ಸಾಹೇಬರ ಹೆಂಡತಿಗೆ ಹಾವು ಕಚ್ಚಿದಾಗ ಶಂಕರನಾರಾಯಣ ಶುಶ್ರೂಷೆ ಮಾಡಿದ ಬಗೆ ಹೇಗೆ?
5. ಫಾತುಮಾಳ ಜೀವ ರಕ್ಷಿಸಿದ ಶಂಕರನಾರಾಯಣರಲ್ಲಿ ಅಬೂಬಕರ್ ಸಾಹೇಬರು ಕೃತಜ್ಞತೆಯ ಭಾವದಿಂದ ಹೇಳಿದ ಮಾತುಗಳಾವುವು?

## ಶೀರ್ಷಿಕೆ ಬರೆಯಿರಿ

"ಇಸ್ಲಾಮೀಪುರದಲ್ಲೊಂದು ಯಕ್ಷಗಾನ" ಪಾಠಕ್ಕೆ ಸೂಕ್ತವಾದ ಇನ್ನೊಂದು ಶೀರ್ಷಿಕೆ ನೀಡಿರಿ. ಆ ಶೀರ್ಷಿಕೆ ಹೇಗೆ ಸೂಕ್ತವಾಗಿದೆ ಎನ್ನುವುದನ್ನು ಸಮರ್ಥಿಸಿ ಬರೆಯಿರಿ.

## ಸಂದೇಶ ಬರೆಯಿರಿ

"ಇಸ್ಲಾಮೀಪುರದಲ್ಲೊಂದು ಯಕ್ಷಗಾನ" ಕಥೆಯು ನೀಡುವ ಸಂದೇಶವನ್ನು ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

"ಇಸ್ಲಾಮೀಪುರದಲ್ಲೊಂದು ಯಕ್ಷಗಾನ" ಕಥೆಯಲ್ಲಿ ಬರುವ ಅಬೂಬಕರ್ ಸಾಹೇಬರ ಪಾತ್ರಚಿತ್ರಣ ಮಾಡಿರಿ.

## ಭಿತ್ತಿಪತ್ರ ತಯಾರಿಸಿರಿ

ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ನಡೆಯುವ ಯಕ್ಷಗಾನ ಕಾರ್ಯಕ್ರಮದ ಪ್ರಚಾರಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಭಿತ್ತಿಪತ್ರವೊಂದನ್ನು ತಯಾರಿಸಿರಿ.

## ಪತ್ರ ಬರೆಯಿರಿ

"ಇಸ್ಲಾಮೀಪುರದಲ್ಲೊಂದು ಯಕ್ಷಗಾನ" ಪಾಠದಲ್ಲಿ ಬಂದಿರುವ ಕಥೆಯನ್ನು ನಿಮ್ಮ ಗೆಳೆಯ/ಗೆಳತಿಗೆ ತಿಳಿಸುತ್ತಾ ಪತ್ರ ಬರೆಯಿರಿ.

## ಲಿಖಿತ ಭಾಷಣ ತಯಾರಿಸಿರಿ

ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಕೋಮುಗಲಭೆ, ಜಾತಿ ವೈಷಮ್ಯ, ವರ್ಣಭೇದ, ಲಿಂಗ ತಾರತಮ್ಯಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ 'ಶಾಂತಿಯುತ ಸಮಾಜ ನಿರ್ಮಾಣಕ್ಕಾಗಿ ಸಹಬಾಳ್ವೆಯ ಜೀವನ' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

## ಸಂವಾದಿ ಪದ ಬಳಸಿ ವಾಕ್ಯ ರಚಿಸಿರಿ

ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿ ಅದರ ಸಂವಾದಿ ಪದಗಳನ್ನು ಬರೆದು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿರಿ.

ಉದಾ : ಟೈಮ್ - ಸಮಯ

"ಏನಿದು ಶಂಕರ ಒಳ್ಳೆ ಟೈಮಿನಲ್ಲಿ ನಿನಗೆ ಹೀಗಾಯ್ತಲ್ಲ"?

ಸಮಯಕ್ಕೆ ಸರಿಯಾಗಿ ಆಹಾರವನ್ನು ಸೇವಿಸಬೇಕು.

# 3. ಸಾಧನೆಯ ಶಿಖರದಲ್ಲಿ












ಸ್ತ್ರೀ ಪುರುಷರು ಪ್ರಗತಿಪಥದೆಡೆಗೆ ಸಾಗುವ ಸಮಾಜದ ಎರಡು ಕಣ್ಣುಗಳು. ನಮ್ಮ ದೇಶದಲ್ಲಂತೂ ಸ್ತ್ರೀಯನ್ನು ಪೂಜ್ಯಳಾಗಿ, ಮಾತೆಯಾಗಿ ಕಂಡಿದ್ದಾರೆ. ಸುಸ್ಥಿರ ಸಮಾಜವನ್ನು ಕಟ್ಟಿ ಬೆಳೆಸುವಲ್ಲಿ ಆಕೆಯ ಪಾತ್ರ ಅತಿ ಮಹತ್ತರ ವಾದುದು. 'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಮಾತಿದೆ. ಆದಿ ಕಾಲದಿಂದ ತೊಡಗಿ ಇಂದಿನ ಆಧುನಿಕ ಯುಗದವರೆಗೂ ಹತ್ತು ಹಲವು ರಂಗಗಳಲ್ಲಿ ಸಾಧನೆ ಮಾಡಿದ ಹಲವಾರು ಸ್ತ್ರೀಯರು ನಮ್ಮಲ್ಲಿದ್ದಾರೆ. ಹೀಗೆ ತಮ್ಮ ಸಾಧನೆಗಳ ಮೂಲಕ ಸಮಾಜಕ್ಕೆ ಅನನ್ಯ ಕೊಡುಗೆಗಳನ್ನು ನೀಡಿದ ಸ್ತ್ರೀಯರು ತಾವು ಕೂಡ ಆತ್ಮ ಬಲ, ಮನೋಬಲ, ಬುದ್ಧಿಬಲಗಳಲ್ಲಿ ಪುರುಷರಷ್ಟೇ ಸಮಾನರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಪ್ರಸ್ತುತ ಘಟಕದಲ್ಲಿರುವ 'ಕೃಪಾ' ಕತೆಯಲ್ಲಿ ಮಕ್ಕಳಿಲ್ಲದ ದಂಪತಿಗಳು ಅನಾಥಾಲಯದಿಂದ ಉದ್ದೇಶಪೂರ್ವಕವಾಗಿ ಹೆಣ್ಣು ಮಗುವನ್ನೇ ದತ್ತು ಪಡೆದು ಆ ಹೆಣ್ಣು ಮಗುವಿಗೆ ಆತ್ಮ ಸ್ಥೈರ್ಯವನ್ನು ತುಂಬಿ ಜಯಶಾಲಿಯಾಗುವಂತೆ ಬೆಳೆಸಿದ ರೀತಿಯನ್ನು ನೋಡಬಹುದು. 'ದಾನ ಚಿಂತಾಮಣಿ ಅತ್ತಿಮಬ್ಬೆ' ಎಂಬ ಕಾವ್ಯದಲ್ಲಿ ಪತಿಯ ಮರಣಾನಂತರ ತನ್ನ ಜೀವನವನ್ನು ದಾನ ಧರ್ಮಗಳಿಗೆ ಮುಡಿಪಾಗಿಟ್ಟ ಅತ್ತಿಮಬ್ಬೆಯ ವರ್ಣನೆಯಿದೆ. 'ಕ್ಯಾಪ್ಟನ್ ಲಕ್ಷ್ಮಿ' ಅವರ ವ್ಯಕ್ತಿ ಪರಿಚಯದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ, ಪುರುಷರಿಗೆ ಸಮಾನವಾಗಿ ಹೋರಾಡಿ ಅದರಲ್ಲಿ ಯಶಸ್ಸು ಗಳಿಸಿದ ಧೀರ ಮಹಿಳೆಯ ವ್ಯಕ್ತಿತ್ವವನ್ನು ತಿಳಿದುಕೊಳ್ಳಬಹುದು.

# ಹೆಣ್ಣು

ಆಕೆ ಕೂಸಾಗಿ ಬಲು ಸುಂದರ, ಬಲು ಮುಗ್ಧ
ಆಕೆ ಹುಡುಗಿಯಾಗಿ ಮುತ್ತಿನ ಮಣಿಮಾಲೆ

ಆಕೆ ಅಕ್ಕಳಾಗಿ ಪ್ರೀತಿ, ಕಕ್ಕುಲಾತಿಯ ಸಂಕೇತ
ಆಕೆಯ ಆರೋಗ್ಯ ಈ ದೇಶದ ನಿಜವಾದ ಸಂಪತ್ತು

ಆಕೆ ಕುವರಿಯಾಗಿ ಪ್ರತಿ ಮನೆಯ ಹೆಮ್ಮೆ
ಆಕೆ ಸತಿಯಾಗಿ ಅವನಿಚ್ಛೆ ಅರಿವ ಗರತಿ

ಆಕೆ ತಾಯಿಯಾಗಿ ಕಂಡ ಕನಸುಗಳಿಗೆ ಮರುಹುಟ್ಟು
ಆಕೆ ಅತ್ತೆಯಾಗಿ ದೋಷ ತಿದ್ದುವ ಗುರು

ಆಕೆ ಅಜ್ಜಿಯಾಗಿ ಮುಗಿಯದ ಕಥೆ ಹೇಳುವ ಕಣಜ
ಆಕೆ ಮತ್ತೆ ಮಗಳಾಗಿ ಮನೆ ಬೆಳಗುವ ಮಾಣಿಕ್ಯ

ಆಂಗ್ಲದಿಂದ ಕನ್ನಡಕ್ಕೆ : ರಾಜೇಶ್ವರಿ. ಎನ್

- ಈ ಕವನದಲ್ಲಿ ಚಿತ್ರಿಸಲಾದ ಹೆಣ್ಣಿನ ಹಿರಿಮೆಯ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಕೃಪಾ

**- ಬಿ.ಎಸ್. ಗವಿಸ್ವಾಮಿ**

"ಅಮ್ಮಾ, ಅಮ್ಮಾ," ಎಂದು ಕೂಗುತ್ತಾ ಕೃಪಾ ಮನೆಯೊಳಗೆ ಓಡಿ ಬಂದಳು. ಮಗಳ ಧ್ವನಿಯನ್ನು ಕೇಳುತ್ತಲೇ ಜಯಮ್ಮ ಸಡಗರದಿಂದ ಅಡಿಗೆ ಮನೆಯಿಂದ ಹೊರಬಂದಳು.

ಕೃಪಾ ತಾಯಿಯನ್ನು ಕಾಣುತ್ತಲೇ "ಅಮ್ಮಾ, ಇವತ್ತಿನ ಆಶು ಭಾಷಣ ಸ್ಪರ್ಧೆಯಲ್ಲಿ ನನಗೆ ಮೊದಲನೇ ಬಹುಮಾನ" ಎಂದು ಕುಣಿದಾಡಿದಳು.

ಅವಳ ಶಾಲೆಯಲ್ಲಿ ವಾರ್ಷಿಕೋತ್ಸವಕ್ಕೆ ಸಿದ್ಧತೆಗಳಾಗುತ್ತಿದ್ದವು. ಹಿಂದಿನ ದಿನ ನಡೆದ ಓಟದ ಸ್ಪರ್ಧೆಯಲ್ಲಿ ಸಹ ಕೃಪಾ ಮೊದಲ ಬಹುಮಾನ ಪಡೆದಿದ್ದಳು. ಅದಕ್ಕಾಗಿಯೇ ಅವಳಿಗೆ ಅಷ್ಟು ಹಿಗ್ಗು. ಓದಿನಲ್ಲಿ ಜಾಣೆಯಾದ ಕೃಪಾ ಮಿಕ್ಕ ಚಟುವಟಿಕೆಗಳಲ್ಲಿಯೂ ಮುಂದು ಎಂಬುದು ಜಯಮ್ಮನಿಗೆ ಹೆಮ್ಮೆಯನ್ನು ನೀಡಿದೆ. ತಾಯಿ ಮಗಳನ್ನು ತಬ್ಬಿಕೊಂಡಳು. "ನನ್ನ ಚಿನ್ನ" ಎಂದು ಅವಳ ಕೆನ್ನೆಗೆ ಮುತ್ತಿಟ್ಟಳು.

"ನಾನು ಎಲ್ಲರ ಹಾಗೆ ಚೆನ್ನಾಗಿದ್ದೀನಿ ಅಲ್ವಾ ಅಮ್ಮಾ?" ಎಂದು ಕೃಪಾ ಕಾತುರದಿಂದ ತಾಯಿಯನ್ನು ಕೇಳಿದಳು. "ಹೌದು ಬಂಗಾರ" ಎಂದು ತಾಯಿ ಮತ್ತೊಮ್ಮೆ ಮುತ್ತಿಟ್ಟಳು. ಅಡುಗೆ ಮನೆಯಲ್ಲಿ ಹೆಂಡತಿಗೆ ಸಹಾಯ ಮಾಡುತ್ತಿದ್ದ ಶೇಖರ ಆ ಹೊತ್ತಿಗೆ ಹೊರಬಂದವನು " ನೀನು ಎಲ್ಲರಿಗಿಂತ ಚೆಲುವಾದ ಮಗು" ಎಂದು ಮಗಳನ್ನು ಎತ್ತಿಕೊಂಡ.

ಕೃಪಾ ಜಯಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಮಗುವಲ್ಲ. ಜಯಮ್ಮನಿಗೆ ಮದುವೆಯಾಗಿ ಎಷ್ಟೋ ವರ್ಷ ಮಕ್ಕಳಾಗಲಿಲ್ಲ. ಜಯಮ್ಮ ಶೇಖರ ಇಬ್ಬರು ವೈದ್ಯರ ಬಳಿ ಹೋದರು. ವೈದ್ಯರು ಇಬ್ಬರನ್ನು ಪರೀಕ್ಷಿಸಿದರು, ಶೇಖರನಿಗೆ ಯಾವ ತೊಂದರೆಯೂ ಇಲ್ಲವೆಂದು, ಜಯಮ್ಮನಿಗೆ ಮಕ್ಕಳಾಗುವ ಸಂಭವ ಕಡಿಮೆ ಎಂದು, ಅಕಸ್ಮಾತ್ ಆದರೂ ಜಯಮ್ಮನ ಪ್ರಾಣಕ್ಕೆ ಅಪಾಯ ಎಂದೂ ವೈದ್ಯರು ಹೇಳಿದರು. ಶೇಖರ ತಮಗೆ ಮಕ್ಕಳೇ ಬೇಡ ಎಂಬ ತೀರ್ಮಾನಕ್ಕೆ ಬಂದ. ಆದರೆ ಜಯಮ್ಮನಿಗೆ ಜೀವನವೇ ಶೂನ್ಯ ಎನಿಸಿತು. ಗಂಡ ಹೆಂಡತಿ ಬಹಳ ಚರ್ಚಿಸಿದರು.

ಯಾವುದಾದರೂ ಮಗುವನ್ನು ದತ್ತು ತೆಗೆದುಕೊಳ್ಳೋಣ ಎಂದುಕೊಂಡರು. ಹೇರಳ ಆಸ್ತಿಯಿದ್ದ ಅವರಿಗೆ ಎರಡೂ ಕಡೆಯ ಅಣ್ಣ ತಮ್ಮಂದಿರ, ಅಕ್ಕ ತಂಗಿಯರ ಮಕ್ಕಳಲ್ಲಿ ಯಾರನ್ನು ದತ್ತು ತೆಗೆದುಕೊಳ್ಳುವುದು ಬೇಡ ಅನ್ನಿಸಿತು. "ಯಾರ ಮಗುವನ್ನು ನಾವು ಇಷ್ಟ ಪಟ್ಟರೂ ಮಿಕ್ಕವರಿಗೆ ಹೊಟ್ಟೆ ಉರಿ" ಎಂದಳು ಜಯಮ್ಮ.

"ಸಂಬಂಧದ ಮಗುವನ್ನು ಸಾಕುವ ರೇಜಿಗೆಯೇ ಬೇಡ" ಎಂದ ಶೇಖರ. "ನೀವೊಪ್ಪಿದರೆ ಯಾವುದಾದರೂ ತಬ್ಬಲಿಯನ್ನು ದತ್ತು ತೆಗೆದುಕೊಳ್ಳೋಣ. ಧರ್ಮಕಾರ್ಯವು ಆಗುತ್ತದೆ" ಎಂದಳು ಜಯಮ್ಮ. ಶೇಖರ ಬಹಳ ವಿಶಾಲ ಮನಸ್ಸಿನವ ಕೂಡಲೇ ಒಪ್ಪಿದ.

ಅವರಿವರ ಬಳಿ ವಿಚಾರಿಸಿ ಮಾಹಿತಿ ಪಡೆದು ಗಂಡ ಹೆಂಡತಿ ಇಬ್ಬರೂ ಅನಾಥಾಲಯವೊಂದಕ್ಕೆ ಹೋದರು. ಜಾತಿ ಮತಗಳ ಭೇದವಿಲ್ಲದೆ ಆ ಸೇವಾ ಸಂಸ್ಥೆಯನ್ನು ನಡೆಸುತ್ತಿದ್ದ ಫಾದರ್ ಡಿಸಿಲ್ವ ದಂಪತಿಗಳನ್ನು ಬರಮಾಡಿಕೊಂಡರು. ಅವರ ಅಪೇಕ್ಷೆಯನ್ನು ಕಿವಿಗೊಟ್ಟು ಕೇಳಿಸಿಕೊಂಡರು. “ಬನ್ನಿ ನೋಡಿ ನಮ್ಮ ಮುಗ್ಧ ಮಕ್ಕಳನ್ನು. ನಿಮಗೆ ಯಾವ ವಯಸ್ಸಿನ ಮಗು ಬೇಕು?” ಎನ್ನುತ್ತಾ ಅವರಿಬ್ಬರನ್ನು ಒಳಗೆ ಕರೆದುಕೊಂಡು ಹೋದರು.

“ಫಾದರ್ ನಮಗೆ ಚಿಕ್ಕ ಮಗು ಬೇಕು . ವರ್ಷ ತುಂಬಿರಬಾರದು. ಅದು ನಮ್ಮಲ್ಲೇ ಬೆಳೆದು ದೊಡ್ಡದಾಗಬೇಕು” ಎಂದಳು ಜಯಮ್ಮ. ಫಾದರ್ ಕೇಳದೆಯೇ ಇನ್ನೊಂದು ಮಾತು ಹೇಳಿದಳು, “ನಮಗೆ ಹೆಣ್ಣು ಮಗುವೇ ಇರಲಿ ಫಾದರ್” ಶೇಖರನೂ ಆ ಮಾತಿಗೆ ಒಪ್ಪಿದ.

ಅನಾಥಾಲಯದಲ್ಲಿ ವರ್ಷವೂ ತುಂಬದ ಮೂರು ಹೆಣ್ಣು ಮಕ್ಕಳಿದ್ದವು. ಫಾದರ್ ಆ ಮಕ್ಕಳ ಬಳಿಗೆ ಇಬ್ಬರನ್ನು ಕರೆದೊಯ್ದರು. “ಮಕ್ಕಳಾದರೇ ಸಾಕು ಎಂದು ಹಂಬಲಿಸುವವರು ಸಹ ಇಲ್ಲಿ ಬಂದಾಗ ಗಂಡು ಮಗುವೇ ಬೇಕು ಅಂತಾರೆ. ನೋಡೋಕೆ ಚೆನ್ನಾಗಿರಬೇಕು ಅಂತಾರೆ. ಹೆಣ್ಣು ಮಕ್ಕಳಿಗೆ ಆಸೆ ಪಡುವವರು ಕಡಿಮೆ. ಅದರಲ್ಲೂ ಸಾಧಾರಣ ಕುರೂಪಿ ಮಕ್ಕಳಿಗೆ ಬೇಡಿಕೆ ಇಲ್ಲವೇ ಇಲ್ಲ” ಈ ಮಾತು ಹೇಳುವಾಗ ಫಾದರ್ ಸಣ್ಣದಾಗಿ ನಕ್ಕರು. ಅವರ ತುಟಿಯಂಚಿನಲ್ಲಿ ಎಂಥದೋ ವಿಷಾದ, ಜಯಮ್ಮನ ಹೊಟ್ಟೆ ಕಲಕಿದಂತಾಯಿತು. ಮನಸ್ಸಿನಲ್ಲೇ ಏನೋ ನಿರ್ಧಾರ ಮಾಡಿಕೊಂಡಳು.



ಅನಾಥಾಲಯದಲ್ಲಿ ಮೂರು ಹೆಣ್ಣು ಮಕ್ಕಳಲ್ಲಿ ಎರಡು ಮಕ್ಕಳು ಬಹಳ ಮುದ್ದಾಗಿದ್ದವು. ತುಂಬು ಆರೋಗ್ಯದ ಕಳೆ, ತಲೆಯ ತುಂಬ ಕೂದಲು, ಗೌರವರ್ಣ, ತಿದ್ದಿದ ಕಣ್ಣು, ಮೂಗು. ಅವುಗಳನ್ನು ದಾಟಿ ಜಯಮ್ಮ ಮೂರನೆ ಮಗುವಿನ ಬಳಿಗೆ ಬಂದಳು. ಅದು ಸಣಕಲಾಗಿದ್ದ ಕಪ್ಪು ಬಣ್ಣದ ಮಗು. ತಲೆಯಲ್ಲಿ ಹೆಚ್ಚು ಕೂದಲಿರಲಿಲ್ಲ. ಮೊಂಡು ಮೂಗು, ದಪ್ಪ ತುಟಿ, ಸಣ್ಣ ಕಣ್ಣುಗಳು. ಜಯಮ್ಮ ಹತ್ತಿರ ಬಂದು ತೊಟ್ಟಿಲ ಬಳಿ ನಿಂತಾಗ ಆ ಮಗು ಅಳಲಾರಂಭಿಸಿತು. ತನಗೇ ಅರಿವಿಲ್ಲದೆ ಜಯಮ್ಮ ಆ ಮಗುವನ್ನು ಎತ್ತಿಕೊಂಡಳು. ಅವಳ ಹೃದಯ ಕನಿಕರದಿಂದ ತುಂಬಿ ಹೋಯಿತು. “ಭೇಷ್, ನಿಮ್ಮ ಆಯ್ಕೆ ಬಹಳ ಒಳ್ಳೆಯದಾಗಿದೆ. ನೀವು ಕರುಣಾಶಾಲಿಗಳು, ದೇವರು ನಿಮಗೆ ಒಳ್ಳೆಯದು ಮಾಡಲಿ” ಎಂದು ಫಾದರ್ ಜಯಮ್ಮ, ಶೇಖರ್ ಅವರನ್ನು ಅಭಿನಂದಿಸಿದರು.

ಮಗುವಿಗೆ ಕೃಪಾ ಎಂದು ಹೆಸರು ನೀಡಿದ್ದು ಅವರೇ, ಎಲ್ಲಾ ಔಪಚಾರಿಕ ಕ್ರಮಗಳ ನಂತರ ಕೃಪಾ ಜಯಮ್ಮ-ಶೇಖರರ ಮನೆಗೆ - ತನ್ನ ಮನೆಗೆ ಬಂದಳು.

ಮುಂದಿನದು ಸುಸೂತ್ರ ಆಗಲಿಲ್ಲ. ಜಯಮ್ಮ ಶೇಖರನ ಮನೆಯವರು ಯಾರು ಇವರು ಮಾಡಿದ್ದನ್ನು ಒಪ್ಪಿಕೊಳ್ಳಲಿಲ್ಲ. ಯಾರದೋ ಮಗು ನಮ್ಮದಾಗುತ್ತದೆಯೇ ಎಂಬುದೊಂದೇ ರಾಗ ಅವರದು. ದಂಪತಿಗಳು ಅವರ ಮಾತಿಗೆ ಸೊಪ್ಪು ಹಾಕಲಿಲ್ಲ. ಎಂದೋ ಒಮ್ಮೊಮ್ಮೆ ಅವರುಗಳ ಮನೆಗೆ ಹೋದಾಗ ಕೃಪಾ ಬಗ್ಗೆ ಅವರು ತೋರುತ್ತಿದ್ದ ಹೀನಾಯ ಕಂಡು ಅವರ ಮನೆಗೆ ಹೋಗುವುದನ್ನೇ ದಂಪತಿಗಳು ಕಡಿಮೆ ಮಾಡಿದರು. ಹೋದರೂ ಹೆಚ್ಚು ಹೊತ್ತು ಇರುತ್ತಿರಲಿಲ್ಲ.

ವರ್ಷಗಳು ಸರಿದವು.

ಶೇಖರನ ತಾಯ್ತಂದೆಯರ ಮನೆಯಲ್ಲಿ ನಡೆದ ಯಾವುದೋ ಸಮಾರಂಭಕ್ಕೆ ಶೇಖರ, ಜಯಮ್ಮ, ಕೃಪಾ ಮೂವರೂ ಹೋಗಬೇಕಾಯಿತು. ಕೃಪಾ ಒಂದೆರಡು ಸಣ್ಣ ಪುಟ್ಟ ಚಿನ್ನದ ಒಡವೆ ಧರಿಸಿದ್ದಳು. ಸೊಗಸಾದ ರೇಶಿಮೆ ಲಂಗ ಹಾಕಿಕೊಂಡಿದ್ದಳು. ಮುದ್ದಾಗಿ ನೆರಿಗೆ ಹಿಡಿದ ತೋಳಿನ ಜಾಕೆಟ್ ಹಾಕಿಕೊಂಡಿದ್ದಳು. ಅವಳ ಸೌಭಾಗ್ಯವನ್ನು ನೋಡಿ ಅನೇಕರಿಗೆ ಹೊಟ್ಟೆ ಉರಿಯಿತು.

“ಕೃಪಾ ಅಂತೆ ಕೃಪಾ. ಹೆಸರು ಚೆನ್ನಾಗಿದೆ ಅಷ್ಟೇ. ಮಗು ಏನೂ ಚೆನ್ನಾಗಿಲ್ಲ. ನೀವಿಬ್ಬರೂ ನೋಡಿದರೆ ಇಷ್ಟು ಲಕ್ಷಣವಾಗಿದ್ದೀರಿ. ಅಂಥಾದ್ದರಲ್ಲಿ ನಿನ್ನ ಅಣ್ಣ ತಮ್ಮಂದಿರ ಮಕ್ಕಳಲ್ಲಿ ಯಾರನ್ನಾದರೂ ದತ್ತು ತಗೋಬಹುದಿತ್ತಪ್ಪಾ” ಎಂದು ಶೇಖರನ ತಾಯಿ ಕೃಪಾ ಎದುರಿಗೆ ಮುಖ ಮುರಿದಂತೆ ಹೇಳಿದರು. ಕೃಪಾ ಪೆಚ್ಚಾಗಿ ಬಿಟ್ಟಳು. ಜಯಮ್ಮನಿಗೆ ಬಹಳ ಕೋಪ ಬಂತು. ಶೇಖರನ ಮುಖವೂ ಗಂಟಾಯಿತು.

ಆ ದಿನ ಕೃಪಾಗೆ ಜ್ವರ ಬಂತು. ರಾತ್ರಿಯೆಲ್ಲ ನಿದ್ದೆಯಿಲ್ಲದೆ ಹೊರಳಾಡಿದ ಮಗು “ನಾನು ಚೆನ್ನಾಗಿಲ್ವಾ ಅಮ್ಮಾ?” ಎಂದು ಒಮ್ಮೆ ಕೇಳಿದಳು. “ದತ್ತು ಎಂದರೇನಮ್ಮಾ” ಎಂದು ಕನವರಿಸುತ್ತಿದ್ದಳು. ಮಗುವಿನ ದೈಹಿಕ ಅನಾರೋಗ್ಯ, ಮಾನಸಿಕ ಗೊಂದಲಗಳನ್ನು ಕಂಡು ಜಯಮ್ಮ ಕಂಗಾಲಾದಳು, ಕಣ್ಣೀರು ಹಾಕಿದಳು.

ಶೇಖರನ ಕಣ್ಣಲ್ಲೂ ಹನಿಯಾಡಿತು. ಗಂಡ ಹೆಂಡತಿ ಹಗಲೂ ರಾತ್ರಿ ಕೃಪಾ ಪಕ್ಕ ಕುಳಿತು ಶುಶ್ರೂಷೆ ಮಾಡಿದರು. ವೈದ್ಯರ ಮಾತಿನಂತೆ ಅವಳಿಗೆ ಔಷಧಿ, ಪಥ್ಯ ಎಲ್ಲವೂ ಸಾಂಗವಾಗಿ ನಡೆಯಿತು. ಕೃಪಾ ನಿಧಾನವಾಗಿ ಮೊದಲಿನಂತೆ ಆದಳು.

ಜಯಮ್ಮ ಬೇಡವೆಂದರೂ ಶೇಖರ ಒಮ್ಮೆ ಕೃಪಾಗೆ ಎಲ್ಲ ವಿಷಯವನ್ನು ನಿಧಾನವಾಗಿ ತಿಳಿ ಹೇಳಿದ. "ಚಿನ್ನ ನಾವಿಬ್ಬರು ಮಕ್ಕಳಿಲ್ಲದೆ ಅನಾಥರಾಗಿದ್ದೆವು. ನಮ್ಮ ಪಾಡು ನೋಡಿ ದೇವರು ನಿನ್ನಂತಹ ಒಳ್ಳೆಯ ಮಗುವನ್ನು ನಮಗೆ ನೀಡಿದ" ಎಂದ. ತಂದೆಗೆ ಕೃಪಾ "ನಾನು ನಿಮಗೆ ಎಲ್ಲಿ ಸಿಕ್ಕಿದೆ?" ಎಂದು ಪ್ರಶ್ನೆ ಹಾಕಿದಳು. " ನೀನು ಆ ಜಾಗ ನೋಡಲು ಇಷ್ಟಪಡ್ತೀಯಾ?" ಎಂದ ಶೇಖರ. ಹೌದೆಂದಳು ಕೃಪಾ. ಜಯಮ್ಮ ಅಡ್ಡಿಪಡಿಸುತ್ತಿದ್ದರೂ ಪರಿಗಣಿಸದೆ ಅನಾಥಾಲಯಕ್ಕೆ ಕರೆದುಕೊಂಡು ಹೋದ.

ಫಾದರ್ ಡಿಸಿಲ್ವರಿಗೆ ಎಲ್ಲವನ್ನು ವಿವರಿಸಿ ಹೇಳಿದ. ಫಾದರ್ ತಾಳ್ಮೆಯಿಂದ ಕೇಳಿಸಿಕೊಂಡರು. "ಕೃಪಾ ತುಂಬ ಸುಂದರ ಮಗು, ಜಾಣ ಮಗು, ಅದೃಷ್ಟಶಾಲಿ ಮಗು" ಎಂದು ಅವಳ ಬೆನ್ನು ತಟ್ಟಿ ಚಾಕೋಲೇಟ್ ಕೊಟ್ಟರು ಫಾದರ್. "ನೀನು ತುಂಬ ಧೈರ್ಯಶಾಲಿ ಆಗಬೇಕಮ್ಮ,ಯಾರಾದರು ಬೇಸರ ಆಗೋ ಮಾತು ಹೇಳಿದರೆ ನೊಂದುಕೋಬಾರದು. ನೀನು ಚೆನ್ನಾಗಿ ಓದಿ ವಿದ್ಯಾವಂತಳಾಗಬೇಕು . ಆಗಲೇ ನಿನ್ನನ್ನು ಇಷ್ಟು ಚೆನ್ನಾಗಿ ನೋಡಿಕೊಂಡ ತಾಯಿ ತಂದೆ ಋಣ ತೀರಿಸಿದಂತೆ" ಎಂದರು. ತನ್ನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗಳ ಹಾಗೆಯೇ ಬೆಳೆಸಿದ ಅಪ್ಪ,ಅಮ್ಮನ ಬಗ್ಗೆ ಕೃಪಾಗೆ ಕೃತಜ್ಞತೆ ತುಂಬಿ ಬಂತು. ಫಾದರ್ ಮಾತಿಗೆ ತಲೆಯಾಡಿಸಿದಳು.

ಜಯಮ್ಮ, ಶೇಖರ ಕೃಪಾಳ ಬೆಳವಣಿಗೆಯ ಬಗ್ಗೆ ತುಂಬ ಮುತುವರ್ಜಿ ವಹಿಸಿದರು. ಅವಳ ಆರೋಗ್ಯದ ಕಡೆಗೆ ಮೊದಲ ಗಮನಕೊಟ್ಟರು. ಪ್ರೀತಿಗೆ ಕೊರತೆ ಮಾಡಲಿಲ್ಲ. ಮಗು ನಿಧಾನವಾಗಿ ಮೈ ತುಂಬಿಕೊಂಡಿತು. ಮುಖದಲ್ಲಿ ಆರೋಗ್ಯದ ಮಿಂಚು ಹರಿದಾಡಿತು. ಅವಳನ್ನು ಒಳ್ಳೆಯ ಶಾಲೆಗೆ ಸೇರಿಸಿದರು. ತಾವು ಮನೆಯಲ್ಲಿ ಪಾಠ ಹೇಳಿಕೊಟ್ಟರು. ಸಂಗೀತ ಹೇಳಿಸಿದರು.

ಕೃಪಾಳ ಮುಖದಲ್ಲಿ ಆತ್ಮ ವಿಶ್ವಾಸ ಕೂಡಿಕೊಂಡಿತು. ಈಗ ಕೃಪಾ ಹದಿಹರೆಯದ ಬಾಲೆ, ಪ್ರೌಢಶಾಲೆಗೆ ಕಾಲಿಟ್ಟಿದ್ದಾಳೆ. ಮನೆಯಲ್ಲಿರುವ ಪ್ರೀತಿ ತುಂಬಿದ ಸಾತ್ವಿಕ ವಾತಾವರಣ, ಪುಷ್ಟಿಕರ ಆಹಾರ, ಶಾಲೆಯಲ್ಲಿನ ಶಿಸ್ತುಬದ್ಧ ನಡುವಳಿಕೆಗಳು ಅವಳ ವ್ಯಕ್ತಿತ್ವವನ್ನು ರೂಪಿಸುತ್ತಿವೆ. ಇದರ ಜೊತೆಗೆ ಕೃಪಾಗೆ ಓದಿನ ಹುಚ್ಚು. ಟಿ.ವಿ, ಸಿನಿಮಾ ಒಂದೂ ಬೇಡ. ತನ್ನ ವಯಸ್ಸಿಗೆ ಮೀರಿದ ಅಧ್ಯಯನ ನಡೆಸಿ ಶಾಲೆಯ ಗ್ರಂಥಾಲಯದ ಬಹುಪಾಲು ಪುಸ್ತಕಗಳನ್ನು ಓದಿ ಮುಗಿಸಿದ್ದಾಳೆ. ಶೇಖರ ಜಯಮ್ಮ ಸಹ ಅವಳ ಓದಿನ ಅಭ್ಯಾಸವನ್ನು ಪೋಷಿಸುವವರೇ.

ಮುಖದಲ್ಲಿ ನಲಿದಾಡುತ್ತಿರುವ ಗೆಲುವಿನಿಂದ ಕೃಪಾ ಈಗ ಆಕರ್ಷಕವಾಗಿ ಕಾಣುತ್ತಾಳೆ. ಜಯಮ್ಮ, ಶೇಖರರಿಗೆ ಬಹಳ ಹೆಮ್ಮೆ. "ಮುಂದೇನು ಮಾಡ್ತೀಯಮ್ಮಾ" ಎಂದು ಯಾವಾಗಲಾದರೂ ಶೇಖರ ಪ್ರಶ್ನಿಸಿದರೆ "ಡಾಕ್ಟರಾಗ್ತೀನಿ ಅಪ್ಪ, ಬಡವರ ಸೇವೆ ಮಾಡ್ತೀನಿ, ಅನಾಥಾಲಯದ ಮಕ್ಕಳಿಗೆ ದಿಕ್ಕಾಗ್ತೀನಿ" ಎನ್ನುತ್ತಾಳೆ. ಜಯಮ್ಮನ ಕಣ್ಣಲ್ಲಿ ಆನಂದದ ಹನಿ, ಶೇಖರನಿಗೆ ಧನ್ಯತೆಯ ಭಾವ. ಕೃಪಾಳ ಕಣ್ಣಲ್ಲಿ ಜಗತ್ತನ್ನೇ ಗೆಲ್ಲುವ ಭರವಸೆ.

## ಲೇಖಕರ ಪರಿಚಯ



ಬಿ.ಎಸ್. ಗವಿಸ್ವಾಮಿಯವರು ಗುಂಡ್ಲುಪೇಟೆ ತಾಲ್ಲೂಕಿನ ಬೆಳವಾಡಿ ಗ್ರಾಮದಲ್ಲಿ ಶ್ರೀಮತಿ ರತ್ನಮ್ಮ ಮತ್ತು ಸೋಮಪ್ಪನವರ ಪುತ್ರನಾಗಿ ಜನಿಸಿದರು. ಇವರು ಪದವಿಯವರೆಗೆ ವಿದ್ಯಾಭ್ಯಾಸ ಪೂರೈಸಿದ್ದು, ಕೃಷಿ ಕಾರ್ಯದಲ್ಲಿ ತೊಡಗಿದ್ದಾರೆ. ಕಾಲೇಜಿನ ದಿನದಿಂದಲೂ ಸಾಹಿತ್ಯದ ಬಗ್ಗೆ ಆಸಕ್ತಿಯಿದ್ದು ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಸಮಾಜ ಸೇವೆಯ ಬಗ್ಗೆ ಆಸಕ್ತಿ ಇದ್ದು ಮಾತೃಭೂಮಿ ಸೇವಾ ಸಮಾಜ ಎಂಬ ಸಂಸ್ಥೆಯನ್ನು ಸ್ನೇಹಿತರ ಜೊತೆಗೂಡಿ ಪ್ರಾರಂಭಿಸಿ ಅದರ ಅಧ್ಯಕ್ಷರಾಗಿ ಹಾಗೂ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಮಾಜ ಸೇವೆಯನ್ನು ಪರಿಗಣಿಸಿ ಭಾರತ ಸರಕಾರದ ನೆಹರು ಯುವ ಕೇಂದ್ರವು ೨೦೦೪-೦೫ ರ ಸಾಲಿನ 'ಅತ್ಯುತ್ತಮ ಯುವಕ' ಪ್ರಶಸ್ತಿಯನ್ನು, ಗದುಗಿನ ಕಲಾವಿಕಾಸ ಪರಿಷತ್ ನವರು ಪರಮ ಪೂಜ್ಯ ಡಾ. ಪಂಡಿತ ಪುಟ್ಟರಾಜ ಗವಾಯಿಯವರ ಜನ್ಮ ದಿನಾಚರಣೆಯ ಅಂಗವಾಗಿ 'ನುಡಿಸಿರಿ' ರಾಜ್ಯ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಪ್ರಸ್ತುತ 'ಕೃಪಾ' ಎಂಬ ಕಥೆಯನ್ನು ಅವರ 'ಬೆಳ್ಳಿಯ ಚಂದಿರ ಜನಪದ ಕಥೆಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಜಯಮ್ಮ, ಶೇಖರ ದಂಪತಿಗಳು ಕೃಪಾಳನ್ನು ದತ್ತು ತೆಗೆದುಕೊಳ್ಳಲು ಕಾರಣವೇನು?
2. ತಮಗೆ ಎಂತಹ ಮಗು ಬೇಕೆಂದು ಜಯಮ್ಮ ಫಾದರ್ ಬಳಿ ಹೇಳಿದಳು?
3. ಜಯಮ್ಮ ಅನಾಥಾಲಯದಿಂದ ಆಯ್ಕೆ ಮಾಡಿದ ಮಗು ಹೇಗಿತ್ತು?
4. "ಮುಂದೇನು ಮಾಡ್ತೀಯಮ್ಮಾ" ಎಂಬ ಶೇಖರನ ಪ್ರಶ್ನೆಗೆ ಕೃಪಾಳ ಉತ್ತರ ಏನಾಗಿತ್ತು?

## ಟಿಪ್ಪಣಿ ಬರೆಯಿರಿ

ದತ್ತು ಸ್ವೀಕಾರದ ವಿಷಯದಲ್ಲಿ ಜಯಮ್ಮನ ನಿರ್ಧಾರದ ಕುರಿತು ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಟಿಪ್ಪಣಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

'ಕೃಪಾ' ಕಥೆಯ ಆಧಾರದಲ್ಲಿ ಕೃಪಾಳ ಪಾತ್ರ ಚಿತ್ರಣ ಮಾಡಿರಿ.

## ಸನ್ಮಾನ ಪತ್ರ ತಯಾರಿಸಿರಿ

ಅನಾಥಾಲಯದಿಂದ ಕೃಪಾಳನ್ನು ದತ್ತು ಪಡೆದು ಲಾಲಿಸಿ ಪಾಲಿಸಿದ ಜಯಮ್ಮ ದಂಪತಿಗಳ ಹೃದಯ ವೈಶಾಲ್ಯವನ್ನು ಗುರುತಿಸಿ ಗೌರವಿಸುವ ಸಲುವಾಗಿ ಒಂದು ಸನ್ಮಾನ ಪತ್ರವನ್ನು ತಯಾರಿಸಿರಿ.

## ಕತೆ ಮುಂದುವರಿಸಿ ಬರೆಯಿರಿ

"ಡಾಕ್ಟರಾಗ್ತೀನಿ ಅಪ್ಪ, ಬಡವರ ಸೇವೆ ಮಾಡ್ತೀನಿ, ಅನಾಥಾಲಯದ ಮಕ್ಕಳಿಗೆ ದಿಕ್ಕಾಗ್ತೀನಿ" ಇದು ಕತೆಯ ಕೊನೆಯಲ್ಲಿ ಕೃಪಾಳು ಹೇಳುವ ಮಾತುಗಳು. ಕೃಪಾಳ ಜೀವನ ಹೇಗೆ ಮುಂದುವರಿದಿರಬಹುದು? ಊಹಿಸಿಕೊಂಡು ಕತೆಯನ್ನು ಮುಂದುವರಿಸಿ ಬರೆಯಿರಿ.

## ವಾಕ್ಯ ರಚಿಸಿರಿ

ಕೆಳಗೆ ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ತಿಳಿದುಕೊಂಡು ಆ ನುಡಿಗಟ್ಟುಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

ಉದಾ : **ಕಣ್ಣಿಗೆ ಮಣ್ಣೆರಚು** - ಪೊಲೀಸರ ಕಣ್ಣಿಗೆ ಮಣ್ಣೆರಚಿ ಕಳ್ಳನು ಪರಾರಿಯಾದನು.

- ಮೂಗು ತೂರಿಸು
- ಅಡ್ಡಗಾಲು ಹಾಕು
- ಅಡ್ಡದಾರಿ ಹಿಡಿ
- ಅಳಿಲ ಸೇವೆ
- ಸೊಪ್ಪು ಹಾಕು

ಇದೇ ರೀತಿ ಇನ್ನಿತರ ನುಡಿಗಟ್ಟುಗಳನ್ನು ಸಂಗ್ರಹಿಸಿ ಅದರ ಅರ್ಥವನ್ನು ತಿಳಿಯಿರಿ.

# ದಾನ ಚಿಂತಾಮಣಿ ಅತ್ತಿಮಬ್ಬೆ

- ರನ್ನ

ಒಡಲನುಪವಾಸದಿಂ ತ
ನ್ನೊಡಮೆಯನನವರತ ದಾನದಿಂ ತವಿಸಿ ಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ



ದಶದಿಗ್ವಿಜಯದೊಳಮಳಿನ
ಯಶಮೆಸೆವಿನಮತ್ತಿಮಬ್ಬೆ ಜಿನಧರ್ಮದಯಾ
ವಶವರ್ತಿನಿ ದಾನಂ ಪೂ
ಜೆ ಶೀಲಮುಪವಾಸಮೆಂಬಿವಂ ಪ್ರಕಟಿಸಿದಳ್

ಬುಧಜನವಂದಿತೆ ಧರ್ಮ
ಪ್ರಧಾನೆ ದರ್ಶನವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ

ಜಿನಪದಭಕ್ತೆ ಜಗತ್ರಯ
ಜನವಂದಿತೆ ಚಕ್ರವರ್ತಿಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲನ
ಜನನಿಯೆ ತೀರ್ಥಕರ ಜನನಿಯೆನ್ನದರೊಳರೇ

ಮನದೊಳ್ ತಾಳ್ದುವಳೀ ಸತಿ
ಜಿನನಂ ಜಿನಜನನಿ ಗರ್ಭದೊಳ್ ತಾಳ್ದುವಳೆಂ
ಬಿನಿತೆ ವಿಕಲ್ಪಂ ತೈಲನ
ಜನನಿಗೆ ಜಿನಜನನಿಗೇಂ ವಿಕಲ್ಪಮುಂಟೇ

ಆಸನ್ನ ಭವ್ಯೆಯುಂ ಜಿನ
ಶಾಸನದೀಪಿಕೆಯುಮೆನಿಸಿ ಮಣಿಕನಕಮಯೋ
ದ್ಭಾಸಿ ಜಿನಪ್ರತಿಮೆಗಳಂ
ಸಾಸಿರದೈನೂಱನರ್ತಿಯಿಂ ಮಾಡಿಸಿದಳ್

ಪದೆದೆಱೆದರ್ಥಿಜನಕ್ಕಿ
ತ್ತುದೆ ಧನಮೀಯದುದೆ ಕೆಟ್ಟುದೆಂದರ್ಥಮನೀ
ವುದಱಿಂ ತನ್ನಷ್ಟಂ ಯ
ನ್ನದೀಯತೇ ಎನಿಪುದತ್ತಿಮಬ್ಬೆಯ ದಾನಂ

## ಕವಿ ಪರಿಚಯ



ರನ್ನನು ಹಳೆಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬನಾಗಿದ್ದನು. ಈತನ ಕಾಲ ಕ್ರಿ. ಶ. ೯೪೯. ಇವನ ಊರು ಮುದುವೊಳಲು (ಈಗಿನ ಮುಧೋಳ). ಇವನ ತಂದೆ ಜಿನವಲ್ಲಭೇಂದ್ರ, ತಾಯಿ ಅಬ್ಬಲಬ್ಬೆ. ರನ್ನನು ಜೈನ ಮತಸ್ಥನಾಗಿದ್ದನು. ಅಜಿತಸೇನಾಚಾರ್ಯರು ಇವನ ಗುರುಗಳಾಗಿದ್ದರು. ಗಂಗರ ದೊರೆ ರಾಚಮಲ್ಲನ ಮಂತ್ರಿ ಚಾವುಂಡರಾಯ ಇವನ ಪೋಷಕನಾಗಿದ್ದನು. ಈತನ ಪ್ರಮುಖ ಕೃತಿಗಳು ಅಜಿತ ತೀರ್ಥಂಕರ ಪುರಾಣ(ಅಜಿತ ಪುರಾಣ) ಮತ್ತು ಸಾಹಸ ಭೀಮ ವಿಜಯಂ (ಗದಾಯುದ್ಧ). ಇವೆರಡೂ ಕೃತಿಗಳು ಚಂಪೂ ಕಾವ್ಯಗಳಾಗಿವೆ. ರನ್ನನು ರತ್ನತ್ರಯರಲ್ಲಿ ಒಬ್ಬನೂ ,ಕವಿ ಚಕ್ರವರ್ತಿಯೂ ಆಗಿದ್ದನು. ದಾನ ಚಿಂತಾಮಣಿಯೆಂದು ಖ್ಯಾತಳಾದ ಅತ್ತಿಮಬ್ಬೆ ಇವನಿಂದ ಅಜಿತ ಪುರಾಣವನ್ನು ಬರೆಯಿಸಿದಳು. ಚಾವುಂಡರಾಯ ಮತ್ತು ಅತ್ತಿಮಬ್ಬೆಯರನ್ನು ಕವಿ ಭಕ್ತಿ, ಕೃತಜ್ಞತೆಗಳಿಂದ ಸ್ಮರಿಸಿ ತನ್ನ ಮಕ್ಕಳಿಗೆ ರಾಯ ಮತ್ತು ಅತ್ತಿಮಬ್ಬೆ ಎಂದೇ ಹೆಸರಿಟ್ಟಿದ್ದನು. ರನ್ನನಿಗೆ ಕವಿಜನ ಚೂಡಾರತ್ನ, ಕವಿ ತಿಲಕ, ಕವಿ ಚತುರ್ಮುಖ ಎಂಬ ಬಿರುದುಗಳಿದ್ದುವು.

ಅಜಿತ ಪುರಾಣದ ಪೀಠಿಕಾ ಭಾಗದಲ್ಲಿಯೂ, ಒಂದನೆಯ ಆಶ್ವಾಸದಲ್ಲಿಯೂ ರನ್ನ ಅತ್ತಿಮಬ್ಬೆಯ ಗುಣ ಸ್ವಭಾವವನ್ನೂ, ದಾನ ಶೀಲತೆಯನ್ನೂ ಕೊಂಡಾಡಿದ್ದಾನೆ. ಪ್ರಸ್ತುತ ಕಾವ್ಯಭಾಗವನ್ನು 'ಅಜಿತ ಪುರಾಣ'ದ ಒಂದನೆಯ ಆಶ್ವಾಸದಿಂದ ಆರಿಸಲಾಗಿದೆ.

## ಅತ್ತಿಮಬ್ಬೆ

ಪ್ರಾಚೀನ ಕರ್ನಾಟಕದ ಮಹಿಳೆಯರಲ್ಲಿ ಅತ್ತಿಮಬ್ಬೆ ಪ್ರಮುಖಳಾಗಿದ್ದಳು. ೧೦ ನೆಯ ಶತಮಾನದಲ್ಲಿ ಬದುಕಿದ್ದ ಅತ್ತಿಮಬ್ಬೆಯ ತಂದೆ ಮಲ್ಲಪಯ್ಯ, ತಾಯಿ ಅಪ್ಪಕಬ್ಬೆ. ಚಾಲುಕ್ಯ ಚಕ್ರವರ್ತಿ ಆಹವಮಲ್ಲನ ಸೇನಾಪತಿ ನಾಗದೇವನು ಈಕೆಯ ಪತಿ. ಅತ್ತಿಮಬ್ಬೆಯ ಸೂಚನೆಯಂತೆ ರನ್ನ ಅಜಿತ ಪುರಾಣವನ್ನು ರಚಿಸಿದನು. ಈಕೆ ಲಕ್ಕುಂಡಿಯಲ್ಲಿ ಸಹಸ್ರ ಜಿನ ತೀರ್ಥಂಕರರ ಬಸದಿಯನ್ನು ಕಟ್ಟಿಸಿ , ೧೫೦೦ ಚಿನ್ನದ ಜಿನ ಪ್ರತಿಮೆಗಳನ್ನೂ ಪೊನ್ನನ 'ಶಾಂತಿ ಪುರಾಣ'ದ ಒಂದು ಸಾವಿರ ಪ್ರತಿಗಳನ್ನೂ ಮಾಡಿಸಿ ದಾನ ಮಾಡಿದ್ದರಿಂದ ಈಕೆಗೆ 'ದಾನ ಚಿಂತಾಮಣಿ' ಎಂಬ ಬಿರುದು ಬಂತು.

### ಉತ್ತರಿಸಿರಿ

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅತ್ತಿಮಬ್ಬೆಯು ಹೇಗೆ ಯಶಸ್ಸನ್ನು ಪಡೆದಳು?
2. ಈ ಕಾವ್ಯಭಾಗದಲ್ಲಿ ಅತ್ತಿಮಬ್ಬೆಯನ್ನು ಯಾವೆಲ್ಲಾ ಹೆಸರುಗಳಿಂದ ಹೊಗಳಲಾಗಿದೆ?
3. ಅತ್ತಿಮಬ್ಬೆಗೂ ಜಿನ ಜನನಿಗೂ ವ್ಯತ್ಯಾಸವಿಲ್ಲ ಎಂದು ಕವಿ ಹೇಳಲು ಕಾರಣವೇನು?
4. ಅತ್ತಿಮಬ್ಬೆಗೆ ದಾನ ಚಿಂತಾಮಣಿ ಎಂಬ ಬಿರುದು ಯಾಕೆ ಬಂತು?

### ಪದ ವಿಂಗಡಣೆಯನ್ನು ತಿಳಿಯಿರಿ

ಉದಾ :

ತನ್ನೊಡಮೆಯನನವರತ = ತನ್ನ + ಒಡಮೆಯನ್ + ಅನವರತ

ಯಶಮೆಸೆವಿನಮತ್ತಿಮಬ್ಬೆ = ಯಶಮ್ + ಎಸೆವಿನಮ್ + ಅತ್ತಿಮಬ್ಬೆ

ಜನನಿಗೆಣೆ = ಜನನಿಗೆ + ಎಣೆ

ಪೆಱರೊಳರೇ = ಪೆಱರ್ + ಒಳರೇ

ದಶದಿಗ್ವಿಜಯದೊಳಮಳಿನ = ದಶ ದಿಗ್ವಿಜಯದೊಳ್ + ಅಮಳಿನ

ಶೀಲಮುಪವಾಸಮೆಂಬಿವಂ = ಶೀಲಮ್ + ಉಪವಾಸಮ್ + ಎಂಬಿವಂ

ಕವಿವರಕಾಮಧೇನುವೆಂದೆಂಬುದತ್ತಿಮಬ್ಬೆಯನೆ = ಕವಿವರಕಾಮಧೇನು + ಎಂದು + ಎಂಬುದು + ಅತ್ತಿಮಬ್ಬೆಯನ್ + ಎ

ಜನನಿಯೆನ್ನದರೊಳರೇ = ಜನನಿ + ಎನ್ನದರ್ + ಒಳರೇ

ಸಾಸಿರದೈನೂಱನರ್ತಿಯಿಂ = ಸಾಸಿರದ + ಐನೂಱನ್ + ಅರ್ತಿಯಿಂ

ಪದೆದೆಱೆದರ್ಥಿಜನಕ್ಕಿತ್ತುದೆ =ಪದೆದು + ಎಱೆದ + ಅರ್ಥಿಜನಕ್ಕೆ + ಇತ್ತುದೆ

ತನ್ನಷ್ಟಂ = ತತ್ + ನಷ್ಟಂ

ಯನ್ನದೀಯತೇ = ಯತ್ + ನ + ದೀಯತೇ

ಎನಿಪುದತ್ತಿಮಬ್ಬೆಯ = ಎನಿಪುದು + ಅತ್ತಿಮಬ್ಬೆಯ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

- ಒಡಲನುಪವಾಸದಿಂ
- ತಳೆದಿಳೆಯೊಳ್
- ಕೆಟ್ಟುದೆಂದರ್ಥಮನೀವುದಱಿಂ

## ಸಮಾನಾರ್ಥಕ ಪದ ಬರೆಯಿರಿ

ಕೆಳಗೆ ಕೊಟ್ಟಿರುವ ಪದಗಳ ಸಮಾನಾರ್ಥಕ ಪದವನ್ನು ಕಾವ್ಯಭಾಗದಿಂದ ಆಯ್ದು ಬರೆಯಿರಿ.

- ಶರೀರ
- ವಿದ್ವಾಂಸ
- ಸಮುದ್ರ
- ತಾಯಿ

## ಆಶಯ ಬರೆಯಿರಿ

'ದಾನ ಚಿಂತಾಮಣಿ ಅತ್ತಿಮಬ್ಬೆ' ಕಾವ್ಯಭಾಗದ ಆಶಯ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಸಾಲಿನ ಸ್ವಾರಸ್ಯವನ್ನು ಬರೆಯಿರಿ

ತೈಲನ ಜನನಿಗೆ ಜಿನ ಜನನಿಗೇಂ ವಿಕಲ್ಪಮುಮುಂಟೇ

## ಹೋಲಿಸಿ ಬರೆಯಿರಿ

ಪದೆದೆಱೆದರ್ಥಿಜನಕ್ಕಿ
ತ್ತುದೆ ಧನಮೀಯದುದೆ ಕೆಟ್ಟುದೆಂದರ್ಥಮನೀ
ವುದಱಿಂ ತನ್ನಷ್ಟಂ ಯ
ನ್ನದೀಯತೇ ಎನಿಪುದತ್ತಿಮಬ್ಬೆಯ ದಾನಂ

ಈ ಮೇಲಿನ ಕಂದ ಪದ್ಯವನ್ನು ಕೆಳಗೆ ಕೊಟ್ಟಿರುವ ಸರ್ವಜ್ಞನ ತ್ರಿಪದಿಯೊಂದಿಗೆ ಹೋಲಿಸಿ ಬರೆಯಿರಿ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟಿತೆನಬೇಡ ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ

## ಸಮಾಸ ತಿಳಿಯಿರಿ

**ದ್ವಿಗು ಸಮಾಸ**

ಉದಾ : ನೂರು ಮಡಿ - ನೂರ್ಮಡಿ

ಮೇಲಿನ ಉದಾಹರಣೆಯನ್ನು ಗಮನಿಸಿರಿ. ಇಲ್ಲಿ ಪೂರ್ವ ಪದವು ಸಂಖ್ಯಾವಾಚಕವಾಗಿದೆ. ಉತ್ತರ ಪದವು ನಾಮಪದವಾಗಿದೆ. ಹೀಗೆ ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರ ಪದವು ನಾಮಪದವಾಗಿದ್ದು ಇವೆರಡೂ ಸೇರಿ ದ್ವಿಗು ಸಮಾಸವಾಗುತ್ತದೆ.

ಹೆಚ್ಚಿನ ಉದಾಹರಣೆಗಳನ್ನು ಗಮನಿಸಿರಿ.

- ಒಂದು ಕಟ್ಟು - ಒಗ್ಗಟ್ಟು
- ಎರಡು ಮಡಿ - ಇಮ್ಮಡಿ
- ಮೂರು ಮಡಿ - ಮುಮ್ಮಡಿ
- ನಾಲ್ಕು ಮಡಿ - ನಾಲ್ವಡಿ

## ಪ್ರಾಸ ತಿಳಿಯಿರಿ

**ಆದಿ ಪ್ರಾಸ**

ಬುಧಜನವಂದಿತೆ ಧರ್ಮ
ಪ್ರಧಾನೆ ದರ್ಶನ ವಿಶುದ್ಧೆ ದಾನಗುಣೈಕಾಂ
ಬುಧಿಯೆನಿಸಿದ ಕವಿವರ ಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ

ಮೇಲಿನ ಪದ್ಯವನ್ನು ಗಮನಿಸಿ. ಪದ್ಯದ ಪ್ರತಿ ಪಾದದಲ್ಲಿಯೂ(ಸಾಲಿನಲ್ಲಿಯೂ) ಒಂದು ಮತ್ತು ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿದೆ. ಇದನ್ನು ಆದಿಪ್ರಾಸ ಎನ್ನುವರು.

- ಈ ಕಾವ್ಯಭಾಗದಲ್ಲಿ ಬಂದ ಆದಿಪ್ರಾಸವಿರುವ ಒಂದು ಪದ್ಯವನ್ನು ಆರಿಸಿ ಬರೆದು ಪ್ರಾಸವನ್ನು ಗುರುತಿಸಿರಿ.

## ಛಂದಸ್ಸು ತಿಳಿಯಿರಿ

ಕಂದ ಪದ್ಯ

| | | | | | |
|---|---|---|---|---|---|
| UUUU | _ UU | _ UU | | | |
| ಜಿನಪದ | ಭಕ್ತೆ ಜ | ಗತ್ರಯ | | | 12 (ಮಾತ್ರೆಗಳು) |
| UU _ | UU _ | U_ U | _ UU | UU _ | |
| ಜನವಂ | ದಿತೆ ಚ | ಕ್ರವರ್ತಿ | ಪೂಜಿತೆ | ಜಿನ ಶಾ | 20 |
| UUUU | UUUU | _ UU | | | |
| ಸನರುಚಿ | ಪಡೆವಳ | ತ್ಯೆಲನ | | | 12 |
| UUUU | _ UU | U UUU | _ UU | U U _ | |
| ಜನನಿಯೆ | ತೀರ್ಥಕ | ರ ಜನನಿ | ಯೆನ್ನದ | ರೊಳರೇ | 20 |

ಒಟ್ಟು ಮಾತ್ರೆಗಳ ಸಂಖ್ಯೆ = 64

ಮೇಲಿನ ಪದ್ಯವನ್ನು ಗಮನಿಸಿರಿ. ಇದರಲ್ಲಿ ೪ ಸಾಲುಗಳಿವೆ. ಇದರ ಒಂದು ಮತ್ತು ಮೂರನೆಯ ಸಾಲುಗಳು ಸಮಾನವಾಗಿದ್ದು ೪ ಮಾತ್ರೆಯ ೩ ಗಣಗಳು ಬರುತ್ತವೆ. ಎರಡು ಮತ್ತು ನಾಲ್ಕನೆಯ ಸಾಲುಗಳು ಸಮಾನವಾಗಿದ್ದು ೪ ಮಾತ್ರೆಯ ೫ ಗಣಗಳು ಬರುತ್ತವೆ. ಎರಡು ಹಾಗೂ ನಾಲ್ಕನೆಯ ಸಾಲುಗಳು ಗುರುವಿನಿಂದ ಕೊನೆಗೊಳ್ಳುತ್ತವೆ. ಈ ಪದ್ಯದ ೧,೩,೫,೭ ನೆಯ  ಸ್ಥಾನಗಳಲ್ಲಿ ಮಧ್ಯ ಗುರುವಿರುವ ಗಣ  (U_U) ಬರಬಾರದು. ಇದರಲ್ಲಿ ಮೊದಲ ಎರಡು ಪಾದಗಳನ್ನು ಪೂರ್ವಾರ್ಧವೆಂದೂ ಮುಂದಿನ ಎರಡು ಪಾದಗಳನ್ನು ಉತ್ತರಾರ್ಧವೆಂದೂ ಗುರುತಿಸಬಹುದು. ಪೂರ್ವಾರ್ಧದ ಆರನೇ ಗಣ ಮತ್ತು ಉತ್ತರಾರ್ಧದ ಆರನೇ ಗಣಗಳು ಮಧ್ಯೆ ಗುರು ಇರುವ ಗಣ (U_U) ಅಥವಾ ಸರ್ವ ಲಘು ಇರುವ ಗಣ (UUUU) ಆಗಿರಬೇಕು.

ಇದೇ ರೀತಿ 'ದಾನ ಚಿಂತಾಮಣಿ ಅತ್ತಿಮಬ್ಬೆ' ಕಾವ್ಯಭಾಗದಿಂದ ಒಂದು ಪದ್ಯವನ್ನು ಆಯ್ದುಕೊಂಡು ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿರಿ.

# ಕ್ಯಾಪ್ಟನ್ ಲಕ್ಷ್ಮೀ

- ಕೆ. ಭೈರಪ್ಪ



ಮದ್ರಾಸ್ ನಗರದಲ್ಲಿ ವಾಸವಾಗಿದ್ದು ಸುಪ್ರಸಿದ್ಧ ವಕೀಲರಾಗಿದ್ದ ಸ್ವಾಮಿನಾಥನ್ ಮತ್ತು ಅಮ್ಮು ಅವರ ಹೆಮ್ಮೆಯ ಸುಪುತ್ರಿ ಲಕ್ಷ್ಮೀ. ಲಕ್ಷ್ಮೀ ಹೆಸರಿಗೆ ತಕ್ಕಂತೆ ಮಹಾಲಕ್ಷ್ಮಿಯೋಪಾದಿಯಲ್ಲಿ ರೂಪವತಿಯಾಗಿದ್ದುದಲ್ಲದೆ ಅಸಾಧಾರಣ ಧೈರ್ಯಶಾಲಿಯೂ ಆಗಿದ್ದಳು. ತಂದೆ ವಕೀಲಿ ವೃತ್ತಿಯಲ್ಲಿ ಪ್ರಖ್ಯಾತರಾಗಿದ್ದರೆ, ತಾಯಿ ರಾಜಕೀಯ ಕ್ಷೇತ್ರದಲ್ಲಿ ತುಂಬಾ ಹೆಸರುವಾಸಿಯಾಗಿದ್ದರು. “ತಾಯಿಯಂತೆ ಮಗಳು ನೂಲಿನಂತೆ ಸೀರೆ” ಎಂಬ ಮಾತಿನ ಪ್ರತೀಕವಾಗಿ ಲಕ್ಷ್ಮೀ ಚಿಕ್ಕ ವಯೋಮಾನದಿಂದಲೇ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು ಮುಂದೆ ಪ್ರಖ್ಯಾತ ನಾಯಕಿಯಾಗಿ ತುಂಬಾ ಹೆಸರು ಮಾಡಿದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಸುಭಾಷ್ ಚಂದ್ರ ಬೋಸ್ ಅವರು ಕ್ರಿ. ಶ. ೧೯೪೨ ರಲ್ಲಿ ಸಿಂಗಾಪುರಕ್ಕೆ ಭೇಟಿ ನೀಡಿ ಆಜಾದ್ ಹಿಂದ್ ಫೌಜಿನ ನಾಯಕತ್ವ ವಹಿಸಿದರು. ಈ ಸಂದರ್ಭದಲ್ಲಿ ಅಪ್ರತಿಮ ದೇಶಭಕ್ತೆಯೂ ತೀವ್ರಗಾಮಿ ನಾಯಕರೂ ಆಗಿದ್ದ ಲಕ್ಷ್ಮೀ ಅವರು ವಿವಾಹವಾಗಿ ಸಿಂಗಾಪುರದಲ್ಲಿ ದಾಂಪತ್ಯ ಜೀವನ ನಡೆಸುತ್ತಿದ್ದರು. ಸುಭಾಷ್ ಅವರ ಕಟ್ಟಾ ಅಭಿಮಾನಿಯಾಗಿದ್ದ ಲಕ್ಷ್ಮೀ ಅವರು ಸಿಂಗಾಪುರದಲ್ಲಿ ಸುಭಾಷ್ ರನ್ನು ಖುದ್ದು ಭೇಟಿ ಮಾಡಿ ಪರಿಚಯ ಮಾಡಿಕೊಂಡರು. ಚೂಟಿಯಾದ ಈ ಹರೆಯದ ತರುಣಿಯಲ್ಲಿ ಅಸಾಧಾರಣ ಧೈರ್ಯ ಹಾಗೂ ಮನೋಸ್ಥೈರ್ಯವಿರುವುದನ್ನು ನೋಡಿ ನೇತಾಜಿಯವರು ಮೆಚ್ಚುಗೆ ವ್ಯಕ್ತಪಡಿಸಿದರು. ನೇತಾಜಿ ಅವರಿಗೆ ಆ ಸಂದರ್ಭದಲ್ಲಿ ಇಂತಹ ಉತ್ಸಾಹಿ, ಕೆಚ್ಚಿನ ಯುವಕ ಯುವತಿಯರ ಅವಶ್ಯಕತೆ ತುಂಬಾ ಇತ್ತು. ಕೂಡಲೇ ಲಕ್ಷ್ಮಿ ಅವರನ್ನು ತಮ್ಮ ‘ಆಜಾದ್ ಹಿಂದ್ ಫೌಜ್’ಗೆ ಸೇರಿಸಿಕೊಂಡರು. ತೀವ್ರಗಾಮಿ ಮನೋಭಾವದವರೇ ಆಗಿದ್ದ, ಧೈರ್ಯ, ಶಿಸ್ತು, ದೇಶ ಪ್ರೇಮದ ಪ್ರತಿರೂಪವಾಗಿದ್ದ ಲಕ್ಷ್ಮೀ ಅವರ ಪತಿ ಸೆಹಗಾಲ್ ಅವರೂ ಸುಭಾಷ್ ರನ್ನು ಪರಿಚಯ ಮಾಡಿಕೊಂಡು ಆಜಾದ್ ಹಿಂದ್ ಫೌಜ್ ಗೆ ಸೇರಿ, ಪತಿ ಪತ್ನಿಯರಿಬ್ಬರೂ ಅಪೂರ್ವ ರೀತಿಯಲ್ಲಿ ಸುಭಾಷ್ ರು ಮೆಚ್ಚುವಂತೆ ಸೇವೆ ಸಲ್ಲಿಸಿದರು.

ಲಕ್ಷ್ಮೀ ಅವರು ಸುಭಾಷ್ ಚಂದ್ರ ಬೋಸ್ ಅವರ ದೇಶ ಪ್ರೇಮ, ಚಿಂತನೆ, ನಿಲುವುಗಳಿಗೆ ಮಾರು ಹೋಗಿದ್ದರು. ಅವರಿಗೆ ಸುಭಾಷ್ ಅವರ “ಗುಲಾಮರಂತೆ ನೂರು ವರ್ಷ ಬದುಕುವುದಕ್ಕಿಂತ ಸ್ವತಂತ್ರ ಜೀವಿಯಾಗಿ ಒಂದು

ವರ್ಷ ಬದುಕುವುದೇ ಮೇಲು", "ದೇಶ ಪ್ರೇಮಿಗಳೇ ನನಗೆ ನಿಮ್ಮ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ಕೊಡುತ್ತೇನೆ", "ಸ್ವಾತಂತ್ರ್ಯ ಬೇಡಿ ಪಡೆಯುವ ಪದಾರ್ಥವಲ್ಲ; ರಕ್ತ ಹರಿಸಿ ಬಲಿದಾನ ಮಾಡಿ ಪಡೆಯುವಂತಹದ್ದು" ಎಂಬ ಮಾತುಗಳು ತುಂಬಾ ಸ್ಫೂರ್ತಿದಾಯಕವಾಗಿ ಕಂಡು ಬರುತ್ತಿದ್ದವು. "ಭಾರತ ದೇಶ ಪರಮ ಪವಿತ್ರ ಭೂಮಿ; ವೀರ ಭೂಮಿ. ಪ್ರಾಚೀನ ಕಾಲದಲ್ಲಿ ಭರತ ಖಂಡದಲ್ಲಿ ಮೈತ್ರೇಯಿಯಂತಹ ರಮಣಿ, ಬ್ರಿಟಿಷರ ಆಳ್ವಿಕೆಯ ಪೂರ್ವದಲ್ಲಿ ಮಹಾರಾಷ್ಟ್ರದ ಅಹಲ್ಯಾಬಾಯಿಯಂತಹ, ಬಂಗಾಳದ ರಾಣಿ ಭವಾನಿಯಂತಹ, ರಜಿಯಾ ಬೇಗಂ, ನೂರ್ ಜಹಾನ್ ನಂತಹ ಸ್ಫೂರ್ತಿದಾಯಕರು, ಅದ್ವಿತೀಯ ಆಡಳಿತಗಾರರಾದ ವನಿತೆಯರು ಜನ್ಮತಾಳಿದ ಭೂಮಿ. ಪ್ರಾಚೀನ ಕಾಲದಂತೆ ಈ ಕಾಲದಲ್ಲೂ ನಮ್ಮ ದೇಶದಲ್ಲಿ ನಿಶ್ಚಯವಾಗಿ ಉತ್ತಮೋತ್ತಮ ಕುಸುಮಗಳಂತಹ ವೀರ ವನಿತೆಯರು, ಶೂರರು, ಧೀರರು ಜನಿಸುತ್ತಾರೆ ಎಂಬ ನಂಬಿಕೆ ನನಗಿದೆ." ಇವೇ ಮೊದಲಾದ ಸುಭಾಷ್ ಚಂದ್ರ ಬೋಸ್ ಅವರ ನುಡಿಗಳಿಂದ ಲಕ್ಷ್ಮೀ ಅವರು ಬಹಳವಾಗಿ ಸ್ಫೂರ್ತಿಗೊಂಡಿದ್ದರು; ಅಪಾರವಾಗಿ ಪ್ರಭಾವಿತರಾಗಿದ್ದರು.

ಲಕ್ಷ್ಮೀ ಅವರು 'ಆಜಾದ್ ಹಿಂದ್ ಫೌಜ್' ಸಂಘಟನಾ ಕಾರ್ಯಕ್ರಮಕ್ಕೆ ತೊಡಗಿಸಿಕೊಂಡ ದಿನದಿಂದ ದಿನಕ್ಕೆ ಅವರ ಧೀರ ನಡೆ, ದಿಟ್ಟ ನಿಲುವು, ಎಂಥವರಿಗೂ ಮೆಚ್ಚುಗೆಯಾಗುವಂತಿದ್ದವು. ಈ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸುಭಾಷ್ ಚಂದ್ರ ಬೋಸ್ ಅವರು ಮುಂದೆ ಫೌಜ್ ನ ಮಹಿಳಾ ದಳವಾದ ಝಾನ್ಸಿರಾಣಿ ರೆಜಿಮೆಂಟ್ ನ್ನು ವಿಶೇಷವಾಗಿ ರಚಿಸಿದಾಗ ಲಕ್ಷ್ಮೀ ಅವರನ್ನು ಈ ಘಟಕದ ಅಧಿಕೃತ ನಾಯಕಿಯನ್ನಾಗಿ ನೇಮಕ ಮಾಡಿದರು. ಈಕೆಗೆ ಅದರ ಸಂಪೂರ್ಣ ಜವಾಬ್ದಾರಿಯ ಪಟ್ಟವನ್ನು ಕಟ್ಟಿದರು. ಅಂದಿನಿಂದ ಲಕ್ಷ್ಮೀ ಅವರು ಕ್ಯಾಪ್ಟನ್ ಲಕ್ಷ್ಮೀ ಆಗಿ ಹೆಸರುವಾಸಿಯಾದರು. ಈ ಸ್ಥಾನ ವಹಿಸಿಕೊಂಡ ಲಕ್ಷ್ಮೀ ಅವರು ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಸಮರ್ಪಣಾ ಭಾವದಿಂದ ಹಾಗೂ ಇನ್ನೂ ಹೆಚ್ಚಿನ ಸ್ಫೂರ್ತಿಯಿಂದ ಸೇವೆಸಲ್ಲಿಸತೊಡಗಿದರು.

ಕ್ರಿ. ಶ. ೧೯೪೪ ರಲ್ಲಿ ಆಜಾದ್ ಹಿಂದ್ ಸರ್ಕಾರವು ಸ್ಥಾಪಿತಗೊಂಡಾಗ ಅದರ ಸಚಿವ ಸಂಪುಟದಲ್ಲಿ ಕ್ಯಾಪ್ಟನ್ ಲಕ್ಷ್ಮೀ ಅವರನ್ನು ವೈದ್ಯಕೀಯ ಹಾಗೂ ಸಮಾಜ ಕಲ್ಯಾಣ ಶಾಖೆಯ ಸಚಿವೆಯನ್ನಾಗಿ ನೇಮಕ ಮಾಡಲಾಯಿತು. ಆಗ ಆಕೆ ತುಂಬಾ ಕ್ರಿಯಾಶೀಲತೆ ಹಾಗೂ ದಕ್ಷತೆಯಿಂದ ಸೇವೆಸಲ್ಲಿಸತೊಡಗಿದರು. ಆದರೆ ಈ ಸೌಭಾಗ್ಯ ಬಹಳ ಕಾಲ ಮುಂದುವರಿಯಲಿಲ್ಲ. ಏಕೆಂದರೆ ಆಜಾದ್ ಹಿಂದ್ ಫೌಜ್ ಸಂಘಟನೆಯು ಬ್ರಿಟಿಷ್ ಸರಕಾರದ ವಿರುದ್ಧ ನಡೆಸಿದ ಯುದ್ಧದಲ್ಲಿ ಪರಾಭವವನ್ನು ಅನುಭವಿಸಿತು. ಆಗ ಈ ದಳದ ಸದಸ್ಯರುಗಳೆಲ್ಲಾ ಆಂಗ್ಲ ಸರಕಾರಕ್ಕೆ ಶರಣಾಗಬೇಕೆಂದು ಆಂಗ್ಲ ಸರಕಾರವು ಆಜ್ಞೆಯನ್ನು ವಿಧಿಸಿತು. ಆದರೆ ಸ್ವಾಭಿಮಾನದ ಜ್ವಲಂತ ಪ್ರತೀಕವಾಗಿದ್ದ ಕ್ಯಾಪ್ಟನ್ ಲಕ್ಷ್ಮೀ ಅವರು ಸೋಲೊಪ್ಪಿ ಶರಣಾಗಲು ಏನೇನೂ ಸಿದ್ಧರಿರಲಿಲ್ಲ. ಆಗ ಇವರನ್ನು ಬಲವಂತವಾಗಿ ಖೈದು ಮಾಡಿ ರಂಗೂನ್ ಸೆರೆಮನೆಯಲ್ಲಿ ಇಡಲಾಗಿತ್ತು. ಇದರಿಂದ ಭಾರತದಲ್ಲಿ ತೀವ್ರ ರೀತಿಯ ಪ್ರತಿಕ್ರಿಯೆ ವ್ಯಕ್ತವಾಗಿ ಒಂದು ಆಂದೋಲನ ನಡೆಯಿತು. ಇದನ್ನು ಮನಗಂಡ ಬ್ರಿಟಿಷ್ ಸರಕಾರವು ನಿರುಪಾಯವಾಗಿ ಕ್ಯಾಪ್ಟನ್ ಲಕ್ಷ್ಮೀ ಅವರನ್ನು ಷರತ್ತಿನ ಮೇಲೆ ಬಿಡುಗಡೆ ಮಾಡಿತು. ಆ ನಿರ್ಬಂಧ ಹಾಗೂ ಷರತ್ತು ಏನೆಂದರೆ ಲಕ್ಷ್ಮೀ ಅವರು ಸಾರ್ವಜನಿಕ ಸ್ಥಳಗಳಲ್ಲಿ ಭಾಷಣ ಮಾಡಕೂಡದು ಎಂಬುದೇ ಆಗಿತ್ತು.

ಆಜಾದ್ ಹಿಂದ್ ಫೌಜ್ ಅಸ್ತಿತ್ವಕ್ಕೆ ಬಂದುದು ೧೯೪೨ ನೇ ಅಕ್ಟೋಬರ್ ೨೧ ರಂದು. ಅಂತೆಯೇ ೧೯೪೫ ಅಕ್ಟೋಬರ್ ೨೧ ರಂದು ಆಜಾದ್ ಹಿಂದ್ ಫೌಜ್ ನ ವಾರ್ಷಿಕೋತ್ಸವ ಸಮಾರಂಭ ಏರ್ಪಾಟಾಗಿತ್ತು. ಆ ದಿನ ಪ್ರಮುಖ ಭಾಷಣಕಾರರೆಲ್ಲರೂ ಭಾಷಣ ಮಾಡಿದ ನಂತರ, ಕ್ಯಾಪ್ಟನ್ ಲಕ್ಷ್ಮೀ ಅವರು ಸರ್ಕಾರ ಯಾವುದಕ್ಕೆ ನಿರ್ಬಂಧ ಹೇರಿತ್ತೋ ಅದನ್ನು ಮನಃಪೂರ್ವಕವಾಗಿ ತಿರಸ್ಕರಿಸಿದರು. ಸಮಾರಂಭದಲ್ಲಿ ಎದ್ದು ನಿಂತು ಮನಸಾರೆ ಪ್ರಭಾವಯುತ ಭಾಷಣ ಮಾಡಿದರು. ಅದು ಅವರು ಬ್ರಿಟಿಷರ ಷರತ್ತನ್ನು ಉಲ್ಲಂಘಿಸಿ ಮಾಡಿದ ಸಾರ್ವಜನಿಕ ಭಾಷಣವಾಗಿತ್ತು. ಇದೂ ಅಲ್ಲದೆ ಲಕ್ಷ್ಮೀ ಅವರು ಆ ದಿನದಿಂದ ಆಜಾದ್ ಹಿಂದ್ ಫೌಜ್‌ನ ವಿವಿಧ ಸೇನಾ ಅಧಿಕಾರಿಗಳ ವಿರುದ್ಧ ಆಂಗ್ಲ ಸರಕಾರವು ಹೂಡಿದ್ದ ಮೊಕದ್ದಮೆಗಳ ಎದುರಾಗಿ ಚಳುವಳಿ ಮಾಡಿ ಅದಕ್ಕಾಗಿ ಹೋರಾಟ ಮಾಡಲು ಉಪಕ್ರಮಿಸಿದರು. ಇದರ ಪರಿಣಾಮವಾಗಿ ಬ್ರಿಟಿಷ್ ಸರಕಾರವು ಮತ್ತೊಮ್ಮೆ ಲಕ್ಷ್ಮೀ ಅವರನ್ನು ಖೈದು ಮಾಡಿ ಕಾರಾಗೃಹದಲ್ಲಿ ಬಂಧನದಲ್ಲಿರಿಸಿ ಒಂದು ವರ್ಷ ಶಿಕ್ಷೆ ಅನುಭವಿಸಿದ ನಂತರ ಆಕೆಯನ್ನು ಬಿಡುಗಡೆ ಮಾಡಿದರು. ಹೀಗೆ ಕಾರಾಗೃಹದಿಂದ ಬಿಡುಗಡೆ ಮಾಡಿದ್ದು ಸ್ವಾತಂತ್ರ್ಯ ಬಂದ ನಂತರವೇ. ದೇಶದ ಸ್ವಾತಂತ್ರ್ಯದ ಜೊತೆ ಜೊತೆಯಲ್ಲಿಯೇ ತಾವೂ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಹೊಂದಿ ಸ್ವತಂತ್ರ ಭಾರತದಲ್ಲಿ ಶಾಂತಿ ಹಾಗೂ ನೆಮ್ಮದಿಯ ಜೀವನವನ್ನು ಸಂತೋಷದಿಂದ ಅನುಭವಿಸಿದರು.

## ಲೇಖಕರ ಪರಿಚಯ



ಪ್ರೊ. ಕೆ. ಭೈರಪ್ಪ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ವಿಠಲಾಪುರ ಗ್ರಾಮದಲ್ಲಿ ೧೯೪೭ ರಲ್ಲಿ ಜನಿಸಿದರು. ಸಮಾಜಶಾಸ್ತ್ರ ಉಪನ್ಯಾಸಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ, ಕ್ರಿಯಾಶೀಲ ಹಾಗೂ ಆದರ್ಶ ಪ್ರಾಂಶುಪಾಲರಾಗಿ ಮೂರೂವರೆ ದಶಕಗಳ ಸುದೀರ್ಘ ಸೇವೆ ಸಲ್ಲಿಸಿದವರು. ವಿಷಯ ಪಾಂಡಿತ್ಯ, ಬೋಧನಾ ಸಾಮರ್ಥ್ಯ ಹಾಗೂ ಪರಿಣಾಮಕಾರಿ ಬರವಣಿಗೆಯಲ್ಲಿ ಸಾಕಷ್ಟು ಹೆಸರು ಮಾಡಿರುವ ಇವರು ೧೪೦ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಮನಸ್ಸು, ಬಾಲರ ಭಾವನೆ, ಚಿಣ್ಣರ ಚಿಲಿಪಿಲಿ, ಕಿರಿಯರ ಕಲರವ ಮತ್ತು ಮಕ್ಕಳ ಮಾಧುರ್ಯ ಶಿಶುಗೀತೆಗಳ ಸಂಕಲನಗಳು. ಮೇಡಂ ರತ್ನ, ದೇವಪುರ, ಯಶಸ್ವಿನಿ, ರಶ್ಮಿ ಮತ್ತು ಬೃಂದ ಕಾದಂಬರಿಗಳು. ಸಮಾಜ ಸುಧಾರಕರು, ಸಬಲೀಕರಣದತ್ತ ಸ್ತ್ರೀ, ಮುಗಿಲ ಮರೆಯ ಮಿಂಚು, ವಿಶ್ವ ವಿಖ್ಯಾತ ವನಿತೆಯರು, ಬಿಸಿಯೂಟ ಇತ್ಯಾದಿಗಳು ಇವರ ಕೃತಿಗಳು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನವದೆಹಲಿಯ ಸಂಘಟನೆಗಳ ವತಿಯಿಂದ ಎಕ್ಸಲೆನ್ಸ್ ಪ್ರಶಸ್ತಿ, ಭಾರತ ಶಿಕ್ಷಣ ರತ್ನ ಪ್ರಶಸ್ತಿಗಳು ಲಭಿಸಿವೆ.

ಪ್ರಸ್ತುತ ಪಾಠಭಾಗವನ್ನು ಅವರ 'ವಿಶ್ವವಿಖ್ಯಾತ ಮಹಿಳೆಯರು' ಎಂಬ ಪುಸ್ತಕದಿಂದ ಆರಿಸಲಾಗಿದೆ.

### ವಿಶದೀಕರಣ

**ಮೈತ್ರೇಯಿ:** ವೇದೋತ್ತರ ಕಾಲದ ಪ್ರಮುಖ ಮಹಿಳಾ ದಾರ್ಶನಿಕರಲ್ಲಿ ಒಬ್ಬಳು. ಮೈತ್ರಿ ಋಷಿಯ ಮಗಳು ಹಾಗೂ ಯಾಜ್ಞವಲ್ಕ್ಯನ ಪತ್ನಿ. ವೇದಗಳು ಮತ್ತು ಉಪನಿಷತ್ತುಗಳಲ್ಲಿ ಪುರುಷರಂತೆಯೇ ಜ್ಞಾನವನ್ನು ಹೊಂದಿದ್ದು ವಾದ ವಿವಾದಗಳಲ್ಲಿ ಪುರುಷ ತತ್ವಜ್ಞಾನಿಗಳ ವಿರುದ್ಧ ಚೆನ್ನಾಗಿ ಸ್ಪರ್ಧಿಸಬಲ್ಲವಳಾಗಿದ್ದಳು.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಲಕ್ಷ್ಮೀ ಅವರ ತಂದೆ ತಾಯಿ ಯಾರು?
2. ಲಕ್ಷ್ಮೀ ಅವರಿಗೆ ಸ್ಫೂರ್ತಿದಾಯಕವಾಗಿ ಕಂಡು ಬಂದ ಸುಭಾಷ್ ಚಂದ್ರ ಬೋಸ್ ಅವರ ಮಾತುಗಳು ಯಾವುವು?
3. 'ಆಜಾದ್ ಹಿಂದ್ ಫೌಜ್' ನ ಮಹಿಳಾ ದಳದ ಹೆಸರೇನು?
4. ಲಕ್ಷ್ಮೀ ಅವರು ಕ್ಯಾಪ್ಟನ್ ಲಕ್ಷ್ಮೀ ಆದ ಬಗೆ ಹೇಗೆ?
5. ಕ್ಯಾಪ್ಟನ್ ಲಕ್ಷ್ಮೀ ಅವರಿಗೆ ಸರ್ಕಾರ ಹೇರಿದ ನಿರ್ಬಂಧವೇನು?

## ಟಿಪ್ಪಣಿ ಬರೆಯಿರಿ

'ಕ್ಯಾಪ್ಟನ್ ಲಕ್ಷ್ಮೀ' ಪಾಠಭಾಗದ ಆಧಾರದಲ್ಲಿ ಲಕ್ಷ್ಮೀ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ

"ತಾಯಿಯಂತೆ ಮಗಳು ನೂಲಿನಂತೆ ಸೀರೆ" ಎಂಬ ಗಾದೆಮಾತು ಕ್ಯಾಪ್ಟನ್ ಲಕ್ಷ್ಮಿಯವರ ಜೀವನದಲ್ಲಿ ನಿಜವಾಯ್ತು. ಇದೇ ರೀತಿ ನಿಮಗೆ ಇಷ್ಟವಾದ ಒಂದು ಗಾದೆ ಮಾತನ್ನು ಆಯ್ದುಕೊಂಡು ವಿಸ್ತರಿಸಿ ಬರೆಯಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಬ್ರಿಟಿಷರ ವಿರುದ್ಧ ಹೋರಾಡಿದ ಕ್ಯಾಪ್ಟನ್ ಲಕ್ಷ್ಮಿ ಅವರ ಕುರಿತು ಓದಿ ತಿಳಿದಿರುವಿರಿ. ಅಂತೆಯೇ ಬ್ರಿಟಿಷರ ವಿರುದ್ಧ ಹೋರಾಡಿದ ಇನ್ನೋರ್ವ ಮಹಿಳೆಯ ವ್ಯಕ್ತಿ ಪರಿಚಯ ಬರೆಯಿರಿ.

## ಪ್ರಬಂಧ ರಚಿಸಿರಿ

ಇಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನ ಛಾಪು ಮೂಡಿಸಿದ್ದಾಳೆ. ಹಲವಾರು ಸಾಧನೆಗಳನ್ನು ಮಾಡಿದ್ದಾಳೆ. ಈ ಹಿನ್ನೆಲೆಯಲ್ಲಿ 'ಮಹಿಳಾ ಸಾಧಕಿಯರು' ಎಂಬ ವಿಷಯದ ಕುರಿತು ಪ್ರಬಂಧ ರಚಿಸಿರಿ.

## ವಾಕ್ಯ ರಚಿಸಿರಿ

ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

ಉದಾ: ಪ್ರಖ್ಯಾತ - ಕ್ಯಾಪ್ಟನ್ ಲಕ್ಷ್ಮಿಯವರ ತಂದೆ ವಕೀಲಿ ವೃತ್ತಿಯಲ್ಲಿ ಪ್ರಖ್ಯಾತರಾಗಿದ್ದರು.

- ಧೈರ್ಯ
- ಶಿಸ್ತು
- ದೇಶ ಪ್ರೇಮ
- ಯೋಗಕ್ಷೇಮ

## ಸ್ಲೈಡ್ ತಯಾರಿಸಿರಿ

ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಮಹಿಳೆಯರ ಭಾವಚಿತ್ರ ಮತ್ತು ಮಾಹಿತಿಗಳನ್ನು ಅಂತರ್ಜಾಲದಿಂದ ಸಂಗ್ರಹಿಸಿ ಸ್ಲೈಡ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

# ಅರ್ಥಕೋಶ

| | | |
|---|---|---|
| ಅಂಕುರ | - | ಮೊಳಕೆ, ಚಿಗುರು |
| ಅಂಕುರಿಸು | - | ಹುಟ್ಟು |
| ಅಂತಕ | - | ಯಮ, ಶಿವ |
| ಅಂತಸ್ಥ | - | ಒಳಗಿನ, ನಡುವಿನ |
| ಅಂಬರ | - | ಆಕಾಶ, ಬಾಂದಳ |
| ಅಂಬುಧಿ | - | ಸಮುದ್ರ, ಕಡಲು |
| ಅಖಿಳ | - | ಎಲ್ಲ |
| ಅಗಮ್ಯ | - | ಸುಲಭವಾಗಿ ತಲುಪದ, ತಿಳಿಯದ |
| ಅಡಿ | - | ಪಾದ |
| ಅಣಗಿರ್ದು | - | ಸುಪ್ತವಾಗಿದ್ದು |
| ಅತಿದೋಷ | - | ದೊಡ್ಡ ದೋಷ |
| ಅದಮ್ಯ | - | ನಿಯಂತ್ರಿಸಲು ಅಸಾಧ್ಯವಾದುದು |
| ಅನನ್ಯ | - | ಸರಿಸಾಟಿಯಿಲ್ಲದ, ವಿಶಿಷ್ಟ |
| ಅನವರತ | - | ಸದಾ, ನಿತ್ಯ |
| ಅನಿತು | - | ಅಷ್ಟು |
| ಅನಿರ್ವಚನೀಯ | - | ಹೇಳುವುದಕ್ಕೆ ಸಾಧ್ಯವಿಲ್ಲದ |
| ಅನೂಹ್ಯ | - | ಊಹಿಸಲು ಸಾಧ್ಯವಿಲ್ಲದ, ಅಪೂರ್ವ, ಅಸಾಧಾರಣ |
| ಅಪ್ರತಿಮ | - | ಎಣೆಯಿಲ್ಲದ |
| ಅಮಳ | - | ಪರಿಶುದ್ಧ, ಶ್ರೇಷ್ಠವಾದ |
| ಅರಕೆ | - | ಕೊರತೆ |
| ಅರವಟ್ಟಿಗೆ | - | ಬಾಯಾರಿದವರಿಗೆ ಧರ್ಮಾರ್ಥವಾಗಿ ನೀರು ಕೊಡುವ ಜಾಗ |
| ಅರಿಕೆ | - | ಮನವಿ ,ಬೇಡಿಕೆ |
| ಅರಿಯದೆ | - | ತಿಳಿಯದೆ |
| ಅರಿವು | - | ತಿಳಿವಳಿಕೆ, ಜ್ಞಾನ |
| ಅರುಹು | - | ತಿಳಿಸು |
| ಅರ್ತಿ | - | ಪ್ರೀತಿ |
| ಅರ್ಥ | - | ಸಂಪತ್ತು |

| | | |
|---|---|---|
| ಅರ್ಥಿ ಜನ | - | ಬೇಡುವವರು |
| ಅಲುಗಿಸಿ | - | ಅಲುಗಾಡಿಸಿ,ನಡುಗಿಸಿ |
| ಅವನೀಶ | - | ಭೂಮಿಯ ಒಡೆಯ, ರಾಜ |
| ಅಸೀಮ | - | ಅಪಾರ, ಅಮಿತ |
| ಆಗಮ | - | ಪರಂಪರೆಯಿಂದ ಬಂದ ಶಾಸ್ತ್ರ |
| ಆಚಾರ್ಯ ಪುರುಷ | - | ಶ್ರೇಷ್ಠ ವ್ಯಕ್ತಿ |
| ಆಟಿ | - | ತುಳುವಿನ ಒಂದು ತಿಂಗಳು |
| ಆಮೋದ | - | ಸಂತೋಷ, ಸುಗಂಧ, ಸುವಾಸನೆ |
| ಆರಭಾರ (ಆರವಾರ) | - | ಎಲ್ಲವನ್ನೂ ಒಪ್ಪಿಸುವ ಜವಾಬ್ದಾರಿ, ಹೊಣೆ |
| ಆವಿಷ್ಟ | - | ಪ್ರವೇಶಿಸಿದ, ಆವೇಶ ಹೊಂದಿದ ಖ್ಯಾತಿ - ಕೀರ್ತಿ |
| ಆವುದು | - | ಯಾವುದು |
| ಆಸನ್ನಭವ್ಯೆ | - | ಜೈನ ತತ್ತ್ವೋಪದೇಶದಿಂದ ಮನಃಪರಿಪಾಕವನ್ನು ಹೊಂದಿದವಳು |
| ಇಂತು | - | ಹೀಗೆ |
| ಇಕ್ಕು | - | ನೀಡು |
| ಇಟಿಗೆ | - | ಇಟ್ಟಿಗೆ |
| ಇನಿತು | - | ಇಷ್ಟು |
| ಇರ್ದನು | - | ಇದ್ದನು |
| ಇಳೆ | - | ಭೂಮಿ |
| ಈಯು | - | ಕೊಡು |
| ಈರ್ಷೆ | - | ಮತ್ಸರ, ಅಸೂಯೆ |
| ಉಡ | - | ಉಡು, ಹಲ್ಲಿಯ ಜಾತಿಗೆ ಸೇರಿದ ಜೀವಿ |
| ಉಣ್ಣು | - | ತಿನ್ನು |
| ಉತ್ಕರ್ಷ | - | ಹೆಚ್ಚಳ, ಶ್ರೇಷ್ಠತೆ, ಸಂತೋಷ ಏಳಿಗೆ |
| ಉತ್ತುಂಗ | - | ಎತ್ತರದ, ಶ್ರೇಷ್ಠವಾದ, ಉನ್ನತ |
| ಉದಾತ್ತ | - | ಶ್ರೇಷ್ಠ |
| ಉದ್ಗಾರ | - | ಭಾವಾವೇಶದಿಂದ ಕೂಡಿದ ಮಾತು |
| ಉದ್ಭಾಸಿ | - | ಹೊಳೆಯುವ |
| ಉನ್ನತಿ | - | ಏಳಿಗೆ, ವೃದ್ಧಿ |
| ಉನ್ಮಾದ | - | ಉಲ್ಲಾಸ, ಹರ್ಷ, ಹುಚ್ಚು |

| | | |
|---|---|---|
| ಉಪಚರಿಸಿ | - | ಗೌರವಿಸಿ |
| ಉಪಾಖ್ಯಾನ | - | ಉಪಕಥೆ |
| ಉಪೇಕ್ಷೆ | - | ಅನಾದರ |
| ಉರೆ | - | ಅತಿಶಯವಾಗಿ, ಹೆಚ್ಚಾಗಿ |
| ಉಲ್ಲಂಘಿಸು | - | ಮೀರು, ದಾಟಿ ಹೋಗು |
| ಉಸಿರ್ವ | - | ಹೇಳುವ, ಉಸಿರಾಡುವ |
| ಎಣೆ | - | ಸಾಟಿ, ಸರಿಸಮಾನ |
| ಎರಗಿ | - | ನಮಸ್ಕರಿಸಿ |
| ಎಲ್ಲೇ ಕಟ್ಟು | - | ಮರ್ಯಾದೆ, ಮಿತಿ, ಮೇರೆ, ಗಡಿ, ಸೀಮೆ |
| ಎವೆ | - | ಕಣ್ಣರೆಪ್ಪೆ |
| ಎಸೆ | - | ಶೋಭಿಸು |
| ಎಱ್ | - | ಬೇಡು, ನೀಡು |
| ಏಕಾಂತ | - | ಗುಟ್ಟು, ರಹಸ್ಯ |
| ಏಟು | - | ಪೆಟ್ಟು |
| ಏರ್ಪಾಡು | - | ವ್ಯವಸ್ಥೆ, ತಯಾರಿ |
| ಒಂದು ಗಳಿಗೆ | - | 24 ನಿಮಿಷಗಳ ಕಾಲ |
| ಒಗ್ಗು | - | ಹೊಂದಿಕೆಯಾಗು |
| ಒಡಕು | - | ಭಿನ್ನತೆ, ಬಿರುಕು |
| ಒಡಮೆ | - | ಒಡವೆ, ಆಸ್ತಿ, ಸಂಪತ್ತು |
| ಒಡಲು | - | ಶರೀರ, ದೇಹ |
| ಒಪ್ಪು | - | ಸಮ್ಮತಿಸು |
| ಒಯ್ಯು | - | ತೆಗೆದುಕೊಂಡು ಹೋಗುವುದು |
| ಒಸೆ | - | ಪ್ರಸನ್ನನಾಗು ,ಮೆಚ್ಚು |
| ಓವು | - | ಪ್ರೀತಿಸು, ಕಾಪಾಡು, ಉಪಚರಿಸು |
| ಓಜ | - | ಗುರು, ಶಿಲ್ಪಿ |
| ಕಂಗಾಲಾಗು | - | ದಿಕ್ಕು ತೋಚದಾಗು |
| ಕಂಟಕ | - | ತೊಂದರೆ, ಕೇಡು |
| ಕಂಡಿ | - | ಕಿಟಿಕಿ |
| ಕಡೆಗಂದಿ | - | ಕಡೆಗಂಜಿ,ಕೊನೆಯ ಕರು |

| | | |
|---|---|---|
| ಕಣಸು | - | ನೋಟ, ಮೈಮರೆಸುವಂತಹ ಸುಂದರ ದೃಶ್ಯ,ಆದರ್ಶ |
| ಕಪಟಪಟು | - | ಮೋಸ ಮಾಡುವವ |
| ಕಬಳಿಸು | - | ನುಂಗು |
| ಕರಿ | - | ಆನೆ |
| ಕರುಬು | - | ಅಸೂಯೆ, ಹೊಟ್ಟೆಕಿಚ್ಚು ಪಡು |
| ಕರ್ಕಶ | - | ಕಠೋರ, ಇಂಪಿಲ್ಲದ |
| ಕರ್ಬೊಗೆ | - | ಕಪ್ಪು ಹೊಗೆ |
| ಕಲಕು | - | ಕದಡು |
| ಕಲ್ಲ ಕಲಂಬಿ | - | ಕಲ್ಲಿನ ಕಪಾಟು |
| ಕವಡೆ | - | ಒಂದು ಬಗೆಯ ಕಡಲ ಚಿಪ್ಪು, ಒಂದು ಕಾಲದ ನಾಣ್ಯ |
| ಕಳಾಹೀನ | - | ಪ್ರಕಾಶವನ್ನು ಕಳೆದುಕೊಳ್ಳು, ಕಳೆಗುಂದು |
| ಕಾಟ | - | ತೊಂದರೆ |
| ಕಾತರ | - | ತವಕ |
| ಕಾರಾಗೃಹ | - | ಸೆರೆಮನೆ |
| ಕಾರ್ಯ | - | ಕೆಲಸ |
| ಕಾಳಗ | - | ಯುದ್ಧ |
| ಕಿಚ್ಚು | - | ಬೆಂಕಿ |
| ಕಿಡಿಗೇಡಿ | - | ತಿಳಿಗೇಡಿ,ತಂಟೆಕೋರ |
| ಕೀಟಲೆ ಮಾಡು | - | ತೊಂದರೆ ಮಾಡು |
| ಕುಟಿಲ | - | ಮೋಸ |
| ಕೆಚ್ಚು | - | ಧೈರ್ಯ |
| ಕೆಡವು | - | ಬೀಳಿಸು |
| ಕೆಡಹು | - | ಬೀಳಿಸು |
| ಕೆನ್ನಾಲಿ | - | ಕೆಂಪಾದ ನಾಲಿಗೆ, ಬೆಂಕಿಯ ಜ್ವಾಲೆ |
| ಕೋಡು | - | ಶಿಖರ |
| ಕೋಮು | - | ಪಂಗಡ |
| ಕ್ಷುದ್ರ | - | ಕೀಳು, ಹೀನ, ಅಲ್ಪ, ದುಷ್ಟ |
| ಕ್ಷುಬ್ಧ | - | ತಳಮಳಿಸು, ಅಲ್ಲೋಲಕಲ್ಲೋಲ |
| ಕ್ಷೋಣಿ | - | ಭೂಮಿ |

| | | |
|---|---|---|
| ಖೈದು | - | ಸೆರೆ ಹಿಡಿದ |
| ಗಗ್ಗರ | - | ಕಾಲಿನ ಕಡಗ |
| ಗಡಬಡಿಸಿ | - | ಗಡಿಬಿಡಿ ಮಾಡಿ |
| ಗಡಿಕಲ್ಲು | - | ಮೇರೆಯನ್ನು ಸೂಚಿಸುವ ಕಲ್ಲು |
| ಗತಿ ತೋರು | - | ಬುದ್ಧಿ ಕಲಿಸು |
| ಗತಿಸಿ ಹೋದ | - | ಅಳಿದು ಹೋದ, ಮೃತಪಟ್ಟ |
| ಗರತಿ | - | ಗೃಹಿಣಿ |
| ಗಲಭೆ | - | ಗದ್ದಲ |
| ಗವಿ | - | ಗುಹೆ, ನೆಲೆ |
| ಗಹಗಹಿಸು | - | ದೊಡ್ಡ ಸ್ವರದಲ್ಲಿ ನಗು, ಗೊಳ್ಳೆಂದು ನಗು |
| ಗಳಿಕೆ | - | ಸಂಪಾದನೆ |
| ಗೆಯ್ಯು | - | ದುಡಿ, ಶ್ರಮಿಸು, ಕೆಲಸ ಮಾಡು |
| ಗೊರಸು | - | ಪಾದದ ಅಡಿಯ ಗಟ್ಟಿಯಾದ ಆವರಣ |
| ಗೋಚರ | - | ದನಮೇಯುವ ಹುಲ್ಲುಗಾವಲು, ಕಣ್ಣಿಗೆ ಕಾಣತಕ್ಕ |
| ಗೋಳುಹೊಯ್ಯು | - | ಪೀಡಿಸು, ತೊಂದರೆ ಕೊಡು |
| ಗೌಣ | - | ನಗಣ್ಯ,ಕೇವಲ |
| ಗಿಂಡಿ | - | ಸಣ್ಣ ಬಾಯಿಯ ಕೊಂಬು ಇರುವ ಬಿಂದಿಗೆ |
| ಚಾಳಿ | - | ಚಟ |
| ಚಿಂತಾಕ್ರಾಂತ | - | ದು:ಖಪೀಡಿತ |
| ಚಿಗರೆ | - | ಜಿಂಕೆ |
| ಚಿತ್ಕಳಾ | - | ಮನಸ್ಸಿಗೆ ಮುದ ನೀಡುವ |
| ಚಿತ್ತ | - | ಮನಸ್ಸು |
| ಚಿನಿವಾರ | - | ಅಕ್ಕಸಾಲಿಗ |
| ಚಿನ್ಮಯಿ | - | ಮನಸೆಳೆಯುವ, ಆಕರ್ಷಿಸುವ |
| ಚೆನ್ನೆ | - | ಮಂಜಟ್ಟಿ ಕಾಯಿ |
| ಚೆನ್ನೆಮಣೆ | - | ತುಳುನಾಡಿನ ಜನಪ್ರಿಯ ಒಳಾಂಗಣ ಆಟ |
| ಚೇತನ | - | ಜೀವ, ಶಕ್ತಿ, ಬುದ್ಧಿ, ಜ್ಞಾನ |
| ಚೇಷ್ಟೆ | - | ಕೀಟಲೆ, ತುಂಟಾಟ |
| ಚೌಕಿ | - | ವೇಷ ಹಾಕುವ ಸ್ಥಳ |
| ಛಿದ್ರ | - | ಬಿರುಕು, ಚೂರು |

| | | |
|---|---|---|
| ಜನ ವಂದಿತೆ | - | ಜನರಿಂದ ವಂದಿಸಲ್ಪಡುವವಳು |
| ಜಸ | - | ಯಶಸ್ಸು |
| ಜಾಕೆಟ್ | - | ಎದೆಗವಚದಂತೆ ಧರಿಸುವ ಉಡುಗೆ |
| ಜಾಗರ | - | ಎಚ್ಚರ |
| ಜಿನಶಾಸನ | - | ಜೈನ ಸಿದ್ಧಾಂತ |
| ಜಿರಾಪತ್ತು | - | ಹನಿಕಡಿಯದೆ ಸುರಿಯುವ |
| ಜೀವಾಳ | - | ತಿರುಳು, ಸತ್ವ |
| ಜ್ವಲಂತ | - | ಸ್ಪಷ್ಟ |
| ಝಾಡಿಸು | - | ಕೊಡಹು, ನಿಂದಿಸು, ದಬಾಯಿಸು |
| ಡೊಂಬನ | - | ಡೊಂಬರಾಟದವನ |
| ತಂಗೊಳ | - | ತಂಪಾದ ಕೊಳ |
| ತಂತ್ರ | - | ಉಪಾಯ |
| ತಡವು | - | ತಡವರಿಸು |
| ತತ್ | - | ಅದು |
| ತನ್ಮಯ | - | ಮಗ್ನ, ತಲ್ಲೀನ |
| ತಬ್ಬಿಬ್ಬಾಗು | - | ಕಕ್ಕಾ ಬಿಕ್ಕಿ, ದಿಗ್ಭ್ರಮೆ |
| ತವಿಸು | - | ಕುಂದಿಸು,ತಗ್ಗಿಸು,ಕ್ಷೀಣಗೊಳಿಸು |
| ತಳಮಳ | - | ಆತುರ, ಕಳವಳ |
| ತಳೆದು | - | ಹೊತ್ತು |
| ತಿರಿಬೂಡು | - | ಬಡವರ ಮನೆ |
| ತಿರಿಬೂಡು | - | ಶ್ರೀಮಂತರ ದೊಡ್ಡಮನೆ |
| ತುಸು | - | ಸ್ವಲ್ಪ |
| ತೂರು | - | ಪ್ರವೇಶಿಸು, ಮೇಲಕ್ಕೆ ಎಸೆ |
| ತೃಣ | - | ಹುಲ್ಲು |
| ತೇಗು | - | ಸಾಗುವಾನಿ ಮರ, ಜಾತಿಯ ಮರ |
| ಥಿಯೇಟರ್ | - | ರಂಗಮಂದಿರ |
| ದಂಡಿಗೆ | - | ಪಲ್ಲಕ್ಕಿ |
| ದಕ್ಷತೆ | - | ನೈಪುಣ್ಯ, ಕಾರ್ಯಕ್ಷಮತೆ |
| ದರಿದ್ರ | - | ಬಡವ, ಹಣವಿಲ್ಲದವ |
| ದರ್ಶನ | - | ಧರ್ಮ |

| | | |
|---|---|---|
| ದಾಂದಲೆ | - | ಕೋಲಾಹಲ, ಗದ್ದಲ |
| ದಿಕ್ತಟ | - | ದಿಗಂತ, ದಿಕ್ಕಿನ ಅಂತ |
| ದಿಗ್ದರ್ಶನ | - | ಮಾರ್ಗದರ್ಶನ |
| ದಿಟ್ಟಿಸು | - | ನೆಟ್ಟ ನೋಟದಿಂದ ನೋಡು |
| ದೀವಟಿಗೆ | - | ಪಂಜು, ದೊಂದಿ |
| ದುಂದುಭಿ | - | ಒಂದು ಬಗೆಯ ವಾದ್ಯ |
| ದುಡುಕು | - | ವಿಚಾರ ಮಾಡದೇ ಕೆಲಸಕ್ಕೆ ಕೈಹಾಕು, ಮುಂಗೋಪ |
| ದುರ್ನಾತ | - | ಕೆಟ್ಟವಾಸನೆ |
| ದುರ್ಭೇದ್ಯ | - | ಒಡೆಯಲು ಅಸಾಧ್ಯವಾದ |
| ದೆಸೆ | - | ದಿಕ್ಕು |
| ದೌಷ್ಟ್ಯವ | - | ದುಷ್ಟತನ |
| ಧರೆ | - | ಭೂಮಿ |
| ಧರ್ಮಗೊಡ್ಡು | - | ಧರ್ಮಕ್ಕೆ ಅಂಧವಾಗಿ ಕಟ್ಟು ಬೀಳು |
| ಧಿಕ್ಕನೆ | - | ಒಮ್ಮೆಲೆ |
| ಧೀವರ | - | ಬೇಟೆಗಾರ |
| ಧೂಮ್ರ | - | ಹೊಗೆ, ಕಂದು ಬಣ್ಣ |
| ಧೂಮ್ರಾಕ್ಷಸ | - | ಧೂಮ್ರ ರಾಕ್ಷಸ, ಹೊಗೆಯೆಂಬ ರಕ್ಕಸ |
| ನರಜಾತಿ | - | ಮಾನವ ಜನಾಂಗ |
| ನಾಜೂಕು | - | ಶಿಸ್ತುಬದ್ಧವಾದ, ನಯ |
| ನಿಬ್ಬೆರಗು | - | ಅತ್ಯಾಶ್ಚರ್ಯ |
| ನಿಯತಿ | - | ನಿಯಮ, ಅದೃಷ್ಟ, ವಿಧಿ |
| ನಿರಾಶೆ | - | ಆಸೆಯನ್ನು ಕಳೆದುಕೊಂಡಿರುವಿಕೆ |
| ನಿಷ್ಕ್ರಮಣ | - | ಹೋಗುವಿಕೆ |
| ನೆಟ್ಟನೆ | - | ನೆಟ್ಟಗೆ |
| ನೆನಹು | - | ನೆನಪು |
| ನೆನೆದ | - | ಯೋಚಿಸಿದ |
| ನೆರೆದ | - | ಸುತ್ತುವರಿದ |
| ಪಕ್ಕೆ | - | ಮಗ್ಗುಲು |
| ಪಥ್ಯ | - | ರೋಗಿಗೆ ನೀಡುವ ಯೋಗ್ಯವಾದ ಆಹಾರ |
| ಪದ ಪಂಕೇಜ | - | ಪಾದಕಮಲ |

| | | |
|---|---|---|
| ಪದೆ | - | ಪ್ರೀತಿ |
| ಪರವಶನಾಗು | - | ಮಗ್ನನಾಗು, ತಲ್ಲೀನನಾಗು |
| ಪರಾಭವ | - | ಸೋಲು, ಅಪಜಯ |
| ಪರಿ | - | ರೀತಿ |
| ಪರಿಸೆ | - | ಜಾತ್ರೆ |
| ಪರುಷ ಮಣಿ | - | ಮುಟ್ಟಿದ್ದನ್ನು ಚಿನ್ನ ವಾಗಿಸುವ ಕಲ್ಲು ಮಣಿ |
| ಪರ್ವತಾವಳಿ | - | ಪರ್ವತಗಳ ಸಮೂಹ |
| ಪಶ್ಚಾತ್ತಾಪ | - | ತಪ್ಪು ಮಾಡಿದ ಮೇಲೆ ಪಡುವ ದುಃಖ |
| ಪಾಡು | - | ಸ್ಥಿತಿ, ಅವಸ್ಥೆ |
| ಪಿರಿಯ | - | ಹಿರಿಯ |
| ಪೆರರು | - | ಅನ್ಯರು, ಬೇರೆಯವರು |
| ಪೊಡವಿ | - | ಭೂಮಿ |
| ಪೋಣಿಸಿ | - | ಹೊಂದಿಸಿ, ಕೋದು |
| ಪ್ರಖ್ಯಾತ | - | ಹೆಸರಾಂತ |
| ಪ್ರಭೇದ | - | ಬಗೆ |
| ಪ್ರವೀಣ | - | ಅಧಿಕ ಜ್ಞಾನ ಉಳ್ಳವ, ಬುದ್ಧಿವಂತ |
| ಫಾಸಲೆ | - | ಅಂತರ |
| ಬನ್ನ | - | ತೊಂದರೆ, ಪೀಡೆ |
| ಬರಕಳ (ಬಾರ್ಕಳ) | - | ಬತ್ತ ಕುಟ್ಟುವ ಜಾಗ |
| ಬವಣೆ | - | ಕಷ್ಟ |
| ಬಿಜಯಂಗೆಯ್ | - | ದಯಮಾಡು, ಬರು |
| ಬಿಡುಗಣ್ಣು | - | ಬಿಟ್ಟಕಣ್ಣು |
| ಬಿರಿಯು | - | ಸೀಳು |
| ಬಿರಿಯು | - | ಅರಳು |
| ಬಿರ್ರನೆ | - | ಒಮ್ಮೆಲೆ, ವೇಗವಾಗಿ |
| ಬಿಳಲು | - | ಮರಗಳ ಗೆಲ್ಲಿನಿಂದ ಬಳ್ಳಿಯಂತೆ ಇಳಿಯುವ ಬೇರು |
| ಬುಧ ಜನ | - | ಪಂಡಿತರು, ವಿದ್ವಾಂಸರು |
| ಬೆರಟಿ | - | ಒಣಗಿ ಹೋದ |
| ಬೆಸಸು | - | ಹೇಳು |
| ಬೇಹಾಗ | - | ಬೇಕಾದಾಗ |

| | | |
|---|---|---|
| ಬೋಧಿಸತ್ತ್ವ | - | ಬುದ್ಧ |
| ಬೋಧಿಸು | - | ಕಲಿಸು |
| ಭಂಗಿ | - | ವಿಧಾನ, ಕ್ರಮ |
| ಭರಿಸು | - | ತುಂಬಿಸು |
| ಭವ | - | ಸಂಸಾರ, ಹುಟ್ಟು |
| ಭವತಾರಿಣಿ | - | ಭವದಿಂದ ಬಿಡುಗಡೆ ಕೊಡುವವಳು, ಮೋಕ್ಷದಾಯಿನಿ |
| ಭಾಸವಾಗು | - | ತೋರು, ಹೊಳೆಯು |
| ಭೂಪಾಲ | - | ರಾಜ |
| ಭೂಭುಜ | - | ರಾಜ |
| ಭೋರ್ಗರೆ | - | ಸಶಬ್ಧವಾಗಿ ಹರಿಯು, ತುಂಬಿ ಹರಿಯು |
| ಭ್ರಷ್ಟ | - | ಸಮಾಜ ಬಾಹಿರ |
| ಭ್ರಾಂತಿ | - | ಭ್ರಮೆ |
| ಮಂಗಳ | - | ಶುಭ |
| ಮಂದಬುದ್ಧಿ | - | ಜಡ ಬುದ್ಧಿ, ನಿಧಾನವಾದ ಬುದ್ಧಿ |
| ಮಕುಟ | - | ಕಿರೀಟ |
| ಮಚ್ಚು | - | ಕಡಿಗತ್ತಿ |
| ಮತ್ತಿ | - | ಒಂದು ಜಾತಿಯ ಮರ |
| ಮನೋಧರ್ಮ | - | ಮನಸ್ಸಿನ ರೀತಿ, ಮನಸ್ಸಿನ ನಡಾವಳಿ |
| ಮನೋನ್ಮಯಿ | - | ಮನಸ್ಸಿಗೆ ಆನಂದವನ್ನು ನೀಡುವವಳು |
| ಮನ್ನಿಸು | - | ಕ್ಷಮಿಸು |
| ಮಮ್ಮಲಮರುಗು | - | ತುಂಬಾ ದು:ಖಪಡು |
| ಮಸುಕು | - | ಮಬ್ಬು |
| ಮಸುಳು | - | ಮಬ್ಬಾಗು |
| ಮಸೆ | - | ಸುಡುವ, ತೀವ್ರವಾದ |
| ಮಾಗು | - | ಪಕ್ವವಾಗು |
| ಮಾನಿನಿ | - | ಹೆಂಗಸು |
| ಮಾಮರ | - | ಮಾವಿನ ಮರ |
| ಮಾರು | - | ಅಳತೆಯ ಮಾನ, ಒಂದು ಮೊಣಕೈಯ ಅಳತೆ |
| ಮಿಡಿಯು | - | ಬೆರಳಿನ ಮೇಲಿಟ್ಟು ಹಾರಿಸು |
| ಮಿತು | - | ಮೃತ್ಯು |

| | | |
|---|---|---|
| ಮುತುವರ್ಜಿ | - | ಕಾಳಜಿ |
| ಮುನಿವರ್ಗ | - | ಮುನಿ ಸಮೂಹ |
| ಮೇಡು | - | ದಿಬ್ಬ, ಎತ್ತರದ ಪ್ರದೇಶ |
| ಮೊಕದ್ದಮೆ | - | ದಾವೆ, ಕೇಸು, ವ್ಯಾಜ್ಯ |
| ಮೋಡಿ | - | ಆಕರ್ಷಣೆ |
| ಮೋರೆ | - | ಮುಖ |
| ಯುಕ್ತಿಯುಕ್ತತೆ | - | ತರ್ಕಬದ್ಧವಾಗಿರುವಿಕೆ |
| ರಂಗ ಸಜ್ಜಿಕೆ | - | ರಂಗದ ಅಲಂಕಾರ, ವೇದಿಕೆ ಸಿದ್ಧಪಡಿಸು |
| ರಂಪ | - | ಗದ್ದಲ,ಗಲಾಟೆ |
| ರವ | - | ಶಬ್ದ |
| ರೋದನ | - | ಆಕ್ರಂದನ, ಅಳುವಿಕೆ |
| ರೋಸಿ ಹೋಗು | - | ಬೇಸತ್ತು ಹೋಗು, ಅಸಹನೆಯನ್ನು ವ್ಯಕ್ತಪಡಿಸು |
| ಲಾವಣ್ಯ | - | ಸರ್ವಾಂಗ ಸೌಂದರ್ಯ |
| ಲಾಸ್ಯ | - | ನಾಟ್ಯದ ಒಂದು ಬಗೆ |
| ವರಾಕೊಂದು | - | ವರಹಕ್ಕೆ ಒಂದು. ವರಹ- ಹಳೆಯ ಕಾಲದ ಚಿನ್ನದ ನಾಣ್ಯ |
| ವರ್ಧಿಸು | - | ಹೆಚ್ಚಳವುಂಟಾಗು |
| ವಾಂಛಿತ | - | ಬಯಕೆ |
| ವಿಕಲ್ಪ | - | ವಿಭಿನ್ನತೆ |
| ವಿಕೃತ | - | ರೂಪುಗೆಟ್ಟ, ಕುರೂಪಿಯಾದ, ಕೆಟ್ಟ |
| ವಿಗಮ | - | ಅಗಲುವಿಕೆ |
| ವಿದೂಷಕ | - | ಹಾಸ್ಯಗಾರ |
| ವಿದ್ವತ್ಪೂರ್ಣ | - | ಪಾಂಡಿತ್ಯವುಳ್ಳ |
| ವಿಧಿ | - | ಅದೃಷ್ಟ |
| ವಿನೋದ ಧ್ವನಿ | - | ವಿಲಾಸ ಧ್ವನಿ, ಉತ್ಸಾಹದ ಸ್ವರ |
| ವಿಮಳ | - | ಕಲ್ಮಶವಿಲ್ಲದ ,ಸ್ವಚ್ಛ |
| ವಿಲಾಸ | - | ವಿನೋದ, ಆಟ, ಕ್ರೀಡೆ |
| ವಿಲಾಸ ಜೀವನ | - | ಆಡಂಬರದ ಜೀವನ |
| ವಿಶುದ್ಧ | - | ಕುಂದಿಲ್ಲದ, ಶುದ್ಧವಾದ, ಪವಿತ್ರ |
| ವಿಸ್ಮಿತ | - | ಆಶ್ಚರ್ಯಗೊಂಡ |
| ವಿಹಿತ | - | ವಿಶೇಷವಾಗಿ ಹಿತಕರ |

| | | |
|---|---|---|
| ವೀಚಿ | - | ತರಂಗ, ತೆರೆ |
| ವೇದ | - | ಪ್ರಾಚೀನತಮ ಭಾರತೀಯ ತಾತ್ವಿಕ ಸಾಹಿತ್ಯ |
| ವೈಯಾರ | - | ಬಿನ್ನಾಣ |
| ವೈಷಮ್ಯ | - | ದ್ವೇಷ |
| ವ್ಯಂಜಕತ್ವ | - | ಸ್ಪಷ್ಟ ಮಾಡುವ |
| ಶೀಲ | - | ಅಭ್ಯಾಸ, ಒಳ್ಳೆಯ ನಡತೆ |
| ಶ್ರೇಯಸ್ಸು | - | ಕೀರ್ತಿ |
| ಷರತ್ತು | - | ನಿಬಂಧನೆ |
| ಸಂಕಲ್ಪ | - | ನಿರ್ಧಾರ |
| ಸಂಕುಲ | - | ಸಮೂಹ |
| ಸಂಜನಿತ | - | ಹುಟ್ಟಿದ |
| ಸಂಭ್ರಮ | - | ಸಡಗರ, ವಿಜೃಂಭಣೆ |
| ಸಣಕಲು | - | ಕೃಷಕಾಯ |
| ಸನಿಹ | - | ಸಮೀಪ, ಹತ್ತಿರ |
| ಸಪ್ರಾಣಮಯಿ | - | ಪ್ರಾಣಸಹಿತ ಒಳಗೊಂಡ |
| ಸಮರಸ | - | ಹೊಂದಾಣಿಕೆ |
| ಸಮಾವೇಶ | - | ಒಟ್ಟು ಸೇರು, ಸಮ್ಮೇಳನ |
| ಸಮುಚ್ಚಯ | - | ಒಟ್ಟಿಗೆ ಜೋಡಿಸಿದ |
| ಸಮ್ಮುಖ | - | ಎದುರು |
| ಸಾಂಗವಾಗಿ | - | ಲೋಪವಿಲ್ಲದೆ |
| ಸಿದ್ಧತೆ | - | ತಯಾರಿ |
| ಸುಕೃತ | - | ಮಾಡಿದ ಒಳ್ಳೆಯ ಕೆಲಸ, ಪುಣ್ಯ |
| ಸುಚಿತ್ತ | - | ಒಳ್ಳೆಯ ಮನಸ್ಸು |
| ಸುಸೂತ್ರ | - | ತೊಡಕಿಲ್ಲದ,ತೊಂದರೆಯಿಲ್ಲದ |
| ಸೂಸಲು | - | ಹರಡಲು |
| ಸೆಡವು | - | ಹಟ |
| ಸೇಸೆ | - | ಆಶೀರ್ವಾದ ರೂಪದಲ್ಲಿ ತಲೆಯ ಮೇಲೆ ಹಾಕುವ ಅಕ್ಷತೆ |
| ಸೈರಣೆ | - | ಸಹನೆ |
| ಸೊಟ್ಟಾಗೆ | - | ವಕ್ರವಾಗು, ಕೊಂಕು |
| ಸೊಬಗಿನ | - | ಚೆಲುವಿನ |

| | | |
|---|---|---|
| ಸೊಲ್ಲು | - | ಮಾತು |
| ಸೋಗು | - | ನಟನೆ |
| ಸ್ವಗತ | - | ತನ್ನಲ್ಲಿ ತಾನೇ ಮಾತನಾಡಿಕೊಳ್ಳು, ಆತ್ಮಗತ |
| ಸ್ವಾಸ್ಥ್ಯ | - | ಸರಿಯಾದ ಸ್ಥಿತಿಯಲ್ಲಿರುವುದು, ಆರೋಗ್ಯ |
| ಸ್ವಾಹಾ ಮಾಡು | - | ನುಂಗು |
| ಹಂದರ | - | ಚಪ್ಪರ |
| ಹಂಬಲಿಸು | - | ಬಯಸು |
| ಹತಾಶೆ | - | ನಿರಾಶೆ ಹೊಂದಿದ, ಆಸೆಯಿಲ್ಲದ |
| ಹರಿದ್ವರ್ಣ | - | ಹಸಿರು ಬಣ್ಣ |
| ಹರ್ಷ | - | ಸಂತೋಷ |
| ಹಲ್ಲುಮಸೆ | - | ಕೋಪತಾಳು |
| ಹವಣು | - | ಪ್ರಯತ್ನ |
| ಹಸಾದ | - | ಪ್ರಸಾದ |
| ಹಾಯ್ಗುಳಿ | - | ಭೂತವು ಸಂಚರಿಸುವಾಗ ವಿಶ್ರಾಂತಿ ಪಡೆಯಲು ಕುಳಿತುಕೊಂಡ ಜಾಗ |
| ಹಾಲಾಹಲ | - | ಮಹಾವಿಷ |
| ಹೀನಾಯ | - | ನಿಕೃಷ್ಟ |
| ಹುರುಪು | - | ಉತ್ಸಾಹ |
| ಹುಸಿಕ | - | ಸುಳ್ಳುಗಾರ |
| ಹೂಡು | - | ಅಣಿಗೊಳಿಸು, ಜೋಡಿಸು |
| ಹೂಣಿಸು | - | ಜೋಡಿಸು |
| ಹೊಗರು | - | ಪ್ರಕಾಶಿಸು, ಹೊಳಪು |
| ಹೊತ್ತು | - | ಸಮಯ |
| ಹೊದರ | - | ರಾಶಿ |
| ಹೊನಲು | - | ಪ್ರವಾಹ |
| ಹೊನ್ನಾರು | - | ಮುಂಗಾರಿನಲ್ಲಿ ಮಾಡುವ ಮೊದಲ ಉಳುಮೆ |
| ಹೊಯ್ದಾಡು | - | ತೂಗಾಡು, ಅಲ್ಲಾಡು |
| ಹೊಲ್ಲ | - | ತಕ್ಕುದಲ್ಲದ್ದು |
| ಹೊಸಗು | - | ತಿಕ್ಕು, ಹಿಚುಕು |
| ಹೋರು | - | ಹೋರಾಡು |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in